Licence No. 60.
Licenced to Post without Prepayment.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 6-0-0.

ಸಂಪುಟ ೩೧ | ತಾರೀಖು ೭-೧೧-೧೯೫೫ನೇ ಶುಕ್ರವಾರ | ಸಂಚಿಕ ೨೨

ರಷ್ಯಾದಲ್ಲಿ ಕುಡಿತದ ಸಮಸ್ಯೆ.

[ಸುಪ್ರಸಿದ್ಧ ಬರಹಗಾರರಾದ ಮಿ. ಡೈಸನ್ ಕಾರ್ಟರ್ ಅವರ "ಸಿನ್ ಅಂಡ್ ಸೈನ್ಸ್" ಎಂಬ ಪುಸ್ತಕದ ಆಧಾರದ ಮೇಲೆ ಶ್ರೀ ಜೆ. ಎಲ್. ನಾರಾಯಣ ಅವರು ಸಂಗ್ರಹಿಸಿದ್ದು]

ಕುಡಿತವು ಒಂದು ನೈತಿಕ ಸಮಸ್ಯೆ ವೈಧಿಜ್ಞಾ ಮತ್ತು ಕಳ್ಳತನಗಳಷ್ಟೇ ಸಮಾಜಘಾತಕ ಸಮಸ್ಯೆ ಇದು. ಕುಡಿತದಿಂದ ಅನೇಕ ಬಟ್ಟೆಜಾಗಳಿಗೂ ರೋಗಗಳೂ ಉದ್ಭವಿಸುವುದೆಂಬುದು ನಿರ್ವಿವಾದವಾದದ್ದು. ವೈದ್ಯಾಧಿಕಾರಿಗಳು, ಪೋಲೀಸ್ ಅಧಿಕಾರಿಗಳು, ವೈದ್ಯರು, ಆರೋಗ್ಯಾಧಿಕಾರಿಗಳು, ಸೈನ್ಯನಾಯಕರು, ಸಮಾಜಸೇವಾ ಕಾರ್ಯಕರ್ತರು ಎಲ್ಲರೂ ಈ ವಿಚಾರವನ್ನು ಸವಿಸ್ತಾರವಾಗಿ ಚರ್ಚಿಸಬಲ್ಲರು. ಕುಡಿತದ ನಿಗ್ರಹನೆಯಂಗಿ ತನ್ನ ಜೀವನವೇ ಹಾಳು ಮಾಡಿಕೊಳ್ಳುವುದಲ್ಲದೆ ತನ್ನ ಸಂಸಾರಕ್ಕೆ, ಸಂಬಂಧಿಗಳ ಸಮಾಧಾನೋಪಸ್ಥಿತಿಯನ್ನೇ ಹಾಳುಮಾಡುತ್ತಾರೆ. ಈ ಒಂದು ಹಿರಿಯ ಸಮಸ್ಯೆಯನ್ನು ಪರಿಹರಿಸಿದ್ದೇ ಆದರೆ ಸಮಾಜದ ಇಂದಿನ ಅನೇಕ ರೋಗಗಳು ತಾನಾಗಿ ಹೊರಟಲ್ಲದಂತಾಗುತ್ತವೆ. ನಮ್ಮ ದೇಶದಲ್ಲಂತೂ ಈ ಸಮಸ್ಯೆ ಬೃಹದಾಕಾರವಾಗಿದೆ. ರಷ್ಯಾದೇಶದಲ್ಲಿ ಈ ಸಮಸ್ಯೆಯನ್ನು ಬಹು ತೃಪ್ತಿಕರವಾಗಿ ಪರಿಹರಿಸಿದ್ದಾರೆ. ಅವರು ಅನುಸರಿಸಿದ ರೀತಿನೀತಿಗಳನ್ನು ತಿಳಿಯುವುದ ಯೋಗ್ಯವಾಗಿದೆ.

ರಷ್ಯಾದಲ್ಲಿ ಕಳೆದ ಹಲವಾರು ಶತಮಾನಗಳಿಂದಲೂ ಕುಡಿತವು ಹೇರಳವಾಗಿತ್ತು. ದೊರೆಯಿಂದ ಹಿಡಿದು ಬೀದಿಯ ಭಿಕ್ಷುಕಾಯ ವರೆಗೆ ಎಲ್ಲರೂ ಮದ್ಯಪಾನ ಮಾಡುತ್ತಿದ್ದರು. ರಜೆ ದಿನಗಳಲ್ಲಿ ಕುಡಿದು ಮತ್ತರಾಗಿ ಬೀದಿಯಲ್ಲಿ ಬಿದ್ದಿರುತ್ತಿದ್ದ ಅನೇಕ ಸಭ್ಯಗೃಹಸ್ಥರನ್ನು ಕಾಣಬಹುದಿತ್ತು. ವೊಸ್ಕೃಸೆಂಗಿ-ಕೆರೆಯ (ತಾಯಿ ನೀರು ಎಂಬ ಕಾದಂಬರಿಯ ಮೊದಲ ಕೆಲವು ಪುಟಗಳಿಂದ ಇದು ಚೆನ್ನಾಗಿ ಪರಿಚಯವಾಗುತ್ತದೆ. ಆದರೆ ರಹಸ್ಯದ ಕ್ರಾಂತಿಯ ತರುವಾಯ ಅಲ್ಲಿ ಇದಿಯವನೇರೇ ಅಪರೂಪ. ಎಂದ ಮಾತ್ರಕ್ಕೆ ಮದ್ಯವೇ ರಾಷ್ಟ್ರದಲ್ಲಿಲ್ಲವೆಂದಲ್ಲ. ಈಗಲೂ ಸಾರ್ವಜನಿಕವಾಗಿ ಮದ್ಯದ ಪೂರೈಕೆ ವಿಪುಲವಾಗಿದೆ.

ಬೈಸ್ಥಿತ ರೀತಿಯಲ್ಲಿ ಈ ಸಮಸ್ಯೆಯನ್ನು ಎದುರಿಸಲು ಗರ್ಭ ರಷ್ಯ ಹಿಂದೆಯೇ ಪ್ರಯತ್ನ ನಡೆದಿದೆ. ಅಲ್ಲಿಯ ವರೆಗೆ ಯಾರೂ ಬೇಕಾದರೂ ನಡೆಸಬಹುದಾಗಿದ್ದ ಮದ್ಯಮಾರಾಟದ ಉದ್ಯಮವನ್ನು ಝಾರ್ ಸರ್ಕಾರವು ಕಾನೂನೇ ಪಹಿಸಿಕೊಂಡಿತು. ಇದರಿಂದಾಗಿ ಸರ್ಕಾರಕ್ಕೆ ವಿಪರೀತ ಆದಾಯ ಬಂತು. ಆದರೆ ತಹಬಂದಿಗೆ ತರಲಾಗದ ಮಟ್ಟದಲ್ಲಿ ಅನೇಕರಲ್ಲಿ ಅನಾರೋಗ್ಯಕರ ಚಟವಳಿಕೆಗಳು ಕಲಿಹಾಕಿದವು. ಸರ್ಕಾರ ಪ್ರಜೆಗಳ ಆರೋಗ್ಯವನ್ನು ಹಾಳುಮಾಡಿ ಆದಾಯ ಹೆಚ್ಚಿಸಬೇಕಾಯಿತು. ಬಿಕ್ಕಟ್ಟಿನ ಸಮಯದ ವೇಳೆ ಹೆಚ್ಚಿನ ತೆರಿಗೆ ವಿಧಿಸಲಾಯಿತು. ಸಾಮಾನ್ಯ ಪ್ರಜೆಗೆ ಕುಡಿತವು ಹೆಚ್ಚು ಹೆಚ್ಚುದಿಂದ ಮಾತ್ರ ಸಾಧ್ಯವಿತ್ತು. ಸರ್ಕಾರದ ಉತ್ಪತ್ತಿ ಬೆನ್ನಲ್ಲೇ ಇತ್ತು. ಜನ ತಮ್ಮ ಇತರೆ ಅನಿವಾರ್ಯತೆಗಳನ್ನೆಲ್ಲ ಬದಿಗೊತ್ತಿ ಕುಡಿಯುತ್ತಿದ್ದರು. ಹೆಚ್ಚಿನ ತೆರಿಗೆ ವಿಧಾಯಕದಿಂದ ಸರ್ಕಾರದ ಆದಾಯ ಹೆಚ್ಚುತ್ತಲೇ ಇತ್ತು. ಕುಡಿಯುವವರ ಸಂಖ್ಯೆ ಮಾತ್ರ ಕಡಿಮೆಯಾಗಲಿಲ್ಲ.

ಈ ಸಮಯದಲ್ಲಿ ಪಂಡಿಗಳು ಎಲ್ಲ ಮದ್ಯವರ್ಗಡಿಗಳನ್ನೂ ಮುಚ್ಚಿಸಬೇಕೆಂದು ಸರ್ಕಾರಕ್ಕೆ ಮೊರೆಯಿಟ್ಟರು; ಈ ಒತ್ತಾಯದಿಂದ ಲೈಸೆನ್ಸ್ ಪದ್ಧತಿ ಜಾರಿಗೆ ಬಂದಿತು. ಲೈಸೆನ್ಸ್ ಪದ್ಧತಿ ಜಾರಿಗೆ ಬಂದಲ್ಲಿಂದ ಮದ್ಯದ ಅಂಗಡಿಗಳನ್ನು ವಿಧಾಯಕವಾಗಿ ಮುಚ್ಚಲಾಯಿತು. ವ್ಯಾಪಾರಸ್ಥರು ತೀರ ಕಡಿಮೆ ಭಾಗ ಕಡಿಮೆಯಾದರು. ಕೊಳ್ಳುವವರ ಸಂಖ್ಯೆ ಮಾತ್ರ ಕಡಿಮೆಯಾಗಲಿಲ್ಲ.

ಕಳೆದ ಶತಮಾನದ ಅಂತ್ಯದಲ್ಲಿ ಕುಡಿತವನ್ನು ಬಿಡಿಸಲು ಜನರನ್ನು ನೇರವಾಗಿ ವೈದ್ಯಕೀಯರ್ಕಾಲು ಆರಂಭವಾಯಿತು. ಈ ಪ್ರಯತ್ನಗಳ, ಬರಹಗಳ ಮೂಲಕ ಈ ಪ್ರಚಾರದಿಂದ ಇದಾಗಿತು. ಈ ವರೆಗೆ ಕಾರ್ಯ ಭರದಿಂದ ಸಾಗಿತು. ಈ ವರೆಗೆ ಕಾರ್ಖಾನೆಗಳಲ್ಲಿ, ಎಸ್ಟೇಟುಗಳಲ್ಲಿ ಕೆಲಸಗಾರರಿಗೆ ಕಲಬೆನ ಒಂದು ಭಾಗವನ್ನು ಮದ್ಯದ ರೂಪದಲ್ಲಿ ಕೊಡುತ್ತಿದ್ದರು. ಸರ್ಕಾರವು ಇದನ್ನು ನಿಷೇಧಿಸಿ ಅದ್ದೆಹೊರಡಿಸಿತು. ಇದರಿಂದ ಪರಿಸ್ಥಿತಿ ಸುಧಾರಿಸಿದಂತಾಗಲಿಲ್ಲ. ಸಂಬಳದ ದಿನ ಕೆಲಸಗಾರನು ತನ್ನ ಎಲ್ಲ ಸಂಪಾದನೆಯನ್ನೂ ಪಕ್ಕದಲ್ಲಿದ್ದ ಮದ್ಯದಂಗಡಿಗೆ ಸುರಿಹುಲಾಕೊಡಗಿದ ಅನೇಕ ಕೆಟ್ಟಚಾಳಿಗಳು ದೇಶದಲ್ಲಿ ವಿಪರೀತವಾದುವು. ಕಾರ್ಖಾನೆಗಳಲ್ಲೂ ಕೆಲಸಗಾರನ ಕಾರ್ಯ ಸಾಮರ್ಥ್ಯ ದಿನೇ ದಿನೇ ಕಡಿಮೆಯಾಗುತ್ತ ಬಂತು. ಆಗ ತಾನೆ ಪ್ರಾರಂಭವಾಗಿದ್ದ ಹೊಸತನ ಯಂತ್ರಗಳಿಂದ ಕೂಡಿದ್ದ ಕೈಗಾರಿಕೋದ್ಯಮಗಳಿಗೆ ಭಂಗ ಬೆಟ್ಟು ಬಿತ್ತು. ಪುನಃ ರಾಷ್ಟ್ರಾದ್ಯಂತ ಮದ್ಯಪಾನನಿರೋಧ ಚಳುವಳಿ ಆರಂಭವಾಯಿತು. ಈ ಚಳುವಳಿಗೆ ಟಾಲ್‌ಸ್ಟಾಯ್ ಬಲಿಗರು ಹಿರಿಯ ಕೈಗಾರಿಕೋದ್ಯಮಿಗಳು, ಜಮೀನ್ದಾರರು.

ಈ ಚಳುವಳಿಯಿಂದಲೂ ಏನೂ ಪ್ರಯೋಜನ ಕಂಡುಬರಲಿಲ್ಲ. ಝಾರ್ ದೊರೆಯ ದಾಯಾದಿಯೊಬ್ಬ ಚಳುವಳಿಗೆ ನಾಯಕನಾಗಿ ನಿಂತ. ಹಿರಿಯ ಜಮೀನ್ದಾರನಾಗಿದ್ದ ಈತನ ಉತ್ಪತ್ತಿ ಜೀತಗಾರರ ಕುಡಿತದ ಫಲವಾಗಿ ಕಡಿಮೆಯಾಗಿತ್ತು. ಇದಕ್ಕಾಗಿ ಈತನೂ ಮದ್ಯ ಪಾನನಿರೋಧ ಚಳುವಳಿಗೆ ಬೆಂಬಲಿಗನಾದ ಈ ಕಾರ್ಯದಲ್ಲಿ ತೊಡಗಿದ್ದ ದೇಶದಲ್ಲಿನ ಅನೇಕ ಸಂಸ್ಥೆಗಳನ್ನು ಒಂದುಗೂಡಿಸಿದ. ತನ್ನ ಮತ್ತು ಸ್ನೇಹಿತರ ನೆರವಿನಿಂದ ಈ ಕಾರ್ಯಕ್ಕಾಗಿ ಒಂದು ಅಪಾರ ನಿಧಿಯನ್ನೇ ಸೃಷ್ಟಿಸಿದ. ಶಿಕ್ಷಿತ ಕೆಲಸಗಾರರು ಒಂದು ನಿರ್ದೋಷ ರೀತಿಯಲ್ಲಿ ಜನಕ್ಕೆ ಬೋಧನೆ ಮಾಡಲು ಪ್ರಾರಂಭಿಸಿದರು. ಒಂದು ದೊಡ್ಡ ಪುಸ್ತಕ ಭಂಡಾರವನ್ನು ಸ್ಥಾಪಿಸಿಕೊಂಡರು. ಅನೇಕ ಖರೀದಿಗಾರರ, ಬೋಧಕರು ಶಿಕ್ಷಕರು ನೇಮಕವಾಯಿತು. ಕುಡಿತಕ್ಕೆ ಸಂಬಂಧಿಸಿದ ಅನೇಕ ಅಂಕಿ ಅಂಶಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಉದ್ಯಾನವನಗಳಲ್ಲಿ ಮನೋರಂಜನಾ ಕೇಂದ್ರಗಳಲ್ಲಿ, ದೊಡ್ಡ ದೊಡ್ಡ ಹೋಟೆಲುಗಳಲ್ಲಿ, ನಾಟಕಶಾಲೆಗಳಲ್ಲಿ ಜನನೇರುವ ಎಲ್ಲೆಡೆಗಳಲ್ಲೂ ಇವರ ಕಾರ್ಯ ಅವ್ಯಾಹತವಾಗಿ ಸಾಗಿತ್ತು. ಗ್ರಾಮೀಣರಲ್ಲಿ ಮನಸ್ಕೊನಗರ ಒಂದರಲ್ಲೆ ಎಂಡೂವರೆ ಪಶ ಲಕ್ಷ ಚಾಲಕರುಗಳನ್ನು ಇವರು ಸಂಚರ್ಮಾಡಿದ್ದರು! ಈ ಸಂಸ್ಥೆಯ ಲಿ ಅನೇಕರಿಗೆ ಕೆಲಸ ದೊರಕಿತು. ನಿರುದ್ಯೋಗ ಸಮಸ್ಯೆ ಸ್ವಲ್ಪವಾಟ್ಟಿಗೆ ಪರಿಹಾರವಾಯಿತೇ ವಿನಾ ಕುಡಿತವನ್ನು ಕಡಿಮೆಮಾಡುವ ದಿಕ್ಕಿನಲ್ಲಿ ಇವರ ಸಾಧನೆ ಏನೂ ಇಲ್ಲವಾಯಿತು. ೧೯೧೪ರಲ್ಲಿ ಈ ಚಳುವಳಿ ತನ್ನ ಉನ್ನತ ಶಿಖರವನ್ನು ಮುಟ್ಟಿತು. ಈಗಾಗಲೆ ದೇಶದ ಜನರಲ್ಲಿ ರಾಜಕೀಯ ಜಾಗೃತಿ ಮೂಡಿಬಂದಿತ್ತು. ರಾಷ್ಟ್ರದ ಕಿರುಕುಳ್ಳ ತಾಕತ್ತು ಗಹಿಸಲಸಾಧ್ಯವಾಗಿತ್ತು. ಮಾಸ್ಕೋವಿನ ಗವರ್ನರ್ ಜನರೆಲ್ಲರೂ, ಹಿರಿಯ ಬಂಡವಾಳಗಾರರೂ ಆಗಿದ್ದ ಗ್ರಾಂಡ್ ಡ್ಯೂಕ್ ಸರ್ಜಿಯಸ್ ಎಂಬುವರು ಈ ಚಳುವಳಿಗೆ ಬೆಂಬಲಿಗರಾದರು. ರಾಜಮನೆತನದ ಅನೇಕರನ್ನು ತಮ್ಮೊಡನೆ ಕರೆತಂದರು. ಈ ವೈಕಿ ಹಲವರು ಮದ್ಯಪಾನದ ಪೂರ್ಣ ನಿಷೇಧವನ್ನು ಪ್ರತಿಪಾದಿಸಿದರು. ಇದ ಕ್ಕೇ ಹೆಚ್ಚಿನ ಪ್ರಧಾನಯತ್ನ ಮತ್ತು ಹಣ ಸಾಕಷ್ಟುಳ್ಳ ಮತ್ರೊಂದು ಚಳುವಳಿಯನ್ನು ಯೋಚಿಸಲೂ ಸಾಧ್ಯವಿಲ್ಲ. ಆದರೆ ಸಾರ್ವಜನಿಕರ ಪ್ರತಿಕ್ರಿಯೆ ಏನು? ಒಂದು ಭಾರಿ ಸಭೆಯಲ್ಲಿ ಮಾತನಾಡುತ್ತಿದ್ದ ಡ್ಯೂಕರ ಮೇಲೆ ನಾಡುಬಾಂಬೊಂದನ್ನು ಎಸೆದರು. ಈ ಒಂದು ಪ್ರಕರಣಾನಂತರ ಚಳುವಳಿಯೇ ಮಣ್ಣು ಪಾಲಾಯಿತು. ಈ ಚಳುವಳಿಯ ನಾಯಕರೆಲ್ಲ ಜನತೆಯ ವಿರುದ್ಧ ಪಕ್ಷಕ್ಕೆ ಸೇರಿಕೊಂಡರು.

ಮಹಾಯುದ್ಧ ಪ್ರಾರಂಭವಾದಾಗ ಸರ್ಕಾರದ ಉತ್ಪತ್ತಿಯಲ್ಲಿ ಶೇಖಡಾಭಾಗ ಅಬ್ಕಾರಿಯಿಂದ ಸೇರಬರುತ್ತಿತ್ತು. ಇನ್ನೂ ಹೆಚ್ಚಿನ ವಿಚಾರವೆಂದರೆ ಪಾತಪಿ ದೊಡ್ಡ ಕಾರ್ಖಾನೆಗಳೆ ಮತ್ತು ಸರ್ಕಾರಿ ಹೊಣೆಗಾರಿಕೆ ವ್ಯಾಪಾರಗಳಿಂದ ನೇರವಾಗಿ ೧೯೧೭ರ ವರೆಗೆ ಮದ್ಯದ ಪೆಚ್ಚು ಶೇಕಡ ೫೦೦ ರಷ್ಟು ಹೆಚ್ಚಿತು!!

ಆಗ ಈ ಕಾರ್ಯಕ್ಕಾಗಿ ಮತ್ರೊಂದೂ ಸಂಸ್ಥೆ ಉದ್ಭವಿಸಿತು. 'ದಿ ಸೊಸೈಟಿ ಫಾರ್ ಫೈಟಿಂಗ್ ಆಲ್ಕೊಹಾಲ್ ಇನ್ ಕಿಬ್ಬಿಕ್ ಸ್ಕೂಲ್ಸ್' ಎಂಬ ಸಂಸ್ಥೆ ರಾಷ್ಟ್ರವ್ಯಾಪಕ ಒಂದು ಸರ್ವೆ ನಡೆಸಿತು. ಮೂಸ್ಕೂ ಪಟ್ಟಣ ಒಂದರಲ್ಲೆ ಶೇಕಡ ತೊಭತ್ತು ಮಂದಿ ಕುಡಿಯುವವರಿದ್ದಾರೆಂಬುದ್ದ ಹೊರಬಿತ್ತು. ೧೯೧೦ರಲ್ಲಿ ಈ ಸಮಸ್ಯೆಯನ್ನು ಪರಿಶೀಲಿಸಲು ಅಖಿಲ ರಷ್ಯಾ ಸಮ್ಮೇಳನ ಒಂದನ್ನು ಕರೆಯಲಾಯಿತು ಈ ಸಮ್ಮೇಳನಕ್ಕೆ ಕಾರ್ಮಿಕ ಸಭೆಗಳ ಬೆಂಬಲವೂ ದೊರಕಿತು. ಮದ್ಯದಂಗಡಿಗಳನ್ನು ಗೊತ್ತಾದ ಕಾಲದಲ್ಲಿ ಮಾತ್ರ ತೆರೆದಿರಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯವನ್ನು ಮಾಡಲಾಯಿತು. ಯುದ್ಧ ನಡೆಯುತ್ತಿತ್ತು. ಇಂಗ್ಲೆಂಡ್ ಪ್ರಾನ್ಸ್‌ಗಳಿಗೆ ಜನ ಮೆಲ್ಲಿ ಬರಸಿದ ಝಾರ್ ಸರ್ಕಾರ ಒಂದು ದೊಡ್ಡ ನಿರ್ಣಯ ಕಟ್ಟಬೇಕಾಯಿತು. ಇದಕ್ಕಾಗಿ ಕೈಗಾರಿಕೋದ್ಯಮಿಗಳ ನೆರವನ್ನು ಸರ್ಕಾರಂ ಬೇಡಿತು ಪ್ರತಿಯಾಗಿ ಅಬ್ಕಾರಿ ತೆರಿಗೆಯನ್ನು ಇಡಿಯೆ ಮಾಡುವಂತೆ ಅವರು ಒತ್ತಾಯಪಡಿಸಿದರು. ೧೯೧೪ರಲ್ಲಿ ಅಬ್ಕಾರಿ ತೆರಿಗೆಯನ್ನು ಹೆಚ್ಚಿಸುವದಿಲ್ಲವೆಂದು ಸರ್ಕಾರ ಘೋಷಿಸಿತು. ಯುದ್ಧ ಆರಂಭವಾದ ವರ್ಷ ಇದು. ಶೈನ್ಯಕ್ಕೆ ಸುರಿದಾವ ರೈಫಲ್ ಕಾಡತೂಸುಗಳಿಗೆ ಇದ್ದರು ಕೊಲಿಗಳಿಂದ ಕಾರ್ಖಾನೆಗಳಿಂದ ಉತ್ಪತ್ತಿ ಕಡಿಮೆಯಾಯಿತ ರಷ್ಟದ ಜನ್ಮನ್ನ ಹೆಚ್ಚುಬೇಕಾದ ಕಾಲದಲ್ಲಿ ಕೆಳಮಟ್ಟವಾಗತೊಡಗಿತು. ೧೯೧೬ನೇ ಜುಲೈ ಒಂದನೇ ದಿನ ಎಲ್ಲಿಂಗೂ ಆಶ್ಚರ್ಯವೇಟ್ಟಾಗುವಂತೆ ಮದ್ಯಪಾನ ನಿರೋಧಾಜ್ಞೆ ಸರ್ಕಾರದಿಂದ ಹೊರಬಿತ್ತು. ಈ ಆಜ್ಞೆಯನ್ನು ಕ್ರೂರವಾಗಿಯೂ, ಪೂರ್ಣವಾಗಿಯೂ ರಾಷ್ಟ್ರವ್ಯಾಪ್ತ ಜಾರಿಗೆ ತರಲಾಯಿತು. ಮದ್ಯದಂಗಡಿಗಳ ನಾಶ, ಶೇಖರಿಸಿಟ್ಟಿದ್ದ ಮದ್ಯವನ್ನು ಚೆಲ್ಲಿವುದು ತಡೆಯಲ್ಲಿದೆ ನಡೆಯಿತು ಯಾರಿಗೂ ಇದನ್ನು ವಿರೋಧಿಸುವ ಧೈರ್ಯವಿಲ್ಲವಿತ ಇತಿಹಾಸದಲ್ಲಿ ಇದೊಂದೇ ಬಾರಿ ಈ ರೀತಿಯ ನಿರೋಧ ಕಾರ್ಯಕ್ರಮ ನಡೆದಿರುವುದೆಂದು ಧಾರಾಳವಾಗಿ ಹೇಳಬಹುದು. ಒಂದುನೂರು ಅರವತ್ತು ದಶಲಕ್ಷ ಜನ ಮೂಕರಂತೆ ಜೂವ ಪ್ರತಿಕ್ರಿಯೆಯೂ ಇಲ್ಲದೆ ಇದ್ದರು. ಯಾವ ಕಾನೂನನ್ನೂ ಮೊದಲೆ ಬಯಸಿ ಆಜ್ಞೆಯಿಂದಲೇ ಝಾರ್ ಸರ್ಕಾರ ಈ ಕಾರ್ಯಮಾಡಿತ್ತು. ೧೯೧೬ರ ಉತ್ತರಾರ್ಧದಲ್ಲೂ ೧೯೧೭ರ ಪೂರ್ವಾರ್ಧದಲ್ಲೂ ಪೂರ್ಣ ಪಾನನಿರೋಧ ಜಾರಿಯಲ್ಲಿತ್ತು. ಈ ಕಾಲದಲ್ಲಿ ವಯಸ್ಕರೂ, ಮಕ್ಕಳೂ, ಆರೋಗ್ಯದೃಷ್ಟಿಯಲ್ಲಿ ಸುಧಾರಿಸಿದ್ದನ್ನು ಕಾಣಬಹುದಿತ್ತೆಂದು ಪಾ

ಪನಿರೋಧ ಖಂಡಿತವಾಗಿಯೂ ಜಾರಿಯಾಗಿತ.

ಆದರೆ, ಈ ಪರಿಸ್ಥಿತಿ ಬಹುಕಾಲ ಮುಂದುವರಿಯಲಿಲ್ಲ. ಯುದ್ಧ ಕಾಲದಲ್ಲಿ ದೇಶದಲ್ಲಿ ಹಸಿವು ಅಭಾವಗಳು ತಲೆ ಹಾಕಿದುವು. ವಿಚಿತ್ರ ರೋಗಗಳು ಕಾಡಿಸಿಕೊಂಡವು. ಈ ಕಷ್ಟಕಾರ್ಪಣ್ಯಗಳನ್ನು ಮರೆಯುವುದಕ್ಕಾಗಿ ಎಲ್ಲರ ಗಮನವು ಮಧ್ಯದ ಸಿನೆಮಾ ಕಡೆಗೆ ಒಮ್ಮೆಲೆ ಹರಿಯಿತು. ಎಲ್ಲೂ ಮಧ್ಯಪಾನಿಯರು ಪ್ರಾರಂಭಿಸಿದರು. ರೈತರು ಜೀವನಾಧಾರದ ಅಹಾರ ಪದಾರ್ಥಗಳನ್ನು ಬೆಳೆಯುವುದು ಬಿಟ್ಟು ಮಧ್ಯತಯಾರಿಕೆಗೆ ಕೂಲಿವಾದ ಗೆಡ್ಡೆಗಳನ್ನು ಬೆಳೆಸಲು ಪ್ರಾರಂಭಿಸಿದರು. ಪವಿತ್ರವಾದ ಕಳಾಜಗಳೆಲ್ಲ ಮಧ್ಯದ ಹಂಡಗಳಾದವು. ಈ ಅಕ್ರಮ ಮದ್ಯ ಎಷ್ಟು ಬೇಗ ಶಯಾರಾಗುತ್ತಿತ್ತೊ ಅಷ್ಟೇ ಬೇಗ ಬಿಕರಿಯಾಗುತ್ತಿತ್ತು. ಕೆಲವೇ ತಿಂಗಳ ಗಳಲ್ಲಿ ರಾಷ್ಟ್ರವ್ಯಾಪ್ತಿ ಮದ್ಯದ ಕಾಲವೆ ಹುಟ್ಟಿ ಕೊಡಿಗಿತು. ಈ ರೀತಿ ತಯಾರಾದ ಮದ್ಯ ವಿಷಪ್ರಾಯವಾಗಿತ್ತು. ಶರೀರ ದೈತ್ಯ ಕೆಲವರಿಗೇ ಹಾನಿಕಾರಿಯಾಗಿದ್ದು ಹು ಈ ಅಕ್ರಮ ಮದ್ಯ ಎಂತಹ ಗೃಹಿತಾಯ ಶರೀರವನ್ನೂ ಹಾಳು ಮಾಡುತ್ತಿತ್ತು. ಪಾನ ನಿರೋಧವು–ಬಂದೂಕದ ತೊಡೆಯಿಂದ ಜಾರಿಗೆ ಬಂದದ್ದೂ–ಪೂರ್ಣ ವಿಫಲವಾಯಿತ. ಬಿಬ್ಬಿಬ್ಬಿನೆ ಕುಡಿಕನಿದ್ದನೆಯೇ ಮದ್ಯ ಶಯಾರಿ ಕಾರ್ಖಾನೆ ಹಾಗೂ ಸಾರಂಟಿ ಗೃಹವಾಗಿ ಏರ್ಪಟ್ಟಿತು. ಮಲಗವ ಮುಂಜಿ ಕುಡಿತ; ಊಟದೊಂದಿಗೆ ಕುಡಿತ; ತಿಂಡಿಯೊಂದಿಗೆ ಕುಡಿತ. ಕೆಲಸಕ್ಕೆ ಹೋಗುವಾಗಲೂ ಕಾರ್ಯಾರ್ಥವಾ ಮಂದಿರಕ್ಕೆ ಹೋಗುವಾಗಲೂ ಕುಡಿದು ಮತ್ತರಾಗಿಯೇ ಹೊಗತ್ತಿದ್ದರು ಜನ. ತಾಯಂದಿರು ಮಕ್ಕಳಿಗೆ ಪ್ರೀತಿಯಿಂದ ಮದ್ಯ ಕುಡಿಸುತ್ತಿದ್ದರು.

ರ್ಗಾಲದ ಅಂತರ ನಂತರ ಈ ಅಕ್ರಮ ಮದ್ಯಸೇವನೆ ವಿಪರೀತವಾಯಿತ. ಅಹಾರ ಬೆಳೆ ಕಡಿಮೆಯಾದ್ದರಿಂದ ಕಾಸ್ಟು ಸುಭಯ ತಲೆದೊರಿತು. ಹೊಸ ಸರಕಾರ ಸ್ಥಾಪನೆಯಾಯಿತು. ಈ ಸರಕಾರ ಈ ಸ್ಥಿತಿಯನ್ನು ಹೇಗೆ ಎದುರಿಸಿತ ಎಂಬುದು ಪರಿಶೀಲನಾರ್ಹವಾಗಿದೆ. ಮೊದಲು ಆರೋಗ್ಯದೃಷ್ಟಿಯಿಂದ ಈ ಅಕ್ರಮ ಮದ್ಯ ತಯಾರಿಕೆಯನ್ನು ನಿಲ್ಲಿಸಬೇಕಾಗಿತ್ತು. ಆದಕ್ಕಾಗಿ ಸರಕಾರವು ಮದ್ಯ ತಯಾರಿಕೆಯನ್ನು ಕಾರ್ಖಾನೆಗಳು ಮಾತ್ರವೆಂತೆ ಅಡಗಿಮತಿ ಕಾಯ್ದೆಯ. ಈ ವಿಚಾರದಲ್ಲಿ ಸಂಗ್ರಹಿಸಿದ್ದ ಅನೇಕ ಅಂಕಿ ಅಂಶಗಳು ಸರಕಾರದ ಕೈಯಲ್ಲಿದ್ದವು. ಲೆವಿನ್, ಸ್ಟಾಲಿನ್, ಮಂತಾದ ನಾಯಕರು ವೈಯಕ್ತಿಕ ಆದಕ್ಕೆ ಯನ್ನು ನಿಷೇಧಿಸಿದರು. ವಿಜ್ಞಾನಿಗಳ ಹಾಗೂ ರಾಜಕಾರಣಿಗಳ ಪಡೆ ಸೇರಿ ಈ ವಿಚಾರದಲ್ಲಿ ತೀವ್ರ ಸಲಹೆ ಕೊಡಬೇಕೆಂದು ದಿನಂಪ್ರತಿ ಮಾರಿಕೊಡಿದರು. ಈ ಪಜ್ಞರು ಜಾಕ್ಷಣೀಯ ಪದಕ್ಕೆ ಎಲ್ಲ ದೃಷ್ಟಿಕೋಣಗಳಿಂದಲೂ ಪರಿಶೀಲಿಸಿದರು. ಕಾಫೂರು ಮಾಲಕ ಜಾಕ್ಷಣೀಯ ಪದಕ್ಕಿಲ್ಲ. ಜಾಕ್ಷಣ ಅಳ್ಳ ಎಂದು ಅಭಿಪ್ರಾಯಪಟ್ಟರು. ಜನತೆಗೆ ಶಿಕ್ಷಣಕೊಟ್ಟು ಇದನ್ನು ಸಾಧಿಸಬಹುದೆಂಬುದು ಬರಿಯ ಭ್ರಾಂತಿ. ವರ್ಗಗಳ ಮೂಲಕ ಈ ಕಾರ್ಯ ಸಾಧ್ಯವಾಗದು ಏಕೆಂದರೆ ಮತಗಳೇ ಅಗ್ನಿ ಹವಗಟ್ಟಿದ್ದವು. ಮನಕಾರ್ಯಜ್ಞರಿಂದ ವೈದ್ಯಕೀಯ ಪ್ರಯೋಗದ ಮೂಲಕ ಇದನ್ನು ತಪ್ಪಿಸಬಹುದೇ ಎಂದು ಯೋಚಿಸಿದಲ್ಲಿ ಪ್ರಸಂಶದ ಲಿರುವ ಎಲ್ಲ ವಸ್ತೋವೈದ್ಯರು ಮೊಸ್ಕೊ ನಗರ ಒಂದರ ಜನಕ್ಕೇ ಪ್ರಯೋಗ ಮಾಡಲು ಸಾಧ್ಯವಾಗಲಾರದು. ಸರಕಾರಿ ಹೆಣ್ಣುಮಕ್ಕಳ ಸಹ ಈಡಿತನನ್ನು ಕಡಿಮೆ ಮಾಡಲು ಸಾಧಿಕವಾಗಲಾರದು ಈ ಎಲ್ಲ ವಿಚಾರಗಳಿಗೂ ಸಾಕಷ್ಟು ಅನುಭವ ಹಿಂದಿಯೇ ದೊರಕಿತ್ತು. ಈ ಸಭೆಯಲ್ಲಿ ಬಹು ಮಂದಿ ಈ ವಿಷಯ ಕುಡಿಯುವುದಿಲ್ಲವೆಂದು ಅವರ ಕಷ್ಟನಷ್ಟಗಳು ಜೀವನದಿಂದಲೇ ಹೋತು ಕುಡಿತದಿಂದ ಕಸ್ಟ ಜೀವನ ಬಂತ ಎಂಬುದು ಸುಳ್ಳು. ಉತ್ಕೃಷ್ಟ ಜೀವನ ನಡೆಯಲು ಜನರಿಗೆ ಎಷ್ಟು ಸಾಧ್ಯವಾಗುವುದೋ ಅಂದೇ ಕುಡಿತದ ಪ್ರಶ್ನೆ ಇತ್ಯರ್ಥವಾದೀತು, ಎಂದು ಅಭಿಪ್ರಾಯಪಟ್ಟರು.

ಸರಕಾರವು ಅಕ್ರಮ ಮದ್ಯ ತಯಾರಿ ಕಾರಕಾರರನ್ನೆಲ್ಲಿ ವಿಚಾರಣೆಮಾಡಬೇಕೆಂದು ನಿರ್ಧರಿಸಿತು. ಅದಕ್ಕಾಗಿ ಅವರು ಸೆಳೆಯಂಡಿರುವ ಕ್ರಮ ಸ್ವಾರಸ್ಯವಾಗಿದೆ. ಮೊದಲನೆಯದಾಗಿ ಅಬ್ಕಾರಿ ಕೆರಗೆಯ ನ್ನು ರದ್ದುಮಾಡಲಾಯಿತು. ಇದರಿಂದ ಮದ್ಯದ ಬೆಲೆಯು ಇದ್ದಕ್ಕಿದಂತೆ ಇಳಿದು ಹೋಯಿತು ಬೆಲೆ ಇಳಿಸಿದ ದಿನ ಅನಧಿಕೃತ ರಾಷ್ಟ್ರೀಯ ರಜಾದಿನವಾಗಿ ಘೋಷಿಸಲ್ಪಟ್ಟಿತು ಅಂದಿನಿಂದಲೇ ಅಕ್ರಮ ಮದ್ಯತಯಾರಕಾರರು ದಿವಾಳಿ ಎದ್ದು ಹೆಸರಲ್ಲದಂತಾದರು. ಇದಾದ ಕೆಲವು ದಿನಗಳನಂತರ ಕಾರ್ಖಾನೆಗಳ ಒಳಯಲ್ಲೂ ರಜಾ ದಿನಗಳಲ್ಲೂ ಸಂಕಳ ದಿನಗಳಲ್ಲೂ, ಮಧ್ಯದ ಪೂರೈಕೆ ನಿಷೇಧ ಕಾನೂನು ಹೊರಡಿಸಿದರು. ಮುಕ್ಕಳಿಗೆ ಮದ್ಯ ಕೊಟ್ಟವರಿಗೆ ಕಠಿಣಶಿಕ್ಷೆ ವಿಧಿಸಲಾಗುತ್ತಿತ್ತು. ಇದರೊಡನೆ ಮದ್ಯದಿಂದ ಮೆದುಳು ಮತ್ತು ದೇಹದ ಮೆಲುಂಟಾಗುವ ಪರಿಣಾಮವನ್ನು ಜನರಿಗೆ ಪ್ರಚುರಪಡಿಸುತ್ತ ಬರಲಾಯಿತು ಕುಡಿಯಬೇಡಿರಿ ಎಂಬ ಪ್ರಚಾರ ಮಾಡಲೇ ಇಲ್ಲ. ಕುಡುಕರ ಕಜ್ಜಿ ಹೆಚ್ಚಿದ ಕಡೆ ಸರಕಾರ ಹೊಸ ನೂರಾರು ಔಷಧಿಯನ್ನು ಸ್ಥಾಪಿಸಿತ. ಕುಡಿದ ವ್ಯಕ್ತರಾಗಿ ಬಿದ್ದಿದ್ದವರನ್ನು ಪೋಲೀಸರು ಕೂಡಲೇ ಈ ಕೇಂದ್ರಗಳಿಗೆ ಒಯ್ಯುತ್ತಿದ್ದರು. ಕುಡುಕನಿಗೆ ಜ್ಞಾನವೂರಿಸಿ ವೈದ್ಯಪರೀಕ್ಷೆಯನಂತರ ವಿಶ್ರಾಂತಿ ಚಿಕಿತ್ಸೆಯಲ್ಲಿ ಒಂದೆರಡು ದಿನಗಳ ಕಾಲ ಈ ಕೇಂದ್ರದಲ್ಲಿಯೇ ಅತನು ಳಿಯಬೇಕಾಗಿತ್ತು. ಅತನ ವಿಳಾಸ ತಿಳಿದನಂತರ ಕಾರ್ಮಿಕ ಸಂಘದ ಪದಕ್ಕನಾಗಿ ಗರಿಷ್ಠ ಸಂಘಕ್ಕೆ ಕೂಡಲೇ ಅತನ ಹೆಸರನ್ನು ತಿಳಿಸುತ್ತಿದ್ದರು. ಸಂಘದವರು ಕಾರ್ಖಾನೆಯ ಬಳಿ ಒಂದು ಸೊಡ್ಡಪ್ಪೋಟೊ ಅಥವಾ ವ್ಯಂಗ ಚಿತ್ರದೊಂದಿಗೆ ಅವನನ್ನು ಸ್ವಾಗತಿಸುತ್ತಿದ್ದರು. ಇಂತಹ ಕ್ರಮಗಳನಗಳು ಪುನರಾವರ್ತಿಯಾಗಬೇಕಾಗಿದ್ದ ಕಾರ್ಮಿಕರಿಗೆ ತಿಳಿಯಪಡಿಸಲಾಗಿತ್ತು ಇದ್ದರು. ಈ ವಿಧಾನ ಬಹು ಫಲಕ್ರದವಾಗಿ ನಡೆಯಿತು ಸ್ನೇಹಿತರ ಮುಂದೆ ಸಹೋದ್ಯೋಗಿಗಳ ಮುಂದೆ ಅವಮಾನ ಯಾರಿಗೂ ತಡೆಯಲಾಗದು.

ತಿಂಡಿ ಸವೇತ ಸೇವಿಸಿದ ನಂತರದಿಂದ ಹೆಚ್ಚು ಹಾನಿಯಿಲ್ಲವೆಂದೂ ಬರಿ ಮದ್ಯ ಮಾತ್ರ ದೇಹಕ್ಕೆ ಹಾನಿಕರವೆಂದೂ ವೈದ್ಯರು ಅಭಿಪ್ರಾಯಪಟ್ಟಿದ್ದರ ಮೇಲೆ ಸರಕಾರ ಹೊಟೇಲುಗಳಲ್ಲಿ ತಿಂಡಿಯೊಡನೆ ಮದ್ಯ ಕೊಡುವುದನ್ನು ಪ್ರೋತ್ಸಾಹಿಸಿತು. ತಿಂಡಿ ಜೊತೆಗೆ ಹೆಚ್ಚಿಗೆ ಕುಡಿಯುಲು ಸಾಧ್ಯವಿರಲಿಲ್ಲ. ಇದರಿಂದ ಕುಡುಕರೂ ಹೆಚ್ಚು ಕುಡಿಯಲು ಅನುಕೂಲವಾಗುತ್ತಿರಲಿಲ್ಲ. ಈ ರೀತಿಯ ನಾನಾ ಕಾರ್ಯಗಳಿಂದ ಸರಕಾರ ತನ್ನ ಗುರಿಯನ್ನು ಮುಟ್ಟಿತು. ಇಂದಿಗೂ ರಷ್ಯಾದಲ್ಲಿ ಈ ಸಮಸ್ಯೆಯು ವಿಚಾರವಾಗಿ ಭಿನ್ನಭಿಪ್ರಾಯವುಳ್ಳವರಿದ್ದಾರೆ ನಿಯಮಿತ ವಿಧಿಗಳಿಗನುಗುಣವಾಗಿ ಕುಡಿತವು ಅಪ್ಪ ಅಪಾಯಕಾರಿಯಲ್ಲವೆಂಬ ವಾದಿಗಳೂ ಇದ್ದಾರೆ. ಆದರೂ ಕುಡಿತದ ಸಮಸ್ಯೆ ರಷ್ಯಾದಲ್ಲಿ ಪರಿಹರಿಸಲ್ಪಟ್ಟಿದೆಯೆಂದೇ ಹೇಳಬೇಕು.

"ನವಯುಗ"

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :—ವೀರಾಜಪೇಟೆ.

ತಾಪೆ :—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಂಡಿಕೇರಿ.

ಸಪ್ಲೈ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ಕಾಲ್ಕುಲೇಟರ್‌ಗಳು ಮತ್ತು ಪಿಕ್ಕಾಲುಗಳು.
2. 12ನೇ ನಂಬರಿನ ಒಂಟಿ ಮತ್ತು ಜೋಡು ಹೊಳಪಿನ ಕೋವಿಗಳು.
3. 12, 16 ಮತ್ತು 20ನೇ ನಂಬರಿನ ತೋಟಿಗಳು, ಕೋವಿ ಮದ್ದು ಮತ್ತು ಕೇಪುಗಳು.
4. 9" × 4" ಮತ್ತು 8" × 4" ಳಚ್ಚಿನ ತೊಲಿಗಳು (Girders)
5. 8' × 3' × 24 (Gage) ಳಚ್ಚಿನ ತಗಡುಗಳು.
6. 1½" × ⅛" ಅಗಲದ ಪಟ್ಟಿಗಳು (Spring steel flates)
7. ಅಳತೆ ಮತ್ತು ತಿಕ್ಕಲಿ ಗಿಡಗಳಿಗೆ ನೈ ಮಾಡುವ ಪಂಪುಗಳು.
8. ಕೃಷಿಯಾಧಾರಿತ ಎಲ್ಲಾ ತರಹ ಪರಿಕರಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅಕ್ಕಪಕ್ಕದ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಪೋಲೀಸ್ ಟೀಂ ವಿಶೇಷ ಪರ್ಮಿಟ್ 'Special purchase permit' ಪಡೆದುಕೊಳ್ಳಬೇಕಾಗಿದೆ.

ಎಂ. ಎಸ್. ಸೋಮಯ್ಯ (ಸೆ. ಕಾರ್ಯದರ್ಶಿ)

ಪಿ. ಬಿ. ಪೆಳ್ಳಪ್ಪ (ಪ್ರೆಸಿಡೆಂಟ್.)

ವಿಜ್ಞಾನದ ಕಿಡಿಗಳು.

ಪರ್ಜನ್ಯ ಪುನೂರಾದಲ್ಲಿ ಅಸಾಧಾರಣ ಪ್ರತಿಭಾವಂತನಾದ ಚೆರಂಪುಜೆ ಎಂಬ ಕನ್ನಡ ಊರು ಜಗತ್ತಿನಲ್ಲಿ ಪ್ರಥಮ ಸ್ಥಾನ ಪಡೆದಿರುತ್ತದೆ. ಇಲ್ಲಿ ವರ್ಷಕ್ಕೆ ಸರಾಸರಿ ಲಕ್ಷ ಅಂಗುಲ (ಇಂಚು)ಗಳಷ್ಟು ಮಳೆ ಬೀಳುತ್ತದೆ. ಗಿಲಿಗಿಲಿಗಿಲಿ ಅದರ ಪುನೂರಾದ್ಯ ೯೦೬ ಅಂಗುಲ್ಕೆ ಮುಟ್ಟಿತ್ತು; ಅತ್ಯಧಿಕ ವರ್ಷ ಜುಲೈ ಒಂದೇ ತಿಂಗಳಲ್ಲಿ ೩೫೬ ಅಂಗುಲಗಳಷ್ಟು ಹೋಗಿತ್ತು. ಒಂದಾ ವರ್ಷ ಜಲಪ್ರವಾಹದ ಒತ್ತಡದಿಂದ ೩೫೦ ಟನ್ ಭಾರದ ಒಂದು ದೊಡ್ಡ ಬಂಡೆಗಲ್ಲು ಮಗುಚಿ ಒಂದೇ ರಾತ್ರಿಯೊಳಗೆ ೩೦೦ ಅಡಿ ಅಂತರಕ್ಕೆ ಹೋಗಿ ನಿಂತಿತ್ತು. ಪರ್ಜನ್ಯ ಪರ್ಜನ್ಯ ಪುನೂರಾದಲ್ಲಿ ಎರಡನೇ ಸ್ಥಾನವೆ ಶಂಕರ ಸಾಗರದ ಹತ್ತಾಯ ದ್ವೀಪ ಸಮೂಹಕ್ಕೆ ಕೂಡಿದ ಕ್ಯಾವಿ ಎಂಬಲ್ಲೀ ಪಕ್ಕೆ ಹೋಗುತ್ತದೆ. ಇಲ್ಲಿ ಮಳೆಗಾಲದ ಕೊನೆಯ ವಾರಗಳಲ್ಲಿ ಸುಮಾರು ೬೦೦ ಅಂಗುಲಗಳಷ್ಟು ಮಳೆ ಬೀಳುತ್ತದೆ. ಮೂರನೇ ಸ್ಥಾನವು ಫ್ರೆಂಚ್ ವಿಹಾರ ಪ್ರದೇಶದ (ಇತ್ಯಟೋರಿಯಲ್) ಅಫ್ರಿಕೆಗೆ ಸೇರುತ್ತದೆ. ಇಲ್ಲಿ ಕೆಮೆರೂನ್ ಶಿಖರದ ಬಡಪ್ರದೇಶವು ದೇಬುಡ್ಕಾ ಎಂಬ ಊರಲ್ಲಿ ವರ್ಷಕ್ಕೆ ಸರಾಸರಿ ೪೭೫ ಅಂಗುಲಗಳಷ್ಟು ಮಳೆ ಬೀಳುತ್ತದೆ.

ಇದಕ್ಕೆ ವಿರುದ್ಧವಾದ ಮರುಭೂಮಿ ಪ್ರದೇಶಗಳಿಹೇನೆಂದರೆ ದಕ್ಷಿಣ ಅಮೇರಿಕದ ಪೆರು ದೇಶದ ಸುಮಾರು ೧೩೦೦ ಮೈಲಿ ಉದ್ದ ಮತ್ತು ೧೦ ರಿಂದ ೧೫೦ ಮೈಲಿ ಅಗಲವಾದ ಕರಾವಳಿ ಪ್ರದೇಶದಲ್ಲಿ ನಿನೇನೂ ಮಳೆ ಬೀಳುವುದಿಲ್ಲ.

ಜಗತ್ತಿನಲ್ಲಿ ಅತ್ಯುನ್ನತವಾದ ಶಿಖರಗಳು ದಕ್ಷಿಣ ಅಮೇರಿಕೆಯ ನೆನೆಪುಆ ಬೆಶರ್ಲಿರಿಂದ ಎಂಬುದು ಫಾಲ್ಸ್ (ಶಿಖರಗಳು) ಎಂಬುದು. ಅತಿಹೆಚ್ಚಿನ ನೀರು ಎರಡನೇ ಮಟ್ಟಿಗಳಲ್ಲಿ ಬೀಳುತ್ತದೆ. ಮೊದಲನೇ ಮಟ್ಟಿನಲ್ಲಿ ೨೬೫೫ ಮತ್ತು ಎರಡನೆಯದರ ೨೬೪ ಅಡಿ ಹೀಗೆ ಒಟ್ಟಿಗೆ ೬೦೦ ಅಡಿ ಎತ್ತರದಿಂದ ಜಲ ಪ್ರವಾಹ ಕೆಳಗೆ ಬೀಳುತ್ತದೆ

ಪಾತಿಸ್ಸಾನ ಮತ್ತು ರಕ್ತಿಯಾ ಪ್ರಾಣಾಣ್ಯತ ಅಜಿಲ್ ಎಂಬ ಪ್ರದೇಶದ ಪರ್ವತ ಪಂಕ್ತಿಯ ಎತ್ತರ ೨೫೦೦ ಅಡಿಯ ಮೈಲು ಸಿ ಸ್ಪೀಡಾಸ್ ಪಾಪಾಸ್ ಪಿಂಚ ಅಳ್ಳಾಳ್ಳಾ ಸ್ಥಾನಕ್ಕೆ ಸೇರಿದ ಒಂದು ಚಿಕ್ಕ ಪ್ರದೇಶ ಮುಂಚೆ. ಇಲ್ಲಿ ಎಲ್ಲಿಯೂ ಅಳ್ಳಿ ಸಿಂಗ ಪುಲ್ಲಿಪಾಸ್ಯಕಂತ ಅಲ್ಲಿಯೂ ಪಾಪಾಸಿಯು ಎಷ್ಟೋ ಕಡೆಯಲ್ಲಿಗಳಿಂದ ಅಳ್ಳಪ್ಪು ಅಪಡೆಯೋಗಿಯೇ ಬೀದಿಯಲ್ಲಾಗಿ.

ಮಂತ್ರಿಗಳು ನ್ಯಾಯಶೀಲರಾಗಬೇಕು.

ಶ್ರೀ ಕಕ್ಕಿಲ್ಲಾಯರ ಭಾಷಣ.

ರೇಂಜ್ ಮೇಲ್ಜಾತಿಯ ಪ್ರಮುಖರೂ, ಪ್ರಸಿದ್ಧ ಸಮ್ಮಾನಿ ಸಲಸಗಾರರೆಲ್ಲಾ ಬ್ಲೂರೂ ಆದ ಶ್ರೀ ಬಿ ಕಕ್ಕಿಲ್ಲಾಯರು ತಾ ೩೦-೧೦-೫೨ ರಂದು ಪೊನ್ನಂಪೇಟೆಯಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡಿದರು. ಶ್ರೀ ಸಿ. ಬಿ. ಮೋಣಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಅವರ ಭಾಷಣದಲ್ಲಿ ಕೆಲವು ವಿಚಾರಗಳನ್ನು ಇಲ್ಲಿ ಕೊಡಲಾಗಿದೆ.

(೧) ಇತ್ತೀಚೆ ಜನತಾ ಸಭೆಗೆ ಪದ ಸ್ಕರಿಸಿರುವ ಶ್ರೀ ಎನ್. ಸೋಮಯ್ಯನವರು ಕೇಂದ್ರ ಶಾಸನ ಸಭೆಗೆ ಕಾರ್ಯ ಕಲಾಪಗಳ ವಿಚಾರದಲ್ಲಿ ಒದಿದ ಲೇಖನ ಒಂದನ್ನು ನೋಡಿದೆನು. ಅದರಲ್ಲಿ ಭಾರತದ ಕಮ್ಯೂನಿಸ್ಟ್ ಪಕ್ಷವು ಸರಕಾರದ ಪ್ರತಿಯೊಂದು ಕಲಸಕ್ಕೂ ವಿರೋಧ ಮಾಡುತ್ತಿದೆಯೆಂದೂ ಜನತಾ ಸಭೆಯಲ್ಲಿ ಕಾಶ್ಮೀರ ಪ್ರಶ್ನೆಯ ಬಗ್ಗೆ ಭಾರತ ಸರಕಾರದ ನೀತಿಗೆ ಮಾತ್ರ ಅವರು ಬೆಂಬಲವಿತ್ತಿರುವರೇ ವಿನಾ ಪ್ರತಿ ಒಂದನ್ನು ವಿರೋಧಿಸಿದುದಿಲ್ಲವೆಂದೂ, ಕಾಶ್ಮೀರಕ್ಕೆ ಬೆಂಬಲ ಕೊಟ್ಟರೆಂಬುದಾದರೂ ಏಷ್ಟೀರದ ಗಡಿಯಲ್ಲಿಯೇ ಇರುವ ಮತ್ತೊಂದು ಜೈನಾಗಳೆದ್ದು ಕಾಶ್ಮೀರವನ್ನು ಅಪಾಳಿಗೆ ಆಹುತಿ ಮಾಡುವ ದೃಷ್ಟಿಯಿಂದಿರಬಹುದೆಂದೂ ಬರೆದಿರುವರು. ಯಾರೇ ಆದರೂ ಕೂಡ ಬರೆಯುವಾಗ ಸ್ವಲ್ಪ ಆಲೋಚಿಸಬೇಕು. ಕಮ್ಯೂನಿಸ್ಟ್ ಪಕ್ಷವು ಪಂಡಿತ ನೆಹರೂರವರ ಕಾಶ್ಮೀರ ನೀತಿಗೆ ಬೆಂಬಲ ಕೊಟ್ಟು ಕಾಶ್ಮೀರವನ್ನು ರಷ್ಯಾ, ಚೀನಾಗಳ ಅಂಕೆಗೆ ಒಳಪಡಿಸಲಿಚ್ಛಿಸುವರೆಂದಾದರೆ ಈ ನೀತಿಯ ಜನಕರಾದ ನೆಹರೂ ಸರಕಾರವು ರಷ್ಯಾ, ಚೀನಾಗಳ ಏಜೆಂಟರಾಗಿರುವರೆಂದು ಹೇಳಿದಂತಾಗಲಿಲ್ಲವೇ? ಕಮ್ಯೂನಿಸ್ಟ್ ಪಕ್ಷವು ಎಲ್ಲಿ ಸಾಮಾನ್ಯ ಜನರ ಹಿತ ಅಡಗಿರುವೆಯೋ ಅದಕ್ಕೆ ಬೆಂಬಲವಿಯುವುದು. ಕಾಶ್ಮೀರದಲ್ಲಿ ರಾಜರನ್ನು ಗದ್ದಿಗೆಯಿಂದ ಇಳಿಸಿ ಜನರೇ ವರಿಷ್ಠ ಅಧಿಕಾರಿಯನ್ನು ಆರಿಸುವ ನೀತಿಯನ್ನೂ, ಜಮೀನ್ದಾರರನ್ನು ನಿರ್ಮೂಲಗೊಳಿಸಿ ಪಡಿಸಿದ ಭೂಮಿತಾಣ ಹಗ್ಗಿಯನ್ನೂ ಕಮ್ಯೂನಿಸ್ಟ್ ಪಕ್ಷ ಒಪ್ಪಿದೆ. ಆದಕ್ಕಾಗಿ ಬೆಂಬಲವನ್ನಿತ್ತಿದೆಯೇ ವಿನಾ ಶ್ರೀ ಸೋವಣ್ಣನವರು ಹಗುರ ಬುದ್ಧಿಯ ಕಲ್ಪನೆಗಾಗಿ ಅಲ್ಲ.

(೨) ಹಿಂದೂಸ್ಥಾನ್ಲಿ ಮಹಾತ್ಮಾ ಗಾಂಧಿಯವರ ಜಯಂತಿಯ ದಿನ ಸಾಮೂಹಿಕ ವಿಕಾಸ ಯೋಜನೆಯೊಂದನ್ನು ಇಂಡಿಯಾ ಸರಕಾರವು ಜಾರಿಯಲ್ಲಿ ತಂದಿದೆ. ಈ ಯೋಜನೆಯು ಹಲವು ಕೋಟಿ ರೂಪಾಯಿಗಳಲ್ಲಿ ಗೌಲು ನಾಲ್ಕು ಕೋಟಿಯುಷ್ಟನ್ನು ಮಾತ್ರ ಅಮೇರಿಕಾ ಕೊಡುತ್ತಿದೆ. ಆದರೆ ಅವರ ಹಿತಚಿಂತನೆ ಮಾತ್ರ ಬಲವಾಗಿದೆ. ಅವರ ತಜ್ಞರು, ಅವರ ಸಲಹೆಯಂತೆ ಇದು ನಡೆಯುತ್ತಿದೆ. ೯೦ ವರ್ಷದ ವರೆಗೆ ಅದರ ಬ್ರಾಹ್ಮಣನನ್ನು ನಿಷ್ಠಾವಂತನೆನಿಸಿ ಬಾಳಿದ ಮಹಾತ್ಮನ ಕಡೆಗೆ ಒಂದು ನೋಟವನ್ನು ತಿಂದು ಕುಲಗೆಡಿಸಿಕೊಂಡಂತೆ ನಮ್ಮ ಕಾಂಗ್ರೆಸ್ ಪರಕಾಲದ ನೀತಿಯೊಂದಿಗೆ ಈ ಯೋಜನೆಯು ಗುರಿಯೇನು? ಗ್ರಾಮಗಳಲ್ಲಿ ರಸ್ತೆ, ಶಾಲೆ, ಆಸ್ಪತ್ರೆ, ಶುಚಿತ್ವ ಮೊದಲಾದವನ್ನು ಕೆಟ್ಟೆಗಂದಂತೆ! ಇದಕ್ಕಾಗಿ ಅಮೇರಿಕನರೂ ಬರಬೇಕೆ? ನಾವು ಬ್ರಿಟಿಷರನ್ನು ಭಾರತದಿಂದ ಓಡಿಸಿದ್ದು ಹಳ್ಳಿಗೆ ರಸ್ತೆಯನ್ನೂ, ಶಾಲೆಯನ್ನೂ, ಆಸ್ಪತ್ರೆಯನ್ನೂ ಮಾಡಲಿಲ್ಲವೆಂದೆ? ಹಾಗಾದರೆ ಅಮೇರಿಕದವರನ್ನು ಇಂದು ಆಹ್ವಾನಿಸುವರ ಅರ್ಥವೇನು?

(೩) ಪಾರ್ಲಿಮೆಂಟಿನಲ್ಲಿ ಸಂಜೋತಾ ಕೃಷಿಲಾಸಿಯವರು ಒಂದು ಪ್ರಶ್ನೆ ಕೇಳಿದರು. ಹಿಂದೂಸ್ಥಾನವು ಸ್ವತಂತ್ರ ಪ್ರಜಾರಾಜ್ಯವಾಗಿದ್ದು ಇಲ್ಲಿ ಬ್ರಿಟಿಷರ ಸೈನ್ಯಕ್ಕೆ ಫೋರ್ಸ್ ಜನರನ್ನು ಸೇರಿಸಲು ಅನುಕೂಲವಾಗುತ್ತಿದೆಯೇ ಎಂಬುದೇ ಪ್ರಶ್ನೆಯಾಗಿತ್ತು. ಪಂಡಿತ ನೆಹರೂರವರು ಸ್ಪಷ್ಟವಾಗಿ ಇಲ್ಲವೆಂದರು. ಆದರೆ ಕಮ್ಯೂನಿಸ್ಟ್ ಪಕ್ಷವು ಹಾಗೆ ಫೋರ್ಸ್‌ರನ್ನು ಸೇರಿಸುತ್ತಿದ್ದ ಫೋರ್ಸ್ ಪುರ ಪಾಜಿಯ ಚಿತ್ರ, ಸೇರಿಸುವ ವ್ಯವಸ್ಥೆಗಳ ವಿವರವನ್ನೂ, ಚಿತ್ರಪಠಗಳನ್ನೂ ಸಂಗ್ರಹಿಸಿ ಸಭೆಯ ಮುಂದಿಟ್ಟು ಅವರ ಪ್ರಶ್ನೆಗೆ ಉತ್ತರವನ್ನು ಕೊಡಬೇಕಾಯಿತು. ಕಳೆದ ಜನರಲ್ ಚುನಾವಣೆಯ ಸಮಯದಲ್ಲೂ ನಡೆಯುತ್ತಿರುವ ಈ ಸೈನ್ಯ ಶೇಖರಣೆ ಭಾರತದ ಪ್ರಧಾನಮಂತ್ರಿಗೆ ಗೊತ್ತಿರದೆ ಇರುತ್ತಾರೆಗೆ ಸ್ಪೂರ್ತಿರಬೇಕ? ಎತ್ತಕ್ಕಾಗಿ ಈ ಸೈನ್ಯ ಸಂಗ್ರಹ? ಹಿಂದೂಸ್ಥಾನದಲ್ಲಿ ಸ್ವಾತಂತ್ರ್ಯ ಕಾಪಾಡಿಕೊಳ್ಳಲು ಅಲ್ಲಿಯ ಜನರು ಕೈಕೊಂಡ ಸ್ವಾತಂತ್ರ್ಯ ಸಂಗ್ರಾಮವನ್ನೆ ಮುಂದಿಟ್ಟಿಕೊಂಡು ಬ್ರಿಟೀಷರು ನೆರವಿಗೆ ಈ ಸೈನ್ಯ. ಮಲಯಾದ್ವೀಪ ಭಾರತದಿಂದ ಕೋದ ನಮ್ಮ ಸಹೋದರರೇ ಇದ್ದಾರೆ. ನಮ್ಮ ಸಹೋದರರ ಸ್ವಾತಂತ್ರ್ಯ ಯುದ್ಧವನ್ನು ಮುನಿಯಲು ಅವರ ಕೂಲೆಮಾಡಲು ನಮ್ಮ ಸೋದರರನ್ನೆ ಕಳುಹಿಸುವ ಈ ನೀತಿಗೆ ಏನನ್ನಬೇಕು? ನೆಹರೂ ಸರಕಾರವು ನಮಗೆ ಅನ್ನ ಬಟ್ಟೆ ಕೊಡದಿದ್ದರೆ ಕ್ಷಮಿಸಬಹುದು. ಆದರೆ ಈ ಸೋದರರ ಕೊಲೆಯ ಅಪರಾಧಕ್ಕಾಗಿ ಕ್ಷಮಿಸಲಾಗುವುದಿಲ್ಲ.

(೪) ಕೊಡಗಿನಲ್ಲಿ ಕಾಂಗ್ರೆಸ್ ಸರಕಾರ ತಂಗ ಆಗಿದೆ. ಇದ್ದರಿಂದ ಅದರ ಬಗ್ಗೆ ನಮಗೆ ಹುರುಪಿರಬಹುದು. ಆದರೆ ದಕ್ಷಿಣ ಕನ್ನಡದವರಾದ ನಮಗೆ ಈ ಸರಕಾರದ ಅನುಭವ ಕಳೆದ ಐದಾರು ವರ್ಷಗಳಿಂದಿದೆ. ಅಲ್ಲಿಯ ಜನರಿಗೆ ಕಾಂಗ್ರೆಸಿನ ನೀತಿ, ರೀತಿ ಸಾಕಾಗಿದೆ. ಐದು ವರ್ಷಗಳ ನಂತರ ಇವು ಅದೇ ಅಭಿಪ್ರಾಯಕ್ಕೆ ಬರಬಹುದು. ನಮ್ಮ ಮಂತ್ರಿಗಳಾದ ಮಲ್ಲಪ್ಪ, ಪೂಜಪ್ಪ ಇವರುಗಳು ದಕ್ಷರಿರಬಹುದು. ಆದರೆ ಕಾಂಗ್ರೆಸಿನ ನೀತಿಗೆ ವಿರುದ್ಧ ವರ್ತಿಸುವದು ಅವರಿಗೆ ಸಾಧ್ಯವಿಲ್ಲ. ಕಾಂಗ್ರೆಸ್ ಅಧಿಕಾರ ಹಿಡಿದಿರುವಾಗ ಅವರೂ ಹಾಗೆಯೇ ವರ್ತಿಸಬೇಕಾಗುತ್ತದೆ. ನಾನು ಕೊಡಗಿಗೆ ಬಂದ ಈ ಎರಡು ದಿನಗಳಲ್ಲಿ ನನಗೆ ಬೊರೆತ ವಾರ್ತೆಗಳ ಮೇರೆ ಇಲ್ಲಿರುವ ಸ್ಥಿತಿ ಭಿನ್ನವಾಗಿಲ್ಲವೆಂದು ಗೊತ್ತಾಗಿದೆ. ಯಾವ ಪಕ್ಷವೇ ಆಗಲಿ ಮಂತ್ರಿಗಳಾದ ನೇಲೆ ಅವರು ಪಕ್ಷಕ್ಕೆ ಸೇರಿದವರಲ್ಲ. ಅವರು ಆ ಅಧಿಕಾರ ಇರುವ ವರೆಗೆ ಸರ್ವರ ಹಿತಕ್ಕಾಗಿ ನೇಮಿಸಲ್ಪಟ್ಟವರು. ಇದರ ದೃಷ್ಟಿಯಲ್ಲಿ ಅತನು ಕಾಂಗ್ರೇಸಿನವ, ಈತನು ವಿರೋಧ ಪಕ್ಷದವ ಎಂದಿ ಬಾಧ್ಯ ಆದರೆ ಇಲ್ಲಿ ಮಂತ್ರಿಗಳು ಕಾಂಗ್ರೆಸ್ ಪಕ್ಷದವರಾಗಿಯೂ ಕಾಂಗ್ರೆಸಿನ ಕೆಲಸಗಾರರು ಸರಕಾರದವರಾಗಿಯೂ ಕೆಲಸ ಮಾಡುತ್ತಿರುವಂತೆ ತೋರುತ್ತಿದೆ. ಇವರು ನೇಮಿಸಿರುವ ವಿಡ್ ಹಾಕ್ ಸಮಿತಿಯವರ ವಿಶ್ವಾಸಕ್ಕೆ ಪಾತ್ರವಲ್ಲದಿರುವ ದನಿಗೆ ಬೆಕಾದ ಸಾಲ ದೊರೆಯದೆ ಹೋದ ನಿದರ್ಶನಗಳು ಕಿಡಿಯಬಹುದಿವೆ. ಇದು ನಿಜವಾದರೆ ಇದು ಪ್ರಜಾ ಪ್ರಭುತ್ವದಲ್ಲಿ ಕಂಡಾ ಪರಕಾರಕ್ಕೆ ಹೆಚ್ಚು ದಿನ ಬಾಳುವ ಅಧಿಕಾರವಿಲ್ಲ. ಆ-ಥಿ- ಸರಕಾರವನ್ನು ಕೆಡಿಸ್ಬೇಗಿಯ ಬೇಕಾದುದು ಕರ್ತವ್ಯ

(೫) ಕೊಡಗಿನವರು ಹೆಚ್ಚು ಸಂಖ್ಯೆಯಲ್ಲಿ ಗಾಂಧಿಯವರಿಂದು ಆದರೆ ಇಂಡಿಯವರಲ್ಲಿ ರೂ ಸಂಪನ್ಮರಲ್ಲ ಕಸ್ತೂರಿರಂಗ ರೈತರೂ, ತೋಟದ ಮಾಲೀಕರೂ ಬೇಕಾದಷ್ಟಿದ್ದಾರೆ. ಅವರ ಹಿತಕ್ಕೆ ಸಾಕಷ್ಟು ಕೆಲಸವಾಗಬೇಕು. ಇತ್ತೆಯ ಜಿಲ್ಲಾ ವೆಜಿಸ್ಟ್ರೇಟರು ಭಾರತದ ರಾಜ್ಯಪಟ್ಟಣಯಂತೆ ಕೆಲಸ ಮಾಡುವ ಬ್ರಿಜ್ಯಬ್ಬರಾಗಿ ಸಂಬಳ ಹೊಂದಿರುತ್ತಿರುವವರು. ಅಂಥಾವರು ತೋಟದ ಮೇನೇಜರುಗಳಿಗೂ, ಇತರರಿಗೂ ಗುಪ್ತಪತ್ರ ಬರೆದು ತೋಟದ ಕೆಲಸಗಾರರು ಪೂಜಾಯನಿಯನ್ನಗಳನ್ನು ಕೊಡದಂತೆ ಎಚ್ಚರ ವಹಿಸಬೇಕೆಂದು ಸೂಚಿಸಿರುವರಂತೆ. ಅಂಥಾ ಸಂಘಗಳನ್ನು ಕಟ್ಟಿ ಕಷ್ಟಕ್ಕೆ ಬಿದ್ದವರಿಗೆ ಹೋರಾಡುವದು ಪ್ರತಿಯೊಬ್ಬ ಕೆಲಸಗಾರನ ಮೂಲ ಭೂತ ಹಕ್ಕಾಗಿದೆ. ಇಂಥಾ ಹಕ್ಕನ್ನು ನಮ್ಮ ರಾಜ್ಯಪಟ್ಟಣ ಕೊಟ್ಟಿದೆ. ಅಂಥಾ ದಕ್ಕೆ ವಿರುದ್ಧವಾಗಿ ಈ ಜಿಲ್ಲಾ ವೆಜಿಸ್ಟ್ರೇಟರು ಬರೆದಿರುವ ಪತ್ರದ ನಕಲೊಂದನ್ನು ಯಾರಾದರೂ ನಮಗೆ ಕಳಹಿಸಿಕೊಟ್ಟರೆ ಇದು ಬಗ್ಗೆ ನಮ್ಮ ಗೇನು ಮಾಡಲು ಸಾಧ್ಯವೆಂಬುದನ್ನು ನೋಡುತ್ತಿದ್ದೆವು.

(೬) ಕೆಲವು ದಿನಗಳಿಗೆ ಹಿಂದೆ ಕರ್ನಾಟಕ ಪ್ರಾದೇಶಿಕ ಕಾಂಗ್ರೆಸಿನಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಅವರ ಜೊತೆಗಾರರು ಇಲ್ಲೇಸ್ಥಳದಲ್ಲಿ ಭಾಷಣ ಮಾಡಿಗರಂತೆ. ಆ ಭಾಷಣದಲ್ಲಿ ಸಾಮ್ಯವಾದಿಗಳಾದ ನಮ್ಮನ್ನು ಅವಮಾನಿಸಿದ್ದಾರೆ. ಅವರು ಹೆದರಲ್ಲಿನ ಮಾತುಗಾರರು. ಕೇಂದ್ರ ಜನಶಾಸಭೆಯಲ್ಲಿ ಮೊನ್ನೆಯಾಗಿ ಕರ್ನಾಟಕ ಪ್ರಾಂತವಾಗಬೇಕು. ಕಾಂಗ್ರೆಸು ಒಪ್ಪಿದ ತತ್ವವದು ಎಂದು ಮಂತಾಗಿ ಉದ್ದ ಭಾಷಣ ಮಾಡಿದರು. ಆದರೆ ಓಟು ತೆಗೆಯುವಾಗ ಕರ್ನಾಟಕ ಪ್ರಾಂತ ಬೇಡವೆಂದು ಓಟು ಕೊಟ್ಟರು. ಅವರು ಸ್ವಂತ ಅಭಿಪ್ರಾಯದಿಂದ ವರ್ತಿಸುವದು ಸಾಧ್ಯವಿಲ್ಲ. ತಮ್ಮ ಅಭಿಪ್ರಾಯವನ್ನು ಬಾಯಿ ಬಿಟ್ಟು ಒಡಬಡಿಬಹುದಾದರೂ ಕೊಟ್ಟಾಗ್ಗೆ ಬಂದಾಗ ತಮ್ಮವರಿಂದ ಈ ಮಾಡಿಸಬೇಕೆಂದೆ ಮಾಡಬೇಕಾದವರಿದ್ದಾರೆ.

Office of the Coorg Provincial Co-operative Marketing Federation Limited, Virajpet.

TENDERS.

The undersigned invites sealed tenders for the clearance of iron and steel materials, agricultural implements and cement from rail head and sea at Tellichery and transport of the same to the godowns of the Coorg Provincial Co operative Marketing Federation both at Virajpet and Mercara.

The rates should be quoted per ton.

The last date for the receipt of tenders will be 20-11-1952.

Further details can be had from the office of the institution.

P. L. BELLIA PA,
President.

For Sale.

WILLY'S JEEP

Recently reconditioned by Messrs SIMPSON & CO., LTD. Engine, Tyres and General Condition-immediate. Inspection arranged on request Price Rs. 4,500/- Correspondence KODAGU PRESS MERCARA.

Office of the President, Mercara Municipal office, Mercara the 30th October, 1952.

TENDER NOTICE.

CONSTRUCTION OF A TOWN HALL

Sealed tenders will be received by the under signed in the Mercara Municipal Office, Mercara Coorg, for the construction of a TOWN HALL of about Rs. 1,20,000 in value. Intending contractors should furnish their rates in a sealed cover as to reach the under signed not later than 5 P. M. on 17th November, 1952. Plans and other records pertaining to the work can be perused in the Mercara Municipal Office during working hours any day on or before the 17th November, 1952.

P. A. MOHIDEEN,
President.

ಕೊಡಗು

ತಾ. ೭-೧೧-೧೯೬೩ನೇ ಶುಕ್ರವಾರ

ಬಡವನ ಹಿತ.

ಬಡವನ ಉದ್ಧಾರವಾಗಬೇಕು; ಆತನ ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ ದೊರೆಯುವಂತಾಗಬೇಕು. ಈ ಆಧುನಿಕ ಆಡು ಬರದ ಕೈಗಾರಿಕೆ, ಯೋಜನೆಗಳಿಂದ ಬಡ ಜನರಿಗೆ ಹೆಚ್ಚಿನ ಪ್ರಯೋಜನವಾಗುತ್ತಿಲ್ಲ. ಅದ್ದರಿಂದ ವಿಕೇಂದ್ರೀಕರಣ ಪದ್ಧತಿಯಿಂದ ಭಾರತದ ಸರ್ವಾಂಗೀಣ ಉನ್ನತಿಯನ್ನು ಸಾಧಿಸಬೇಕೆಂದು ಗಾಂಧಿ ಪಂಥದ ಮುಂದಾಳುಗಳು ಹೇಳಿದರೆ ಅದು ಐನೂರು ವರ್ಷಗಳ ಹಿಂದಿನ ವಿಚಾರವೆಂದು ಆಧುನಿಕ ನಾಗರೀಕತೆಯ ಭಕ್ತರು ಹೇಳುತ್ತಾರೆ. ಮೊನ್ನೆಯಂದು ಬೀದಾಸ್ಪದ ಒಂದು ಹಳ್ಳಿಯಲ್ಲಿ ಮಾತಾಡುತ್ತಾ ಶ್ರೀ ವಿನೋಬಭಾವೆಯವರು ಹದಿನೈದು ವರ್ಷಗಳ ನಂತರ ನಿಮಗೆ ಉತ್ತಮ ಆಹಾರವನ್ನು ಕೊಡುವೆನೆಂದು ಹೇಳಿ ಪ್ರಯೋಜನವಿಲ್ಲ. ಪ್ರತಿಯೊಬ್ಬನಿಗೂ ಆಹಾರ, ಬಟ್ಟೆ ದೊರೆಯುವದಾದರೆ ನಾನು ಐನೂರು ವರ್ಷಗಳ ಹಿಂದಿನ ಯುಗಕ್ಕೆ ಹೋಗಲು ಸಿದ್ಧನಿದ್ದೇನೆ' ಎಂದು ಹೇಳಿದರು. ಉದ್ಯೋಗದ ಜೋಜನೆ, ಭೂಸುಧಾರಣೆ ಇಲ್ಲವೇ ಹೆಚ್ಚು ನಳ್ಳದ ನಂತರವೂ ಕಲ್ಪನೆಯ ರಜನೆಗಳಿಂದ ಇನ್ನು ಬಡತನವಲ್ಲಿ ತೊಳಲುತ್ತಿರುವವರಿಗೆ ತೃಪ್ತಿಯೂಗಲಾರದು ಆ ಪ್ರಾಂತದಲ್ಲಿ ಕೆಲವು ಕೋಟಿ ಖರ್ಚಿದ ದೊಡ್ಡ ಕಾರ್ಖಾನೆಗಳನ್ನಾಗಲೀ, ಇಲ್ಲವೇ ಬೇರೆ ಯೋಜನೆಯನ್ನಾಗಲೀ ಮಾಡಿ ಪ್ರಯೋಜನವಿಲ್ಲ. ಭಾರತಖಂಡದ ೬೫ ಕೋಟಿ ಜನರ ೫೦ ಕೋಟಿ ಕೈಗಳಿಗೆ ಕೆಲಸ ಒದಗಿಸಬೇಕು. ಇದು ಕೇಂದ್ರೀಕೃತ ಉದ್ಯಮಗಳಿಂದ ಆಗಲಾರದು. ಇದು ಸರಕಾರ ಮಾಡುತ್ತಿರುವ ಯೋಜನೆ, ಕಾರ್ಯಕಲಾಪಗಳು ಶ್ರೀಮಂತರ ಹಿತಕ್ಕೇ ಪೂರಕವಾಗಿವೆ. ಸರ್ವ ಯೋಜನೆಗಳಲ್ಲೂ ಮೊದಲು ಶ್ರೀಮಂತರ, ನಂತರ ಮಧ್ಯಮ ವರ್ಗದವರ ಅದರ ನಂತರ ಬಡವರ ಹಿತ ಸಾಧನೆಯ ಗುರಿ ಅಡಗಿದೆ. ಆದರೆ ರಾಷ್ಟ್ರದ ಸರ್ವ ಉನ್ನತಿ, ಯೋಜನೆಗಳೂ ಬಡವನನ್ನು ಕೇಂದ್ರವಾಗಿರಿಸಿ ಆತನ ಹಿತವನ್ನೆ ಪ್ರಧಾನ ಕರ್ತವ್ಯವಾಗಿ ಗಣಿಸಬೇಕು. ಮಹಾತ್ಮಗಾಂಧಿಯವರ ಪ್ರತಿ ಕಾರ್ಯಕಲಾಪವೂ ದರಿದ್ರನಾರಾಯಣನ ಸುತ್ತ ನಡೆಯುತ್ತಿತ್ತು. ಈ ದೃಷ್ಟಿಯಿಟ್ಟು ವರ್ತಿಸದ ಯಾವ ಯೋಜನೆಯಿಂದಲೂ ಪ್ರಯೋಜನವಾಗದು ಎಂದು ಗಾಂಧಿಜಿಯವರ ಜನರಿಗೆ ಬೇಕಾಗುವನಕ್ಕಿಂತಾ ಹೆಚ್ಚಾದ ಆದಾಯವನ್ನು ಒಬ್ಬನು ಕಾರ್ಖಾನೆಯಿಟ್ಟು ತುಂಬಿಸಿದರೂ ಅದು ಆತನಲ್ಲಿ ಕೇಂದ್ರೀಕರಿಸಲ್ಪಟ್ಟ ಉನ್ನತವಾದ ಕಾರಣ ಆತನ ಇಚ್ಛೆ ಅನಿಚ್ಛೆಯ ಮೇಲೆ ಹೊಂದಿಕೊಂಡಿದ್ದು ಬಹು ಮತದವರು ಬಿತ್ತಲಿ ಇರಬೇಕಾದ ಪ್ರಸಂಗ ವಿದ್ದೇ ಇದೆ. ಆದ್ದರಿಂದ ವಿಕೇಂದ್ರೀಕರಣವೇ ಇಂದಿನ ಸರ್ವಕಷ್ಟಕ್ಕೆ ನಿವಾರಣೋಪಾಯವೆಂಬುದನ್ನು ಸರಕಾರಗಳು ಗಮನಿಸಬೇಕು.

ವರ್ತಮಾನ.

ಶ್ರೀ ಎಲ್. ಸತ್ಯನಾರಾಯಣರಾಯರನ್ನು ಅ. ಭಾ. ಸ್ವೊಡಕ್ಸನ್ ಆಫೀಸರರಾಗಿ ನೇಮಿಸಿ ಅವರ ಬದಲು ಶ್ರೀ ಎ. ಎನ್. ಗಣಪತಿಯವರನ್ನು ಮಡಿಕೇರಿಯ ಎಗ್ರಿಕಲ್ಚರಲ್ ಡೆಮೊನ್‌ಸ್ಟ್ರೇಟರರಾಗಿ ನೇಮಿಸಿರುವರು ಆವರ ಬದಲು ಶ್ರೀ ಕೆ. ಎಸ್ ಅಪ್ಪಯ್ಯನವರು ಎಗ್ರಿಕಲ್ಚರ್ ಇನ್ಸ್‌ಪೆಕ್ಟರಾಗಿ ನೇಮಿಸಲ್ಪಟ್ಟಿರುವರು.

ಆಸ್ಪತ್ರೆಯ ಕಾಯಿಲಸ್ಥರಿಗೆ ರಕ್ತದಾನ ಮಾಡಲಿರುವ ಸಾರ್ವಜನಿಕ ಮಹಿಳೆಯರು ಮತ್ತು ಮಹಿಳೆಯರು ತಮ್ಮ ರಕ್ತದಾನ ಮಾಡಿ ರೋಗಿಗಳ ಜೀವ ಉಳಿಸುವ ಉಪಕಾರ ಮಾಡಬೇಕೆಂದೂ ಹೆಚ್ಚಿನ ವಿವರಗಳನ್ನು ಸಿವಿಲ್ ಸರ್ಜನರಿಂದ ತಿಳಿದು ಕೊಳ್ಳಬಹುದೆಂದೂ ಗೊತ್ತಾಗಿದೆ ರಕ್ತದಾನ ಮಾಡಿದವರಿಗೆ ಯೋಗ್ಯಹಣ ಕೊಡಲಾಗುವುದು.

ಮದ್ಯಾಸು ವಿಶ್ವವಿದ್ಯಾಲಯದ ಅಂತರ್ ಕಾಲೇಜು ಹಾಕಿ ಪಂದ್ಯಾವಳಿಯಲ್ಲಿ ಭಾಗವಹಿಸಲು ಕೊಡಗು ಸಹಕಾರಿ ಕಾಲೇಜು ಟೀಮಿಗೆ ಶ್ರೀಗಳಾವ ಬಲ್ಲಚಂಡ ಉತ್ತಯ್ಯ (ಕೆಪ್ಟನ್) ಬಾಚರಣಿಯಂಡ ಣಾಣಯ್ಯ ನೆಲ್ಲಮಕ್ಕಡ ಬಿದ್ದಪ್ಪ, ಐಚೆಟ್ಟಿರ ನಂಜಪ್ಪ ಪುಚ್ಚಿಮಾಡ ಮುತ್ತಣ್ಣ, ಕೊಕ್ಕಲೇರ ಜಿತ್ತಯ್ಯ, ಕೊಕ್ಕಲೇರ ಕುಶಾಲಪ್ಪ, ಮುಕ್ಕಾಟೀರ ಚಂಗಪ್ಪ, ಮುಂಜಾಂದಿರ ಉತ್ತಪ್ಪಯ್ಯ, ಮೂಕೇಟಿರ ಪೂಣಚ್ಚ, ಕುಂಜಿಲಂಡ ಸ್ಪಾಪಯ್ಯ ಕಲಿಯಂಡ ಣಾಣಯ್ಯ, ಚೆಂಬಾಂಡ ಸೂಬಯ್ಯ ಮತ್ತು ಕೊಕ್ಕಲೇರ ತಮ್ಮಯ್ಯ ಇವರುಗಳನ್ನು ಆರಿಸಲಾಗಿದೆ.

ಅಖಿಲ ಕೊಡಗು ಹೈಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳಿಗಾಗಿ ಶ್ರೀ ಕದೇಮಾಡ ಬೆಳ್ಯಪ್ಪನವರು ಇಟ್ಟಿರುವ ಬಟ್ಟಲಿನ ಹಾಕಿ ಪಂದ್ಯಾಟವು ಸೊನ್ನೆಸೇಟೆ ನಾಡು ಬಿ. ಶೆಟ್ಟಗೇರಿ ಶಾಲೆಯಲ್ಲಿ ಇದೇ ನವೆಂಬರ್ ತಿಂಗಳಲ್ಲಿ ಪ್ರಾರಂಭಗೊಳ್ಳುವದೆಂದು ಪಂದ್ಯಾಟಕ್ಕೆ ಭಾಗವಹಿಸಲಿಚ್ಛಿಸುವವರು ತಾ. ೧೦ರೊಳಗೆ ಪೆಕ್ರೆಟರಿಯವರಿಗೆ ಬರೆದು ಕೊಳ್ಳಬೇಕಾಗಿದೆ.

ಅಖಿಲ ಕೊಡಗು ಸಾರ್ವಜನಿಕ ಹಾಕಿ ಪಂದ್ಯಾಟಗಾರರಿಗಾಗಿ ಇಟ್ಟಿರುವ ಫಾತೂರಿನ ಶ್ರೀ ಎಚ್. ಬಿ ಸಿದ್ದಯ್ಯನವರ ಬಟ್ಟಿನ ಮೂರನೇ ವರ್ಷದ ಆಟದಲ್ಲಿ ಅಖಿಲ ಕೊಡಗು ಉಪಾಧ್ಯಾಯರ ಟೀಮು ಕೊನೆಯ ಆಟವಲ್ಲಿ ಗೆದ್ದು ಬಟ್ಟನ್ನು ಪಡೆದರು. ಶ್ರೀ ಸಿ. ಎಂ ಕುಶಾಲಪ್ಪ ನಿವೃತ್ತ ಚೀಫ್ ಫಾರೆಸ್ಟ್ ಆಫೀಸರವರ ಅಧ್ಯಕ್ಷತೆಯಲ್ಲಿ ಬಟ್ಟು ಕೊಡಲ್ಪಟ್ಟಿತು.

ಸೋಮವಾರಪೇಟೆ ಪ್ರೌಢ ಶಾಲೆಯ ಹೆ. ಮಾ. ಬಿ. ಎಸ್. ವಿ. ಕೆ. ವಿಟ್ಟಲ್ ಮತ್ತು ಸ್ಕೌಟ್ ಮಾಸ್ಟರ್ ಬಿ. ಐ ಚಂಗಪ್ಪನವರ ನೇತೃತ್ವದಲ್ಲಿ ಸದರಿ ಶಾಲೆಯ ೨೫ ವಿದ್ಯಾರ್ಥಿಗಳಿಂದ ಸಮಾಜ ಸೇವೆಯು ನಿರಂತರವಾಗಿ ನಡೆಯುತ್ತಿರುವುದು ನೂರಾರು ಪುರನಿವಾಸಿಗಳು ನೀರು ಕುಡಿಯುತ್ತಿರುವ ಆನೆಕೆರೆಯ ಶುದ್ಧೀಕರಣ ಕೆಲಸವು ಅಕ್ಟೋಬರ್ ತಾ. ೬ ರಿಂದ ಪ್ರಾರಂಭವಾದದ್ದು ಪ್ರತೀ ಆದಿತ್ಯವಾರ ೧೦ ಗಂಟೆಯಿಂದ ೧೫೫ ವರೆಗೆ ನಡೆಯುತ್ತಲೇ ಇದೆ. ಇದಲ್ಲದೆ ಪ್ರತೀ ಮೂರನೇ ಆದಿತ್ಯವಾರ ಪ್ರೌಢ ಶಾಲೆಯ ಹತ್ತು ತುಂಡಗಳು ಇಬ್ಬಬ್ಬರು ಅಧ್ಯಾಪಕರ ನೇತೃತ್ವದಲ್ಲಿ ಪಟ್ಟಣದ ಬೀದಿಗಳ ಶುದ್ಧೀಕರಣ ಕೆಲಸದ ಕಾರ್ಯಕ್ರಮವನ್ನು ಇಟ್ಟುಕೊಂಡಿರುವರು.

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪರೀಕ್ಷೆ ಫಲಿತಾಂಶವು ನವಂಬರ್ ತಾ. ೧೫ರಲ್ಲಿ ಪ್ರಕಟವಾಗುವುದು ಬರುವ ಪರೀಕ್ಷೆಗಳಿಗೆ ಕುಳಿತುಕೊಳ್ಳುವ ಅಪೇಕ್ಷೆಯುಳ್ಳವರು ನವಂಬರ್ ತಾ. ೧೫ ರೊಳಗೆ ಕಾರ್ಯದರ್ಶಿ, ಹಿಂದೀ ಪ್ರಚಾರಕ ಸಭಾ ಮಡಿಕೇರಿ, ಇವರಿಗೆ ಕೇಂದ್ರ ವ್ಯವಸ್ಥೆ ಮಾಡಲು ಬರೆದುಕೊಳ್ಳಬೇಕೆಂದು ತಿಳಿಸುತ್ತಾರೆ.

ಸೋಮವಾರಪೇಟೆಯ ಪ್ರೌಢ ಶಾಲೆಯ ಹೆಡ್ ಮಾಸ್ಟರಾದ ಬಿ. ಎಸ್. ವಿ. ಕೆ. ವಿಠಲರಾವ್, ಗೇಮ್ಸ್ ಟೀಚರಾದ ಬಿ. ಎ. ಸುಬ್ಬಯ್ಯನವರು ಶಾಲೆಯ ಹಾಕಿ ಟೀಮ್ ಮತ್ತು ಕೆಲವು ಹುಡುಗರು ಸೇರಿ ತಾ. ೧೫-೧೦-೫೩ರಲ್ಲಿ ಮೈಸೂರಿಗೆ ಕ್ಯಾಂಪ್ ಹೋಗಿದ್ದರು ಹೆಡ್ ಮಾಸ್ಟರರು ಅನೇಕ ಮುಖ್ಯ ಇನ್‌ಸ್ಟಿಟ್ಯೂಟ್‌ಗಳನ್ನು ವಿದ್ಯಾರ್ಥಿಗಳಿಗೆ ತೋರಿಸಿದರು. ಹಾಕಿ ಟೀಂ ೪ ಪಂದ್ಯಗಳನ್ನು ಆಡಿ ೩ ಪಂದ್ಯಗಳಲ್ಲಿ ಗೆದ್ದು ಒಂದರಲ್ಲಿ ಸೋತರು.

ವೀರಾಜಪೇಟೆಯಲ್ಲಿ ರಿಟೈರ್ಡ್ ಸೆಷೆನ್ ಆಫೀಸರಾಗಿದ್ದ ಶ್ರೀ. ಪಾಲಂದೀರ ಮೊಂಣಪ್ಪನವರು ತಮ್ಮ ೭೫ನೇ ವಯಸ್ಸಿನಲ್ಲಿ ಆಕ್ಟೋಬರ್ ತಾ. ೩೧ರಲ್ಲಿ ಸ್ವರ್ಗಸ್ಥರಾದರು.

ಶ್ರೇಜರ್‌ಪೇಟೆ ಜೋಬಳಿಯ ರಸೂಲ್ ಬೆಟ್ಟಗೇರಿ ಗ್ರಾಮದಲ್ಲಿ ಬಾಲಕರ ಮತ್ತು ಪುರುಷರ ಶಾಲೆಯೊಂದನ್ನು ತಾ. ೩೧-೧೦-೫೩ರಲ್ಲಿ ವಾರುಪತ್ತೆಗಾರರಾದ ಶ್ರೀ ಬಿ ಟಿ. ಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ತೆರೆಯಲಾಯಿತು.

ಹಿಂದೂ ನೌಕಾದಳದಲ್ಲಿ ಆರ್ಟಿಫೈಸರ್ ಎಸ್ಸೆಂಟಿಸ್'ಗಳಾಗಿ ತರಬೇತು ಹೊಂದಲು ಲೆಕ್ಕ ಮತ್ತು ಸೈನ್ಸ್ ವಿಷಯಗಳನ್ನು ತೆಗೆದುಕೊಂಡು ಎಸ್. ಎಸ್. ಎಲ್. ಸಿ. ಪಾಸಾದ ಮತ್ತು ಪರೀಕ್ಷೆಗೆ ಕುಳಿತು ಪಾಸಾಗುವ ಭರವಸೆಯಿರುವ, ವ್ಯಾಯ ೧೫ ರಿಂದ ೧೭½ ವಷ ದ ವರೆಗಿರುವ ಯುವಕರು ಜೇಕಾಗಿದ್ದಾರೆ ಇಚ್ಛೆಯುಳ್ಳವರು ನಿಶ್ಚಿತ ಫಾರ್ಮಿನಲ್ಲಿ ತಮ್ಮ ಪೋಷಕರ ಅನುಮತಿಯೊಡನೆ ಸಮೀಪದ ರಿಕ್ರೂಟಿಂಗ್ ಆಫೀಸರನ್ನು ಸಂಧಿಸಬಹುದಾಗಿದೆ.

ತಾರೀಕು ೩೦ ರಲ್ಲಿ ನಾಗಪುರದಲ್ಲಿ ನಡೆದ ಹರಿಜನ ಮತು ಹಿಂದುಳಿದ ವರ್ಗಗಳ ಎಂ. ಎಲ್. ಎ ಗಳ ಸಮ್ಮೇಳನಕ್ಕೆ ಕೊಡಗಿನಿಂದ ಶ್ರೀಗಳಾದ ಪಿ. ಕೆ. ಚೆನ್ನಯ್ಯ ಮತ್ತು ಲಕ್ಕಯ್ಯ ಇವರುಗಳು ಹೋಗಿದ್ದರು

ಉತ್ತರ ಕೊಡಗಿನ ಕಾಪಾಳಿನಲ್ಲಿ ಕಳೆದ ಎರಡು ವರ್ಷಗಳಿಂದ ನಡೆಸಲ್ಪಡುತ್ತಿರುವ ಜನಗಳು, ಕೋಳಿ ಮೊದಲಾದುವುಗಳ ಸಾಕುವಿಕೆಯ 'ಶ್ರೀ ವಿಲೇಜ್' ಏಪಾಡಿನಂತೆ ಸೋನ್ನೆಸೇಟೆಯ ಅವ-ತೊಕ್ಕಲು ಗ್ರಾಮದಲ್ಲಿ ಒಂದು ಕೇಂದ್ರವನ್ನು ಜಾನುವಾರು ಇಲಾಖೆಯವರು ತೆರೆದಿರುವರು.

ತಾ. ೧೧ರಲ್ಲಿ ಪೂರ್ವಾಹ್ನ ೪ ಗಂಟೆಗೆ ಹರಿಪರ ಶಾಲೆಯ ಬಳಿ ಧ್ವಜಾರೋಹಣ ಮಾಡಿ ಶಾಲಾ ವಶಾವಳಿಯನ್ನು ಮತ್ತು ಅದರ ಬೇಲಿಯನ್ನು ದುರಸ್ತು ಮಾಡಿದನಂತರ ಶಾಲಾ ಮಕ್ಕಳಿಗೂ ಮತ್ತು ಸಾರ್ವಜನಿಕರಿಗೂ ಆಟೋಟಗಳ ಸ್ಪರ್ಧೆಯನ್ನು ನಡೆಸಲಾಯಿತು. ಅನಂತರ ಅಪರಾಹ್ನ ೩ ಗಂಟೆಯಿಂದ ಶ್ರೀ ಎ ಎಂ. ಬೆಳ್ಯಪ್ಪ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಲಾಯಿತು. ಪ್ರಾರ್ಥನೆಯಾದ ನಂತರ ಶ್ರೀಗಳಾದ ಪಿ ಎಸ್. ಕಾರ್ಯಪ್ಪ, ಎಂ. ಪಿ ಮಾದಪ್ಪ, ಎಂ ಕೆ. ಜೋಯಪ್ಪ, ಎಂ. ಬಿ ಚಂಗಪ್ಪ, ಎಂ. ಬಿ. ಕುಟ್ಟಪ್ಪ ಮತ್ತು ಪಿ ಕೆ. ನಂಜಪ್ಪ ಇವರುಗಳು ಸಹಕಾರ ದಿನಾಚರಣೆಯ ವಿಷಯ ಭಾಷಣವಿತ್ತರು. ಸ್ಪರ್ಧೆಯಲ್ಲಿ ಜಯಶೀಲರಾದವರಿಗೆ ಬಹುಮಾನವನ್ನು ಹಂಚಲಾಯಿತು.

ತಾ. ೧೰-೧೧-೫೩ರಲ್ಲು ತಾವುನಾಡು ಸಹಕಾರ ಕೂಟದ ಆಶ್ರಯದಲ್ಲಿ ೧೯೫೩-೫೪ನೇ ಅಂತರ್‌ರಾಷ್ಟ್ರೀಯ ಸಹಕಾರ ದಿನಾಚರಣೆಯನ್ನು ಶ್ರೀ ಮೂಸ್ ಕೋಡಿರ ಟಿ. ಗಣಪತಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯ್ತು. ಕಾವೇರಿ ನದಿ ಸಂಗಮ ತೀರದ ಪೈದಾನದಲ್ಲಿ ಶಾಲಾ ಬಾಲಕ ಬಾಲಿಕೆಯರಿಗೂ ಸಾರ್ವಜನಿಕರಿಗೂ ಆಟೋಟಗಳ ಸ್ಪರ್ಧೆ ನಡೆದು ಗೆದ್ದವರಿಗೆ ಇನಾಮನ್ನು ಶ್ರೀಮತಿ ಕೋಡಿರ ಬೊಳ್ಳಮ್ಮ ಗಣಪತಿಯವರು ಹಂಚಿದರು. ಆಟೋಟಗಳಲ್ಲಿ ಹೆಚ್ಚಿನ ಪಾಯಿಂಟ್ಸ್ ಪಡೆದವರಿಗೆ ಶ್ರೀ ಮಂಡಿರ ಸೋಮಣ್ಣನವರಿಂದ ಚಾಂಪಿಯನ್ ಬಹುಮಾನ ಕೊಡಲ್ಪಟ್ಟಿತು.

ತಾ. ೩೦-೧೦-೫೩ರಲ್ಲು ಹುದಿಕೇರಿ ಹೈಸ್ಕೂಲು ಯೂನಿಯನ್ನಿನ ಆಶ್ರಯದಲ್ಲಿ ಉಪಾಧ್ಯಾಯರುಗಳ ಚರ್ಚಾ ಸ್ಪರ್ಧೆಯೊಂದು ಇಂಗ್ಲಿಷಿನಲ್ಲಿ ಏರ್ಪಡಿಸಲ್ಪಟ್ಟಿತ್ತು. ಮಹನಿಯರುಗಳಾದ ಎನ್ ಕೆ. ಪೂವಯ್ಯ, ಸಿ. ಎಸ್. ರಂಗಸ್ವಾಮಿ, ಕೆ. ಎನ್. ಜಯಸಿಂಹ, ಡಿ. ಸುಬ್ಬರಾವ್, ಕೆ. ಸಿ. ಮಂದಣ್ಣ, ಕೆ ಜಿ ಅಪ್ಪಯ್ಯ, ಟಿ ಎಸ್. ನಾರಾಯಣರಾವ್, ಸಿ. ಎಸ್. ಗಣಪತಿ, ಹೆಚ್ಚಾ ಬಿ. ಕುಶಾಲಪ್ಪ ಮತ್ತು ಶ್ರೀಮತಿ ಕೆ. ಎಂ. ಸರಸು ಇವರುಗಳು ಮೂತನಾಡಿದರು. ಅಂದಿನ ಅಧ್ಯಕ್ಷತೆಯನ್ನು ಹೈಸ್ಕೂಲು ಮುಖ್ಯೋಪಧ್ಯಾಯರಾದ ಶ್ರೀ ಪಿ. ಎಂ. ಉತ್ತಪ್ಪನವರು ವಹಿಸಿದ್ದರು.

ತಾ ೧೦-೧೧-೫೩ನೇ ಸೋಮವಾರ ಪೇಟೆ ನಾಡಿನ ಸಹಕಾರಿಗಳು ಸಹಕಾರ ಯೂನಿಯನ್ ಆಶ್ರಯದಲ್ಲಿ ಸಹಕಾರ ದಿನವನ್ನು ಆಚರಿಸಿದರು. ಬೆಳಿಗ್ಗೆ ಏಳುಗಂಟೆಗೆ ಸಹಕಾರ ಭವನದ ಮೇಲೆ ಸಹಕಾರ ಧ್ವಜವನ್ನು ಶ್ರೀ ಹೆಚ್. ಎಂ. ಚಂಗಪ್ಪನವರು ಹಾರಿಸಿದರು. ಹನ್ನೊಂದು ಗಂಟೆಗೆ ಸಹಕಾರ ಭವನದಲ್ಲಿ ಶ್ರೀ ಕೆ. ಪಿ ಪನ್ನುಮಂತ ಜಯ್ಯನವರ ಅಧ್ಯಕ್ಷತೆಯಲ್ಲಿ ಸಭೆನಡೆಯಿತು. ಶ್ರೀ ಹೆಚ್.ಟಿ. ಮುತ್ತಣ್ಣ ಮತ್ತು ಶ್ರೀ ಹೆಚ್. ಎಂ. ಚಂಗಪ್ಪ, ಶ್ರೀ ಟಿ. ಎ. ಕರಿಯಪ್ಪನವರುಗಳು ದಿನಾಚರಣೆಯ ಆದ್ಯಶ್ಯ, ಸಹಕಾರ ತತ್ವ, ಕಮ್ಯೂನಿಟಿ ಪ್ರೊಜೆಕ್ಟ್ ವಿಷಯ ಬೋಧಪ್ರದ ಭಾಷಣ ಮಾಡಿದರು.

ತಾ. ೧೧ರಲ್ಲಿ ಹುದಿಕೇರಿ ಹೈಸ್ಕೂಲು ಮತ್ತು ಹೈಯರ್ ಎಲಿಮೆಂಟರಿ ಶಾಲೆಯವರು ಸಮಾಜ ಜ್ಞಾನ ದಿನಾಚರಣೆಯನ್ನು ಶ್ರೀ ಕಾಡ್ಯಮಾಡ ಅಯ್ಯಮ್ಮನವರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಧ್ವಜಾರೋಹಣ ಮತ್ತು ಮೆರವಣಿಗೆ ಆದನಂತರ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಗುಂಪು ಗುಂಪಾಗಿ ಸ್ಥಳೀಯ ವಿಷ್ಣು ದೇವಾಲಯ, ಹುದಿಕೇರಿಯ ಸುಮಾರು ೬ ಫರ್ಲಾಂಗ್ ಉದ್ದ ರಸ್ತೆ, ಕಕ್ಕಸುಗಳು, ಶಾಲಾ ಆವರಣ ಇನೇ ಮುಂತಾದ ಜಾಗಗಳನ್ನು ಗುಡಿಸಿ ಶುದ್ಧಪಡಿಸಿದರು. ಈ ಸಂದರ್ಭದಲ್ಲಿ ಬೆಂಗಳೂರಿನ ಹಿಮ್ಮಶ

ಕಂಪೆನಿಯ ಶ್ರೀಯುತ ಡಿ. ಎಸ್. ನಾಗರಾಜ್ ಅವರು ರೇಡಿಯೋ ವ್ಯವಸ್ಥೆ ಏರ್ಪಡಿಸಿದ್ದರು.

ಇಂಡಿಯಾ ಸರಕಾರದವರು ಸ್ಕಾಲರ್‌ಶಿಪ್ ಕೊಡುವ ಬಗ್ಗೆ ಅಮ್ಮ, ಕೊಡವ, ಅಯ್ಯಂಗಾರ್, ಜೇನಾಂಗ, ಗಾಣಿಗ, ಗೌಡ, ಸೌಡ, ಹೆಗ್ಗಡೆ, ಅಂದೋಲ, ಸೂಲ್‌ಬ್ಬಿ ಮತ್ತು ಯಡವನಾಡಿನ ಕೊಡವ, ಕುಂಬಾರ, ಲಿಂಗಾಯಿತ, ಮೂಪಿಲ್, ಮಡಿವಾಳ, ಮಲೆಯ, ಮರಾಟ, ಸಾಲಿ, ತೆಲುಗ, ತೊರೆಯ ಒಕ್ಕಲಿಗ ಇವರನ್ನು ಹಿಂದುಳಿದ ಕೋಮಿನವರೆಂದು ಪಟ್ಟು ನೂಡಿರುವರು. ಈ ಪಟ್ಟಿಯನ್ನು ಕೊಡಗು ಸರಕಾರದವರು ಕೊಡಗಿನಲ್ಲಿ ಸ್ಕಾಲರ್‌ಶಿಪ್ ಕೊಡುವ ಬಗ್ಗೆ ಅಂಗೀಕರಿಸಿರುವರು

ಕೊಡಗಿನಲ್ಲಿ ಬಾರತ ಸೇವಕ ಸಮಾಜದ ಕಾರ್ಯ ಪ್ರಾರಂಭವು ಸಮಂಗಳವು ತಾರೀಕು ೫-೧೧-೫೩ ಗಲ್ಲಿ ಬೆಳಿಗೆ ೧೧ ಗಂಟೆಗೆ ಕೊಡಗು ಎಸೆಂಬ್ಲಿ ಹಾಲ್‌ನಲ್ಲಿ ಕೊಡಗಿನ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯುವುದು.

ಕೊಡಗು ಪೊಲೀಸು ದಳಕ್ಕೆ, ಸೇರಲು ಆಸ್ಪಡ ಚೆನ್ನಾಗಿ ಓದಲು ಬರೆಯಲು ಗೊತ್ತಿದ್ದು ಪಾಯ ೨೮ ರ ವಳಗೆ ಇರುವ ಸಜಸ ಯುವಕರು ಬೇಕಾಗಿದಾರೆ ಸೇರಲು ಕುತೂಹಲವುಳ್ಳವರು ಮಡಿಕೇರಿ ಎಂ ಪ್ಲಾಯಿಮೆಂಟ್ ಆಫೀಸಿನಿಂದ ಹೆಚ್ಚಿನ ವಿಷಯಗಳನ್ನು ಖುದ್ದಾಗಿ ಕೂಡ್ಲೆ ತಿಳಿಸಿಕೊಳ್ಳಬಹುದು.

ತಮ್ಮ ಭತ್ತಿಪಗೆದ್ದೆ ಅಥವಾ ಹೊಲಗಳಿಗೆ ಬೇಲಿ ಹಾಕಲು ನುಳ್ಳ ತಂತಿ ಬೇಕಾಗಿರುವವರು ವ್ಯವಸಾಯ ಇಲಾಖಾ ನುಬ್ಯಾಧಿಕಾರಿಗಳಿಗೆ ಅರ್ಜಿ ಬರೆಕೊಳ್ಳಬಹುದೆಂದೂ, ಅರ್ಜಿ ಹಾಕಲು ಕಡೇ ತಾರೀಕು ೩೦-೧೧-೫೩ ಎಂಬದಾಗಿಯೂ, ಆದರ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲವಾಗಿ ಇಲಾಖೆಯವರು ಈ ಮೂಲಕ ತಿಳಿಸುತ್ತದೆ.

ತಿದ್ದುಪಡಿ.

ಕಳೆದ ವಾರದ ಪತ್ರಿಕೆಯಲ್ಲಿ ಪ್ರಕಟವಾದ ಹೊಸ ಬಸ್ ಲೈನುಗಳನ್ನು ಕೊಡುವ ವಿಜಾರದ ವಾರ್ತೆಯಲ್ಲಿ 'ಹೆಬ್ಬಾಲೆ ಮೂಡಾಪುರ ಸಿದ್ದಾಪುರ ಮತ್ತು ಪಾಸಾಸು' ಹೋಗುವ ಒಂದು ಲೈನೆಬುದರ ಬದಲು 'ಹೆಬ್ಬಾಲೆ ಮೂಡಾಪುರ-ಸಿದ್ದಾಪುರ, ವೀರಾಜನೇಟೆ ಮತ್ತು ಪಾಸಾಸು' ಎಂದು ಓದಿಕೊಳ್ಳಬೇಕು.

ಕಳೆದ ವಾರ ಪ್ರಕಟವಾಗಿದ್ದ ಡಾ. ಕಜೇಮಾಡ ಕರುಂಬಯ್ಯನವರ ಕೃತಜ್ಞತಾ ನಂದನೆ ಪ್ರಕಟಣೆಯಲ್ಲಿ ತಾ ೭-೧೧-೫೩ ರಲ್ಲಿ ನಿಧನರಾದ' ಎಂಬುದರ ಬದಲು 'ತಾ. ೯-೧೧-೫೩ ರಲ್ಲಿ ನಿಧನರಾದ' ಎಂದು ಓದಿಕೊಳ್ಳಬೇಕು ಸಂ]

ಮೂರಾಟಕ್ಕಿದೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ರೋಡಿನ ಪಕ್ಕದಲ್ಲಿರುವ-ಬಾವಿ, ವಿದ್ಯುಚ್ಛಕ್ತಿ ಬೆಳಕಿನ ವ್ಯವಸ್ಥೆ, ಕೊಟ್ಟಿಗೆ, ಸ್ವಲ್ಪ ಹಿತ್ತಲುಗಳಿಂದ ಕೂಡಿದ ಮಹಡಿ ಮನೆ ಯೊಂದು ಮೂರಾಟಕ್ಕೆ ಇದೆ. ಖಾಯಸ್ ದಾರರು ಈ ಕೆಳಗಿನ ವಿಳಾಸಕ್ಕೆ ಬರೆದಾಗಲೀ, ಖುದ್ದು ಬಂದಾಗಲೀ ನೋಡಿ ಹೆಚ್ಚಿನ ವಿವರಗಳನ್ನು ತಿಳಿಯಬಹುದು.

ಎನ್ ಎ ಉತ್ತಪ್ಪ,
'ಅವಚ್ಚು ಸಾ ಮಿಲ್ಸ್' ಮಡಿಕೇರಿ.

ಇಂಡಿಯನ್ ಕಾಫಿ ಬೋರ್ಡ್.

1951-52ನೇ ಸಾಲಿನ ಕಾಫಿ ಬೆಳೆಯ ಖಾವತಿಯ ಮೇಲೆ ಸ್ವಾ ಪುಟ್ಟು ವ್ಯವಸಾಯಗಾರರಿಗೆ ಹಂಚಲಿರುವ ಸಪ್ಲಿಮೆಂಟ್ ಪೇಮೆಂಟ್.

1951-52ನೇ ಸಾಲಿನ ಕಾಫಿಯನ್ನು ಪೂಲಿಗೆ ಸಾವತಿ ಮಡಿದವ ಸ್ವಾ ಪುಟ್ಟು, ವ್ಯವಸಾಯಗಾರರಿಗೆ ತಿಳಿಸುವುದೇನೆಂದರೆ-ಒಂದು ಪಾಯಿಂಟಿಗೆ ೧ ಆಣೆಯಂತೆ ಸಪ್ಲಿಮೆಂಟರಿ ಪೇಮೆಂಟ್ ನಿಗದಿ ಮಾಡಲ್ಪಟ್ಟಿದೆ. ಅವರು ತಾವು ಪಾವತಿ ಮಾಡಿದ ಪೂಲ್ ಕೇಂದ್ರಗಳಿಂದ ಕಾಫಿ ರಸೀದಿಗಳನ್ನು ಹಾಜರುಪಡಿಸುವುದರ ಮೂಲಕ ಹಣವನ್ನು ಪಡೆಯಬಹುದು.

ಬೆಂಗಳೂರು,
ತಾ. 18-10-53.

(ಸಹಿ) ಎಂ ಎ. ಕುಟ್ಟಿ ಲಿಂಗಂ ಪಿಳ್ಳೈ.
ಚೀಫ್ ಕಾಫಿ ಮಾರ್ಕೆಟಿಂಗ್ ಆಫೀಸರ್.

AVAILABLE.

Available all types of Everest Asbestos Cement Products Viz Sheets Pipes, Gutters, Ridges, Apron Pieces etc., etc., at Factory's scheduled rates at any Railway Station in price Field. Technical assistsnce renderd. Please contact **THE PREMIER STORES, VIRAJPET.** Sole dealers for the above for whole of Coorg.

ಮಡಿಕೇರಿಯಲ್ಲಿ ನೇತ್ರ ರೋಗಿಗಳ ಉಚಿತ ಚಿಕಿತ್ಸೆ ನಡೆಸುತ್ತಿರುವ

ಡಾ ನೋದಿಯವರು.

ಕರ್ನಾಟಕ ಸರ್ಕಸ್ಥಿತ ನೇತ್ರ ತಜ್ಞರಾದ ಡಾ. ವೆಂಕಟಿಗ ನರು ಅವರ ಪತ್ನಿ ಶ್ರೀಮತಿ ಮಂಗಳಾಲ ಅವರು ಸಿಂಗಾಪುರದಲ್ಲಿ ಅನಾರೋಗ್ಯದಿಂದ ಕಾಲವಾದ ಸಂದರ್ಭದಲ್ಲಿ ಅವರ ಜ್ಞಾಪಕಾರ್ಥವಾಗಿ ಅವರ ಕ್ಯಾಂಪ್ ಸೈಟಿನಲ್ಲಿ ಪ್ರಥಮವಾಗಿ ಶ್ರೀ ಅಬ್ಬಿ-ಮುರೂ ಶ್ರೀ ಶ್ರೀಕಂಠಯ್ಯನವರೂ, ನೋಡಲೇ ಬಂದಿದ್ದು ಕ್ಯಾಂಪಿನ ವ್ಯವಸ್ಥೆ ನೋಡಿದ್ದಾರು. ಹಿರಿಯ ಕಾರ್ಯಕರ್ತೆ ಶ್ರೀಮತಿ ಕಾಳಮ್ಮ ಅವರು ಉಚಿತ ಔಷಧಿ ಮತ್ತು ಕನ್ನಡಕ ವಿತರಣೆ ಮಾಡಿದರು. ಕ್ಯಾಂಪಿನ ವ್ಯವಸ್ಥೆ ಮಾ

ರಾಜಕೀಯ ಪಕ್ಷಗಳಿಗೆ ಸರಕಾರಿ ಇಲಾಖೆಗಳ ದಿನ ನಿತ್ಯದ ಆಡಳಿತದಲ್ಲಿ ಕೈಹಾಕುವ ಅಧಿಕಾರವಿಲ್ಲ.

ಸಾರ್ವಜನಿಕರು, ಅದರಲ್ಲಿ ಸರ್ಕಾರಿ ನೌಕರರು ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ನಡೆಯುವ ಬಹಿರಂಗ ಸಭೆಗಳಿಗೆ ಹೋಗಬಾರದೆಂಬ ಕಾನೂನಿದೆಯೆಂದು, ಕೊಡಗು ಕಾಂಗ್ರೆಸ್ ಪಾರ್ಟಿಯ ಕೆಲವು ಕಾರ್ಯಕರ್ತರು ನಡೆಸುತ್ತಿರುವ ಪ್ರಚಾರದಿಂದ ಒಂದು ವಿಧದ ಭೀತಿದಾಯಕ ಪರಿಸ್ಥಿತಿಯುಂಟಾಗುತ್ತಿದೆ. ಕಾಂಗ್ರೆಸ್ ಕಾರ್ಯಕರ್ತರು ಗ್ರಾಮಗಳಿಗೆ ಹೋಗಿ—ಗ್ರಾಮಗಳಲ್ಲಿ ಪ್ರತಿಯೊಬ್ಬರು ತಮ್ಮ ಹವಾಲುಗಳನ್ನು ಮತ್ತು ಗ್ರಾಮಕ್ಕೆ ಬೇಕಾದ ಯಾವುದಾದರೂ ಸವಲತ್ತುಗಳನ್ನು ಕಾಂಗ್ರೆಸ್ ಎಡ್ವಾಹಕ್ ಸಮಿತಿಗಳ ಮುಖಾಂತರ ಕೇಳಿಕೊಂಡರೆ ಮಾತ್ರ, ಅವುಗಳನ್ನು ಸರಕಾರವು ಗಮನಿಸತ್ತೆ ತೆಗೆದುಕೊಳ್ಳುವುದೆಂಬ ಬೆದರಿಕೆಯನ್ನುಂಟು ಮಾಡಿ, ಇಷ್ಟವಿಲ್ಲದವರನ್ನು ಸಹ ಬಲಾತ್ಕಾರದಿಂದ ಕಾಂಗ್ರೆಸಿಗೆ ಸೇರಿಸಿ, ಅಲ್ಲಲ್ಲಿ ಎಡ್ವಾಹಕ್ ಸಮಿತಿಗಳನ್ನು ರಚಿಸುತ್ತಿದ್ದಾರೆ.

ಭಾರತದಲ್ಲಿ ಒಂದು ರಾಜ್ಯಭರಣವಿದೆ. ಮತ್ತು ಇತರ ಕಾನೂನು ಕಾಯಿದೆಗಳಿವೆ. ಯಾರಾದರೂ ಅವುಗಳನ್ನು ಉಲ್ಲಂಘನೆ ಮಾಡಿದರೆ ಸರ್ಕಾರವೇ ಶಿಕ್ಷೆಯನ್ನನುಭವಿಸಬೇಕಾಗಿರುವಾಗ ಕಾಂಗ್ರೆಸ್ ಪಾರ್ಟಿಯ ಆಶ್ರಯದಲ್ಲಿ ನಡೆಯುವ ಬಹಿರಂಗ ಸಭೆಗಳಿಗೆ ಹೋಗಲು, ಸಾರ್ವಜನಿಕರಿಗೆ ಮತ್ತು ಸರಕಾರಿ ನೌಕರರಿಗೆ ಎಷ್ಟು ಸ್ವಾತಂತ್ರ್ಯವಿದೆಯೋ, ಅಷ್ಟೇ ಸ್ವಾತಂತ್ರ್ಯ, ಕಮ್ಯೂನಿಸ್ಟ್ ಹಾಗೂ ಇನ್ನಿತರ ರಾಜಕೀಯ ಪಕ್ಷಗಳ ಆಶ್ರಯದಲ್ಲಿ ನಡೆಯುವ ಬಹಿರಂಗ ಸಭೆಗಳಿಗೆ ಹೋಗಲು ಸಹ ಇದೆ. ಯಾರನ್ನೆಯಾಗಲೀ, ಖಾಲಕ್ಕಾಗಿಯಾಗಿ ಕಾಂಗ್ರೆಸ್, ಯಾ ಇತರ ರಾಜಕೀಯ ಪಕ್ಷಗಳಿಗೆ ಸೇರಿಸುವುದು ಕಾನೂನಿಗೆ ವಿರೋಧವಾದ ವರ್ತನೆಯಾಗಿದೆ. ಎಲ್ಲಾ ಸರ್ಕಾರಿ ಇಲಾಖೆಗಳು ಕಾನೂನು ಚೌಕಟ್ಟಿನೊಳಗೆಗನುಸಾರವಾಗಿ ವರ್ತಿಸಬೇಕಾಗಿದೆ. ಕಾಂಗ್ರೆಸಿನ ಮಂತ್ರಿಮಂಡಲ ಬಂಧ ಹವಾಲೆಂದು ಅದಕ್ಕೇ ಯಾ ವಿಶೇಷ ಮನ್ನಣೆ ಕೊಡಬೇಕಾದದಿಲ್ಲ. ಯಾರೊಬ್ಬರು, ಅಧಿಕಾರಿ, ಇಡೀ ಗ್ರಾಮವಸ್ತುಶಃ ಎನೇ ಬೇಡಿಕೆಗಳು ಯಾರ ಮುಖಾಂತರವಾಗಿ ಬಂದಿರಲಿ ಸಂಬಂಧಪಟ್ಟ ಸರಕಾರಿ ಇಲಾಖೆಯವು, ಅದನ್ನು ಕಾನೂನಿಗನುಸಾರವಾಗಿ ನ್ಯಾಯೋಚಿತವಲ್ಲಿ ಇತ್ಯರ್ಥಮಾಡಬೇಕಾಗಿದೆ. ಕಾಂಗ್ರೆಸ್ ಪಕ್ಷದವರಿಗಾಗಲೀ, ಅಥವಾ ಇನ್ನಿತರ ರಾಜಕೀಯ ಪಕ್ಷದವರಿಗಾಗಲೀ ಸರಕಾರಿ ಇಲಾಖೆಗಳ ಮತ್ತು ಸರಕಾರಿ ನೌಕರರ ದೈನಂದಿನ ಆಡಳಿತ ವ್ಯವಹಾರಗಳಲ್ಲಿ ಕೈ ಹಾಕುವ ಅಧಿಕಾರವಿರುವುದಿಲ್ಲ. ಕಾಂಗ್ರೆಸ್ಸ್ ಪಕ್ಷದವರು ಸರಕಾರಿ ಇಲಾಖೆಗಳ ದಿನನಿತ್ಯ ಆಡಳಿತದಲ್ಲಿ ಕೈಹಾಕುತ್ತಿದ್ದರೆ ಅದು ಕಾನೂನಿಗೆ ವಿರೋಧವಾದುದು; ಮತ್ತದನ್ನು ಜನತೆಯು ತೀವ್ರವಾಗಿ ಪ್ರತಿಭಟಿಸಬೇಕಾಗಿದೆ. ರಾಜಕೀಯ ಪಕ್ಷಗಳಿಗೆ ಸರಕಾರದ ದಿನನಿತ್ಯದ ಆಡಳಿತದಲ್ಲಿ ಕೈಹಾಕುವ ಅಧಿಕಾರ ದೊರೆತರೆ, ಸ್ವಜನ ಪಕ್ಷಪಾತ ಹಾಗೂ ಇನ್ನನೇಕ ರೀತಿಯ ಅನಾಚಾರ ವತ್ತು ಅನ್ಯಾಯಗಳಿಗೆ ಎಡೆಮಾಡಿಕೊಟ್ಟಂತಾಗುತ್ತದೆ.

ನಾಗರಿಕ.

ನಿಜಲಿಂಗಪ್ಪನವರ ವಿಚಿತ್ರವಾದ.

ಮೊನ್ನೆಯೂರಿ ಕೊಡಗಿಗೆ ಬಂದಿದ್ದ ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಮಡಿಕೇರಿ ಮೂರ್ಕಿನ ಬಳಿ ಮಾತಾಡುತ್ತಾ "ನಾವು ಬಿಳ್ಳ ದೃಷ್ಟಿ ಬಿಡಬೇಕು. ಕೊಡಗು ಬೇರೆ ಕರ್ನಾಟಕ ಬೇರೆ ಎಂಬುದನ್ನು ಮರೆಯಬೇಕು. ನಾನೆಷ್ಟು ಧಾರಾಳವಾದವನೋ ಅಷ್ಟೇ ಕೊಡಗಿನವನೂ. ನೀನೆನ್ನು ಕೊಡಗಿನವರೋ ಅಷ್ಟೆ ಧಾರಾಳವಾಡದವರು ನನ್ನ ದೃಷ್ಟಿ ವಿಶಾಲವಾಗಬೇಕು. ಕೆಲವರು ಸಾರ್ವಜನಿಕ ವಿಕಾಸ ಯೋಜನೆಯನ್ನು ಉತ್ತರ ಕೊಡಗಿನಲ್ಲಿ ಪ್ರಾರಂಭಿಸಿರುವುದಕ್ಕೆ ಟೀಕಿಸುತ್ತಿರುವರಂತೆ. ಈ ಚಿಕ್ಕ ದೃಷ್ಟಿ ಸರಿಯಲ್ಲ. ಉತ್ತರ ಕೊಡಗು ಉತ್ತಮವಾದರೆ ದಕ್ಷಿಣ ಕೊಡಗು ಅಭಿವೃದ್ಧಿಯೂಡಂತೆ. ಇಡೀ ಕೊಡಗು ಉತ್ತಮವಾದಂತೆ ಆದರಿಂದ ಈ ರೀತಿಯ ಭಾವನೆಗಳು ಸರಿಯಲ್ಲ ಎಂದು ಹೇಳಿದರು. ಮತ್ತೆ ಅವರು ಮುಂದಿರಿಯುತ್ತಾ, ಕೇಂದ್ರಸರಕಾರದ ಹಣವನ್ನು ಸಾರ್ವಜನಿಕ ಯೋಜನೆಯ ವಿಚಾರ ಮಾತಾಡುತ್ತಾ "ಪಂಚವಾರ್ಷಿಕ ಯೋಜನೆಯಲ್ಲಿ ಶೇಷಲು ಉತ್ತರ ಹಿಂದುಸ್ತಾನಕ್ಕೆ ಹೆಚ್ಚಿನ ಪಾಲನ್ನೆ ಕೊಡಲಾಗಿದೆ. ನಿರಾಪನ್ನ, ನೈಗಾರಿಕಾ ಯೊವ ಯೋಜನೆಯೂ ಈ ಭಾಗದಲ್ಲೇ ಹೆಚ್ಚಾಗಿ ಕೈಗೊಳ್ಳಲ್ಪಡುತ್ತಿದೆ. ದಕ್ಷಿಣ ಹಿಂದುಸ್ತಾನದವರನ್ನು ಕಡೆಗಣಿಸಲಾಗಿದೆ. ನಮ್ಮ ಕೂಗು ಕೇಂದ್ರಸರಕಾರಕ್ಕೆ ಮುಟ್ಟುವಂತೆ ತೋರುವುದಿಲ್ಲ. ದಕ್ಷಿಣ ಹಿಂದುಸ್ತಾನದಲ್ಲಿ ಶೀಘ್ರ ಆಗಬೇಕಾದ ಅನೇಕ ಕೆಲಸಗಳಿವೆ. ಕೇಂದ್ರ ಸರಕಾರದ ಈ ನೀತಿ ತಪ್ಪು. ಈ ತಪ್ಪನ್ನು ಶೀಘ್ರ ಸರಿಪಡಿಸದಿದ್ದರೆ ದಕ್ಷಿಣ ಭಾರತದಲ್ಲಿ ಅಸಂತೋಷ ಹೆಚ್ಚುವುದು" ಎಂದರು. ಒಂದೇ ಭಾಷ ನವಾಲ್ಲಿ ಒಂಗಡ್ಡೋಂದು ವಿರೋಧದಪ ಮಾತಾಡುವ ಈ ಜನನಾಯಕನಿನ್ನೆಯೇಕು. ಕೊಡಗಿನ ವಿಚಾರದಲ್ಲಿ ವಿಶಾಲ ದೃಷ್ಟಿ ಇರಲಿ ಉತ್ತರ ಕೊಡಗು ದಕ್ಷಿಣ ಕೊಡಗು ಭಾವನೆ ಬೇಡವೆಂದು ಉಪದೇಶಿಸಿದ ಈ ವಿಶಾಲದೃಷ್ಟಿಯ ನಿಜಲಿಂಗಪ್ಪನವರು ಉತ್ತರ ಹಿಂದುಸ್ತಾನ ದಕ್ಷಿಣ ಹಿಂದುಸ್ತಾನದ ಕೂಗೆಬ್ಬಿಸಲೇಕೆ? ಸೂತಿನಲ್ಲಿ ಈ ರೀತಿ ಪರಸ್ಪರ ವಿರುದ್ಧ ವರ್ತನೆಯ ಇವರಂಥಾವರು ಕೃತಿಯಲ್ಲಿ ಹೇಗೆಂಬುದನ್ನು ಇವರ ಹಲವು ಕೃತಿಗಳ ಅನುಭವವಿರುವ ಕೊಡಗಿನವರಿಗೆ ಬೇರೆ ಹೇಳಬೇಕೆ?

— ವಿಚಾರಿ.

ಬಸ್ ಪ್ರಯಾಣ.

ಈಗ ಕೊಡಗಿನಲ್ಲಿ ಹೊಸ ಹೊಸ ಬಸ್ ಲೈನುಗಳು ಹೆಚ್ಚುತ್ತಿರುವುದು ಸಂತೋಷದ ಸಂಗತಿ. ಆದರೆ ಲೈನುಗಳನ್ನು ಸಿಕ್ಕಾಬಿಟ್ಟೆ ಕೊಡಬೆ ದಕ್ಷತೆಯಿಂದ ನಡೆಸುವವರಿಗೆ ಮಾತ್ರ ಕೊಡಬೇಕಾಗಿದೆ. ಒಳ್ಳೆಯ ಟ್ರಿಪ್ಪರ್ಸೂ ಸಹ ಲೈನುಗಳಲ್ಲಿ ತಕ್ಕ ಸಮಯಕ್ಕೆ ಸರಿಯಾಗಿ ಹೊರಗಡೆ ತಡವಾಗಿ ಹೋಗುವುದಿದೆ. ಇದರಿಂದ ಪ್ರಯಾಣಿಕರಿಗೆ ತುಂಬಾ ತೊಂದರೆಗಳಾಗುತ್ತಿದೆ ಉದಾಹರಣೆಗೆ ಮಡಿಕೇರಿಯಿಂದ ವೀರಾಜಪೇಟೆ ಮಾರ್ಗವಾಗಿ ಕಟ್ಟಕ್ಕೆ ಮತ್ತು ಕಟ್ಟದಿಂದ ಬರೋವಾಗೆ ಹೋಗುವ ಕಾರ್ಗ್ ಯಸಿಸ್ ಸರ್ವಿಸ್ ಇದೆ. ಈ ಬಸ್ಸು ಮಡಿಕೇರಿಯಿಂದ ೨ ಗಂಟೆಗೆ ಹೊರಟು ಕಟ್ಟಕ್ಕೆ ೬ ಅದವಾ ೬॥ ಗಂಟೆಗೆ ತಲುಪಬೇಕು. ಈ ಬಸ್ಸು ಈಗೀಗ ಕಟ್ಟಕ್ಕೆ ತಲುಪುವಾಗ ೭॥ ೮ ಘಂಟೆಯಾಗುತ್ತಿದೆ ಅದರಿಂದ ಲೆ ಬರೋವಾಗೆ ಲೈನು ಹೋಗಬೇಕು. ಮಡಿಕೇರಿಯಿಂದ ೩ ಗಂಟೆಗೆ ಕೂಡ ಪ್ರಯಾಣಿಕನು ಕಟ್ಟಕ್ಕೆ ತಲುಪುವಾಗ ಗಂಟೆ ೪ ಆಗುತ್ತದೆ. ಅಷ್ಟೊಂದು ಮೂರು ವೈಲಿ ದೂರ ಮನೆಗೆ ನಡೆಯಲೂ ಡುಹೋಗದೆ ಆ ಪ್ರಯಾಣಿಕನ ಪಾಡೇನಾದೀತು. ಕತ್ತಲೆಪ್ಪ ದಾರಿಗೆ ಬೆಳಕು ಕೊಡುವವರು ಯಾರು? ಇಂಥ ಪರಿಸ್ಥಿತಿಯನ್ನು ನಾನು ನೋಡಿದ್ದೇನೆ ಮತ್ತು ಅನುಭವಿಸಿದ್ದೇನೆ ಈ ಲೈನನ್ನು ಸರಿಯಾಗಿ ನಡೆಸಿಕೊಂಡು ಹೋಗಲು ಸಾಧ್ಯವಿಲ್ಲವೇ? ಹದುಳೇರಿಗೆ ಒರ್ ವಾಲ್ಲೆ ಈ ಬಸ್ಸಿಗೆ ಲೈಟು ಹಾಕಬೇಕಾಗುತ್ತದೆ. ಇದರಿಂದ ದೂರ ಹೋಗುವ ನವ್ಯಂಥ ಪ್ರಯಾಣಿಕರಿಗೆ ತಂಬಾ ತೊಂದರೆಯುಂಟಾಗುತ್ತಿದೆ. ಆದ್ದರಿಂದ ದಮ್ಮ ಧಣಿಟ್ಟ ಅಧಿಕಾರಿಗಳು ಈ ಲೈನನ್ನು ಸಮಯಕ್ಕೆ ಸರಿಯಾಗಿ ನಡೆಸುವಂತೆ ಎಚ್ಚರಿಕೆ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಪ್ರಯಾಣಿಕ.

—೦೦೦—

ಸ್ಪರ್ಧಾತ್ಮಕ ಪರೀಕ್ಷೆ.

ಬೃಹತ್ ಮುಂಬಯಿಯಲ್ಲಿಯ ಎಸ್ಟೇ ಸರಕಾರಿ ಕಚೇರಿಗಳಲ್ಲಿಯ ಕಾರಕೂನರ ಸ್ಥಳಗಳನ್ನು ತುಂಬುವುದಕ್ಕಾಗಿ ಇನ್ನು ಮುಂದೆ ಮುಂಬೈ ಪಬ್ಲಿಕ್ ಸರ್ವಿಸ್ ಕಮಿಷನ್ನು ಪರೀಕ್ಷೆ ನಡೆಸುವುದು

ಪ್ರತೀ ವರುಷ ಆಕ್ಟೋಬರದಲ್ಲಿ ಮುಂಬಯಿಯಲ್ಲಿ ಈ ಪರೀಕ್ಷೆ ನಡೆಯುವುದು. ಈ ಯೋಜನೆಯನ್ನು ಮೊದಲನೇ ಪರೀಕ್ಷೆಯು ಮುಂದಿನ ವರುಷದ ಆಕ್ಟೋಬರದಲ್ಲಿ ನಡೆಯುವುದು. ಪ್ರತೀ ವರುಷ ಜುಲೈ ದಿನ ಸುಮಾರಿಗೆ ಸರಕಾರವು ತನಗೆ ಆವಶ್ಯವಿರುವ ನೌಕರರ ಸಂಖ್ಯೆಯನ್ನು ಕಮಿಶನ್ನಿಗೆ ತಿಳಿಸುವುದು. ಆಗಸ್ಟ್ ಮೊದಲನೇ ವಾರದಲ್ಲಿ ಈ ಬಗ್ಗೆ ಕಮಿಶನ್ನು ಜಾಹಿರಾತು ಹೊರಡಿಸುವುದು. ತಾವು ಕೆಲಸ ಮಾಡಲಿಚ್ಛಿಸುವ ಕಚೇರಿಗಳ ಹೆಸರನ್ನೂ ಉತ್ತೀರ್ಣವಾಗಿರುವ ತಮ್ಮ ಅರ್ಜಿಗಳಲ್ಲಿ ಅಭ್ಯರ್ಥಿಗಳು ತಿಳಿಸಬಹುದು.

ಓದುಗರ ಓಲೆಗಳು

ಕೊಡಗಿನ ಪಟೇಲರುಗಳ ಸ್ಥಿತಿ.

ಕೊಡಗಿನಲ್ಲಿ ತಗಾರೇ ಎಸ್ಟೇ ಉದ್ಯೋಗಸ್ಥರುಗಳ ಬಂಬಳ ಬಡ್ತಿ ಮಾಡಿಯೂ, ತಟ್ಟೆ ಭತ್ಯವನ್ನು ಹಿಂದಕ ಬಾಕಿ ಸಹಿತ ಒಂದೇ ಮೊತ್ತದಲ್ಲಿ ಕೊಟ್ಟಿರುವ ದಕ್ಕೆ ಸರಕಾರವನ್ನು ವಂದಿಸಬೇಕಾಗಿದೆ. ಆದರೆ ದೇಶದ ಅಭಿವೃದ್ಧಿಯಾದ ಗ್ರಾಮ ಅಧಿಕಾರಿಗಳ ಕೆಲಸಕ್ಕೆ ವಿಷಯ ಮತ್ತು ಏನೆಂದು ಆಲೋಚನೆ ಮಾಡಿದಂತೆ ಕಂಡು ಬರುವದಿಲ್ಲ. ಡಿ ಬೋರ್ಡ್ ಅಧ್ಯಕ್ಷಕರುಗಳು ಅನೇಕ ವರ್ಷಗಳಿಂದ ಕೂಗುತ್ತಾ ಬಂದದ್ದಕ್ಕೆ ಮಾತ್ರ ಅವರ ಕೋರಿಕೆಯಂತೆ ತಕ್ಕವಷ್ಟಿಗೆ ನೆರವೇರಿಸಿಕೊಡುತ್ತೇವೆಂದು ಹೇಳಬಹುದು. ಇದೇ ರೀತಿ ಪಟೇಲರುಗಳೂ ಸಹ ನಮ್ಮ ಎಸೋಸಿಯೇಶನ್ ಮೂಲಕ ಈ ಕಳೆದ ನೂರು ನಾಲ್ಕು ವರ್ಷಗಳಿಂದ ಬಂಬಳ ಜಾಸ್ತಿ ಮಾಡಿಸಿ ಕೊಡಬೇಕೆಂದು ಕೇಳುತ್ತಿದ್ದರೂ ಸಹ ಹೆಚ್ಚಿನ ಫಲಕಾಂಯಾದ ಉತ್ತರವು ಬಂದಿರುವದಿಲ್ಲ ದಿನೇ ದಿನೇ ಪಟೇಲರುಗಳ ಕೆಲಸವು ಗ್ರಾಮದಲ್ಲಿ ಹೆಚ್ಚುತ್ತಾ ಬರುತ್ತಿದೆ ಗ್ರಾಮ ಅಭಿವೃದ್ಧಿಯಲ್ಲಾ ಈಗಿನ ಸ್ವರಾ ಸರಕಾರವು ಅನೇಕ ಯೋಜನೆಗಳನ್ನು ಜಾರಿಯಲ್ಲಿ ತರುತ್ತಿರುವಾಗ ಇತರ ಎಲ್ಲಾ ಭಾಗಗಳಲ್ಲೂ ಪಟೇಲರು ಮುಖ್ಯ ಪಾತ್ರವನ್ನು ವಹಿಸುವವರಾಗಬೇಕಾಗಿದೆ. ಈಗಾಗಲೇ ಉತ್ತರ ಕೊಡಗಿನಲ್ಲಿ ಪ್ರಾರಂಭಿಸಿರುವ ಸಾಮೂಹಿಕ ವಿಕಾಸ ಯೋಜನೆಯಲ್ಲಾ ಪಟೇಲರ ಕರ್ತವ್ಯವು ಎನ್ನುವ ಮಟ್ಟಿಗೆ ಹೆಚ್ಚಾಗುತ್ತಿದೆ ಎಂಬುದು ಸರಕಾರದ ಗಮನಕ್ಕೆ ಬಾರದೆ ಇರಲಿಕ್ಕಿಲ್ಲ. ಕೊಡಗಿನಲ್ಲಿಯೂ ಒಂದು ವ್ಯವಸ್ಥೆಯಲ್ಲಿ ಕೆಲಸವಾಗಿದ್ದರೂ ಈಗೀಗ ಅದಕ್ಕಿಂತಲೂ ಅಧಿಕವಾದ ಗ್ರಾಮ ಅಭಿವೃದ್ಧಿ ಕಾರ್ಯವು ಪಟೇಲನಿಗೆ ಪುರಸತ್ತಿಲ್ಲದೆ ಕೆಲಸ ಮಾಡುವಂಥ ಕೆಲಸವಾಗಿದೆ ದಕ್ಷಿಣ ಕೊಡಗಿನಲ್ಲಿಯೂ ಮತ್ತು ಉತ್ತರ ಕೊಡಗಿನ ಕೆಲವು ಗ್ರಾಮಗಳಲ್ಲಿಯೂ ಕೆಲವು ವಾಡಿಗಳು ಇಲ್ಲದೆ ಈ ಭಾಗದ ಪಟೇಲರುಗಳಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಈಗಿನ ಸರಕಾರವು ನಮ್ಮ ಈ ಅಗತ್ಯಗಳನ್ನು ಗಮನಿಸಿ, ವರ್ಷ ಒಂದರ ರೂ. ೧೬೦ ಎಲೌನ್ಸ್ ಮತ್ತು ತೀರ್ಥಕೊಂಡರೆ ರೂ. ೪ ಅಂತೆ ರೂ. ೪೮ ತಟ್ಟೆ ಭತ್ಯವನ್ನೂ ಸಹ ಕೊಡಿಸುವವರೆಲ್ಲದೆ, ಕೊಡಗಿನ ಕೆಲವು ಕಡೆ ಇರುವಂತೆ ಎಲ್ಲಾ ಗ್ರಾಮದಲ್ಲೂ ಒಬ್ಬೊಬ್ಬ ಕುಳುವಾಡಿಯನ್ನೂ ಸಹ ಕೊಡಿಸಬೇಕಾಗಿ ಕೇಳಿಕೊಳ್ಳುತ್ತೇವೆ ಇದನ್ನು ಗಣ್ಯರಲ್ಲನೇ ಅಭಿಪ್ರಾಯಿಂದೀಚೆಗೆ ಈ ವರೆಗೆ ಆಗುವ ಹಿಂದಿನ ಶೋರಿಕೆಗಳನ್ನೂ ಸಹ ಗಮನಿಸಿ ವಿಂಗಡಿಸಿ ನಂಬಿದ್ದೇವೆ.

ಎಂ. ಎಸ್. ಸುಬ್ಬಯ್ಯ,
ಕಾರ್ಯದರ್ಶಿ.
ಅಖಿಲ ಕೊಡಗು ಪರೇರ ಸಂಘ.

ಸಿಡಿದೆದ್ದ ಆಫ್ರಿಕದಲ್ಲಿ — "ಮೌ ಮೌ" ತಂಡ.

ನಾಡಿನ ಆಡಳಿತದ ವಿರುದ್ಧ ಜನತೆಯಲ್ಲಿ ಅಸಂತೃಪ್ತಿಯುಂಟಾಯಿತೆಂದರೆ, ಆತರ ಪ್ರತ್ಯಾಘಾತವು ಯಾವ ರೀತಿಯಲ್ಲಿ ಹೊರಬೀಳುವದೆಂಬುದು ಊಹೆಗೆ ನಿಲುಕದ ಮಾತು. ಸತ್ಯಾಗ್ರಹ, ನಿರಶನವ್ರತ, ಹರತಾಳ, ನಿಷೇಧರ ತೀರ್ಮಾನವೇ ಮೊದಲಾದ ಶಾಂತಿ ಕ್ರಮಗಳಿಂದಲೂ ಆದರ ಪ್ರಭಾವ ಗಬಹುದು. ಇಲ್ಲವೆ ಕೊಲೆ, ಕೊಳ್ಳಿ, ಸುಲಿಗೆ, ಸಾಮೂಹಿಕ ಬಂಡಾಯ, ಆಸ್ತಿವಿನಾಶ ಮೊದಲಾದ ಭೀಕರ ಉಪಕ್ರಮಗಳಿಂದಲೂ ತೋರ್ಪಡಿಸಿಕೊಳ್ಳಬಹುದು. ಭಾರತದಲ್ಲಿ ಆಗಿನ ಆಡಳಿತಗಾರರಾದ ಬ್ರಿಟಿಷರ ವಿರುದ್ಧ ಅಂತಹ ಅಶಾಂತ ಉಪಾಯಗಳನ್ನು ಜನತೆ ಅವಲಂಬಿಸಿದ್ದಂದು ಗಾಂಧೀಜಿಯವರು ಸದಾ ಕಾಲವೂ ಮುಂಜಾಗ್ರತೆ ವಹಿಸುತ್ತಿದ್ದರು. ಅಂತೆಯೇ ಭಾರತವಲ್ಲಿ ನಡೆದ ಅಂದೋಲನಗಳು ಶಾಂತ ರೀತಿಯಲ್ಲಿ ಸಾಗಿದ್ದವು.

ಆದರೆ ಇತರ ದೇಶಗಳಲ್ಲಿ ಗಾಂಧೀಜಿಯವರಂಥ ಪ್ರಭಾವೀ ನಾಯಕರಿಲ್ಲದ್ದರಿಂದಲೋ ಅಥವಾ ಆ ಜನರಲ್ಲಿ ಶಾಂತ, ಅಹಿಂಸೆಗಳ ಬಗ್ಗೆ ಆಷ್ಟೊಂದು ನಿಷ್ಠೆ ಇಲ್ಲದ್ದರಿಂದಲೋ ತಮ್ಮ ಸ್ವಾತಂತ್ರ್ಯಕ್ಕಾಗಿ ಅಂದೋಲನ ಹೂಡಿರುವ ಅನೇಕ ದೇಶಗಳಲ್ಲಿ ಇಂದು ನಾನಾ ಬಗೆಯ ಉಪಾಯಗಳನ್ನು ಅವಲಂಬಿಸಿ ಆಂದೋಲನಕರು ಅವಲಂಬಿಸಿದ್ದಾರೆ. ಅದರಲ್ಲಿಯೂ ಪಾಶ್ಚಾತ್ಯ ರಾಷ್ಟ್ರಗಳು ಹಿಂದಕ್ಕೆ ಯಾವಾಗಲೋ ವಶಪಡಿಸಿಕೊಂಡು ತಮ್ಮ ಆಧಿಪತ್ಯವನ್ನು ಆ ದೇಶಗಳ ಮೇಲೆ ಹೇರಿವೆ ಅಂಹತುಗಳ ಮೂಲ ನಿವಾಸಿಗಳು ಆ ವಸಾಹತುಗಾರರ ವಿರುದ್ಧ ಇಂದು ಆಂದೋಲನ ಹೂಡಿದ್ದು ವಸಾಹತುಗಾರರ ಸಙ್ಯೆಗಳಿಗೆ ಹೆಚ್ಚೆಚ್ಚು ಆಗುತ್ತ ಸಾಗಿದಂತೆ ಆ ಅಂದೋಲಕರ ಹಿಂಸಾತ್ಮಕತೆಗೂ ಹೆಚ್ಚುತ್ತ ಸಾಗಿದೆ.

ಆಫ್ರಿಕಾ ಖಂಡದಲ್ಲಿ ಅದರಲ್ಲಿಯೂ ದಕ್ಷಿಣ ಆಫ್ರಿಕಯಲ್ಲಿ ನೆಲಸಿ ಹೋದ ಐರೋಪ್ಯರು ಇಂದು ಆಧಿಕಾರಾರೂಢರಾಗಿ ಬಿಟ್ಟಿದ್ದು ಮೂಲನಿವಾಸಿಗಳ ಮೇಲೆ ತಮ್ಮ ಆಡಳಿತವನ್ನು ಹೇರಿರುವದಷ್ಟೇ ಅಲ್ಲದೆ ಅವರ ಮೂಲಭೂತ ಹಕ್ಕುಗಳನ್ನೂ ಕೂಡ ಕಸಿದುಕೊಂಡು ಮೂಲನಿವಾಸಿಗಳ ಬಾಳನ್ನು ನರಕಯಾತನೆಯ ಕಡೆ ಮಾಡಿಟ್ಟಿದ್ದಾರೆ. ಅವರಿಗೆ ತಮ್ಮ ತಾಯ್ನೆಲದಲ್ಲೇ ತಮ್ಮ ಇಷ್ಟವಂತೆ ಸಂಚರಿಸುವ ಸ್ವಾತಂತ್ರ್ಯವಿಲ್ಲ. ಸಾರಿಗೆ, ಸಾಧನ ಸಲಕರಣೆಗಳನ್ನು ಅವರು ಉಪಯೋಗಿಸ್ಕೂಡಂತಿಲ್ಲ. ಅವೆಲ್ಲವೂ ಬಿಳಿಯರ ಸೊತ್ತು ಗಳಾಗಿವೆ. ಅಧಿಕಾರ ಸ್ಥಾನಕ್ಕೆ ಬಿಳಿಯರಲ್ಲದವರು ಕೂಡ ಪದವೀಧರರಾಗಿದ್ದರೂ ಸಹ ಬಿಳಿಯರ ಗುಲಾಮರಂತೆ ಕೆಲಸ ಮಾಡಬೇಕಾಗಿದೆ. ಕಪ್ಪು ಜನಾಂಗಕ್ಕೆ ಸೇರಿದ ಯಾವ ರಾಷ್ಟ್ರಗಳ ಕೆಲವಿಷಯದಲ್ಲೂ ಪ್ರಬಲ ನಿರ್ಬಂಧಗಳನ್ನು ಹೇರಲಾಗಿದೆ. ಬಂಡಾಯ ಮಾಡಿದೆ.

ಇಂಥ ಸಹನೆಯು ಎಲ್ಲಿ ವಿಂಗಡಿದ ಈ ಮೂಲ ನಿವಾಸಿಗಳು ಈಗ ಅಸ್ತ್ರ ಆಂದೋಲನ ಹೂಡಿದ್ದಾರೆ. ಶಾಂತಿ, ಸತ್ಯ, ಅಹಿಂಸೆಗಳಲ್ಲಿ ಶ್ರದ್ಧೆಯಿಟ್ಟಿರುವವರು ಆಕಾರ್ಯಕ್ರಮವನ್ನು ಹೇಗೆ ತಾನೆ ಅನುಸರಿಸಿಯಾರು? ಆದಕ್ಕಾಗಿ ಅಲ್ಲಿಯ ಮೂಲ ನಿವಾಸಿಗಳು ಬೇರೆ ಬೇರೆ ಗುಪ್ತ ಸಂಗಡಗಳನ್ನು ಕಟ್ಟಿಕೊಂಡಿದ್ದಾರೆ. ಈ ಸಂಗಡಗಳ ಸಂಖ್ಯೆ ಎಷ್ಟು? ಈ ಸಂಗಡಗಳ ಪ್ರತಿಯೊಂದರ ಸದಸ್ಯರ ಸಂಖ್ಯೆ ಎಷ್ಟು? ಆ ಸಂಗಡಗಳ ನಾಯಕರು ಯಾರು? ಸದಸ್ಯರು ಯಾರು? ಇವಾವ ವಿವರಗಳೂ ಹೊರಬೀಳುವಂತಿಲ್ಲ. ಆದರೆ ಇತ್ತೀಚೆಗೆ ಇಂಥವುದೊಂದು ತಂಡದ ಚಟುವಟಿಕೆಗಳು ಮಾತ್ರ ಬೆಳಕನ್ನು ಕಂಡಿವೆ.

ಮೌ ಮೌ ತಂಡ

ಕೆನ್ಯಾದಲ್ಲಿ ಈ ತಂಡದ ಚಟುವಟಿಕೆಗಳು ಇತ್ತೀಚೆಗೆ ಉತ್ಕರ್ಷವಾಗಿ ಸಾಗಿವೆ. ಈ ತಂಡದವರು ಅನೇಕರ ಕೊಲೆಗೈದಿದ್ದಾರೆ. ನೂರಾರು ದನಕರು, ಕುದುರೆಗಳನ್ನು ಸಂಹರಿಸಿದ್ದಾರೆ ಅನೇಕಾನೇಕ ಮನೆಗೆ ಗುಡಿಸಲುಗಳನ್ನು ಸುಟ್ಟು ಬೂದಿ ಮಾಡಿದ್ದಾರೆ. ಅವರ ಘೋರ ಪ್ರತಿಜ್ಞೆ ಯೆಂದರೆ ಆಫ್ರಿಕಾ ಭೂಮಿಯಿಂದ ಯುರೋಪಿಯನ್ನರನ್ನು ಹೊರಗಟ್ಟುವದು. ಆದಕ್ಕಾಗಿ ಅವರು ಸಂಧಿ ಬೋರಿತಾಗೆಲ್ಲ ಕನ್ಯಾ ಬಳಿಎನಲ್ಲಿ ಬರುವ ಐರೋಪ್ಯರಿಗೆ ಕನ್ಯಾ ಕೈ ಕೋರಿಸುತಿದ್ದಾರೆ. ಈ ಜನರ ಉದ್ಧಾರಕ್ಕಾಗಿ ಕೆನ್ಯಾದ ಪೋಲೀಸ ಪಡೆ ಅವಿಶ್ರಾಂತ ಶ್ರಮ ಪಡುತಿದ್ದರೂ ಅವರ ಚಟುವಟಿಕೆಗಳನ್ನು ನಿಗ್ರಹಿಸುವದು ಕಷ್ಟವಾಗಿಲ್ಲ. ಇವರ ಉಪಟಳಕ್ಕೆ ಬೇಸತ್ತು ಬಿದರಿ ಬಿದ್ದ ಕೆನ್ಯಾದ ಶಾಸನ ಸಭಾ ಸದಸ್ಯರು ಈ ಸಮಸ್ಯೆಯನ್ನು ಬಿಡಿಸುವಲ್ಲಿ ನೆರವನ್ನು ಕೇಳಲು ಇಂಗ್ಲಂಡಕ್ಕೆ ಹೋಗಿ ಬ್ರಿಟಿಶ್ ಸರಕಾರದ ವಸಾಹತು ಮಂತ್ರಿಯ ಮೊದಲಿನ ಮನ್ನಣೆಯನ್ನು ಕೋರಿಕೊಂಡಿದ್ದಾರೆ.

ಈ ತಂಡದವರ ಸಂಖ್ಯೆ ವಿಪರೀತವಾಗಿ ಹೆಚ್ಚಿಲ್ಲವೆಂಬ ಮಾತು ಇದೆ. ಸದಸ್ಯತ್ವದ ಸಂಖ್ಯೆಯನ್ನು ದೊಡ್ಡದಾಗಿ ತೋರಿಸುವದಕ್ಕಾಗಿ ಈ ತಂಡದವರು ಹಠದನ್ನು ಒತ್ತಾಯದಿಂದ ಹಿಡಿದುಕೊಂಡು ಒಂದು ಗುಪ್ತ ಸ್ಥಳಕ್ಕೆ ಒಯ್ಯುವರು. ಅಲ್ಲಿ ತಮ್ಮ ನೆಂಬಿಕೆಯುಳ್ಳ ಒಳ್ಳೆ ಸದಸ್ಯನೆಂದು ಹೊರಗಾಗಿ ಹಿಡಿದುಯ್ದವರಿಗೆ ಸದಸ್ಯತ್ವದ ದೀಕ್ಷೆಯನ್ನು ಕೊಡಿಸುವರು.

ದೀಕ್ಷಾವಿಧಿ.

ಆ ದೀಕ್ಷಾವಿಧಿಯೂ ಅಮಾನುಷವಾಗಿ ವಿಚಿತ್ರವಿದೆ. ಆ ದೀಕ್ಷಾ ವಿಧಿಯಲ್ಲಿ ಆ ತಂಡಕ್ಕೆ ಅತ್ಯಂತ ಮಹತ್ವವಿರುವ ದೃಶ್ಯಗಾಗುವವನನ್ನು ಬಾಳೆಯ ಎಲೆಗಳಿಂದ ಪರಿಶೃಂಗರಿಸಿದ ಕವಾಪುಗಳಲ್ಲಿ ಹಾಯಿಸಿಕೊಂಡು ದೀಕ್ಷಾ ಮಂಟಪಕ್ಕೆ ಸಾಗಿಸಲಾಗುವದು. ಆ ಸ್ಥಳಕ್ಕೆ ಮುಟ್ಟಿದ ಕೂಡಲೆ ಅಡಿನ ರಕ್ತ ತುಂಬಿದ ಒಂದು ಪಾತ್ರೆಯನ್ನು ಅವನ ತಲೆಯ ಹತ್ತಲು ಏಳು ಏಳು ಸಾರಿ ತಿರಗಿಸಲಾಗುತ್ತದೆ. ಆ ನಂತರ ಅಡಿನ ಪಕ್ಕೆಲುಬುಗಳ ಕುದಿಸಿದ ಮಾಂಸವನ್ನು ಅವನ ಕಾಲಿನ ಹತ್ತಲು ಏಳು ಬಾರಿ ತಿರುಗಿಸಲಾಗುತ್ತದೆ. ಆ ನಂತರ ಕಂಪುಮಣ್ಣಾ ವಿಶ್ರೀ ಅಡಿನ ರಕ್ತವನ್ನು ಏಳು ಸಾರಿ ನೆಕ್ಕಬೇಕಾಗುತ್ತದೆ. ಇಷ್ಟಾದಾಗ ಅವನಿಗೆ ಸದಸ್ಯತ್ವದ ದೀಕ್ಷೆ ಕೊಟ್ಟಂತಾಗುವದು.

ಪ್ರತಿಜ್ಞೆ.

ಸದಸ್ಯತ್ವದ ದೀಕ್ಷೆ ಕೊಟ್ಟನಂತರ "ನಾನು ಮೌ ಮೌ ಸದಸ್ಯನಾಗಿದ್ದೇನೆ. ಈ ಪ್ರತಿಜ್ಞೆಯನ್ನು ಉಲ್ಲಂಘಿಸಿದರೆ ನನಗೆ ಮರಣ ಖಂಡಿತ' ಎಂದು ಅವನು ಪ್ರತಿಜ್ಞೆ ಕೈದುಕೊಳ್ಳಬೇಕಾಗುವದು. ಆ ಬಾದ ಮೇಲೆ ಕೊರತೆಗೆದ ಅಡಿನ ಕಣುಗುಡ್ಡೆಯಲ್ಲಿ ಅವನು ಒಂದು ದೊಡ್ಡ ಮಣಿಕನ್ನು ಚುಚ್ಚಬೇಕಾಗುವದು ಹೀಗೆ ಏಳು ಸಾರಿ ಅವನು ಮಾಡಬೇಕಾಗುವದು. ಮತ್ತೆ ಹೀಗೆ ನೂಹುವಾಗ ಪ್ರತಿ ಸಾರಿ ಅವನು 'ಎಲ್ಲ ಯುರೋಪಿಯನರನ್ನೂ ಕೊಲ್ಲುವದಾಗಿ ಪ್ರತಿಜ್ಞೆ ಮಾಡುವೆನು; ಪೊಲೀಸರಿಗೆ ಎಂದೂ ನೆರವಾಗಲಾರೆನು. ಆಫ್ರಿಕಾನಿಯರ ವಿರುದ್ಧ ಎಂದೂ ಸಾಕ್ಷಿ ಹೇಳಲಾರೆನು, ಮತ್ತು ಈ ಸಂಸ್ಥೆಯಿಂದ ಗಟ್ಟಿವನ್ನು ಎಂದೂ ಹೊರಗೆಡವಲಾರೆನು.' ಎಂದು ಪ್ರತಿಜ್ಞೆ ವಹಿಸಬೇಕಾಗುವದು. ಕೊನೆಗೆ ವಿಶಿಷ್ಟ ಶಿಲಿಂಗುಗಳನ್ನೂ ಒಂದು ಅಡಿನ ಮರಿಯನ್ನೂ ಈ ಸಂಸ್ಥೆಯ ಸದಸ್ಯತ್ವದ ಪಂಕ್ತಿಗೆಯೆಂದು ತಿಂಬಿ ನಂತರ ಸದಸ್ಯತ್ವದ ದೀಕ್ಷಾವಿಧಿ ಪೂರ್ಣವಾದಂತಾಯಿತು.

ಈ ಸಂಸ್ಥೆಯಲ್ಲಿ ಸೇರಲು ನಿರಾಕರಿಸಿದ ಹಲವರ ಕೈಕಾಲುಗಳ ಮೇಲೆ ಏಕಬಾರಿ ಶಸ್ತ್ರಕ್ರಿಯೆಯಾಗಿಬಿಟ್ಟಿದೆ. ಇನ್ನು ಹಲವರ ಕೊರಳಿಗೆ ಹಗ್ಗಹಾಕಿ ಅವರೂ ಒಪ್ಪುವ ವರೆಗೆ ಜಗ್ಗಲಾಗಿತ್ತು. ಅವರ ಕೊಳಕ ಮೇಲೆ ವಿಶ್ರ ಕಲಿಗಳು ಮಾಡಿದ್ದವು. ಈ ಸಂಗಡದವರಲ್ಲಿ ಯಾರಾದರೂ ಪೊಲೀಸರ ಕೈಗೆ ಸಿಕ್ಕಿ ಬಿದ್ದರೆ ನ್ಯಾಯಾಲಯಗಳಲ್ಲಿ ಅವರ ಸಂರಕ್ಷಣೆಗಾಗಿ ಹೋರಳು ಹಣ ವೆಚ್ಚವಮಾಡಲಾಗುತ್ತಿದೆ. ಅಷ್ಟೊಂದು ಹಣವಿದೆ ಈ ತಂಡದವರ ಬಳಿಯಲ್ಲಿ! ಈ ರೀತಿಯಾಗಿ ಈ ತಂಡದವರ ಬಗ್ಗೆ ವಿವರವೊಂದೆಕ್ಕೆ ಹೆಚ್ಚಿಲ್ಲ. ಪ್ರಬಲ ಪ್ರತಿಭಟನೆಯ ಮಾತ್ರ ಕೇಳಿಬರುತ್ತಿದೆ.

ಕೆನ್ಯಾಪ್ರಾಂತವು ಸುಮಾರು ಸಮೃದ್ಧ ಪ್ರಾಂತವಾಗಿದೆ. ಅಲ್ಲಿಯ ಜಮೀನುಗಳಿಂದ ಯಾವ ಬೆಳೆಯಾಗಲಿಲ್ಲ. ಹೀಗಾಗಲೆಂದು ಮೊದಲು ಅಲ್ಲಿ ನೆಲೆಯೂರಿ ವಿಶ್ವಾಸಗಳಿಂದು ಅಲ್ಲಿಯ ಆಡಳಿತ ಸಂಸ್ಥೆಯನ್ನು ಸೂರೆಮಾಡಬೇಕೆಂದು ಬಂದಿಯಲ್ಲ ಇವ್ಯಾಸ. ಆದರೆ ಈ ತಂಡದ ಕಾರ್ಯ ಇತ್ತೀಚೆಗೆ ವಿಪರೀತವಾಗಿ ಹೆಚ್ಚಿತ್ತ ಪಡೆದಿದೆ. ಆ ಕಾರ್ಯವನ್ನು ಕಂಡಕ್ಕಾಗಿ ಕೆನ್ಯಾದ ಪೋಲೀಸ್ ಪಡೆಯು ಕೆನ್ಯಾ ಪೊಲೀಸ್ ಪಡೆಯು ಕೆಲ್ಲಿಸಬೇಕೆಂದೂ ಈ ತಂಡದ ಮುಖಂಡನನ್ನು ಹೇಗಾದರೂ ಮಾಡಿ ಬಂಧಿಸಿ ಬೇಕೆಂದೂ ವಸಾಹತುಗಾರರ ಪ್ರತಿಭಟನೆಯಿದೆ. ಈ ಎಲ್ಲ ಆಗತ್ಯಕೆಗಳನ್ನೂ ಹೊಡೆದಟ್ಟಬೇಕೆಂದು ಈ ಮೌ ಮೌ ತಂಡದವರ ದೃಢಪ್ರತಿಜ್ಞೆ ಇದೆ. ಈ ತಿಕ್ಕಾಟದಲ್ಲಿ ಯಾರೂ ಗೆಲ್ಲುವರು ಯಾರೂ ಸೋಲುವರು, ನೋಡಬೇಕಾಗಿದೆ.

"ಜೈ ಹಿಂದ್"

ಅಮೇರಿಕೆಯ ಅಧ್ಯಕ್ಷ ಪದವಿ

ಇದೇ ತಿಂಗಳ ಕಾ. ೪ ರಂದು ಅಮೇರಿಕೆಯ ಅಧ್ಯಕ್ಷ ಪದದ ಆಯ್ಕೆಯು ಮತದಾನ ನಡೆಯಲಿದೆ. ಅಮೇರಿಕೆಯ ಅಧ್ಯಕ್ಷ ಪದಕ್ಕೆ ಒಟ್ಟು ೧೯ ಜನ ಹುರಿಯಾಳುಗಳು ಸ್ಪರ್ಧಿಸುತಿದ್ದಾರೆ. ಈಗ ಜನರಲ್ ಗ್ರೀನ್ ಬ್ಯಾಕ್ ಪಾರ್ಟಿಯಿಂದ ಫೆಡ್ ಪೊಲ್ ಎಂಬ ಕಿರಾಣಿ ಅಂಗಡಿ ಕಾರನು ಸ್ಪರ್ಧಿಸುತಿದ್ದಾನೆ. 'ಪ್ರೊಹಿಬ್ ಮ್ಯಾನ್' ಪಾರ್ಟಿಯಿಂದ ಹೆನ್ರಿ ಕ್ರಾವ್ ಫೆಟ್ಸ್ ಎಂಬ ಪಾನಾನಿಷೇಧಿಯವನು ಹೊಯಿಯೂಳಗಿದ್ದಾನೆ ಪ್ರೊಗ್ರೆಸಿವ್ ಸಾಕ್ಷ್ಯಿಯಿಂದ ನ್ಹಿಸ್ಟೆಂಟ್ ಹ್ಯಾಸ್ಲಿಟನ್ ಎಂಬ ವಕೀಲರೂ ಸ್ಪರ್ಧೆ ನಡೆಸಿದ್ದಾರೆ. ನೋ ಪಲಿಸ್ಟ್ ಪಾರ್ಟಿಯ ವತಿಯಿಂದ ಡಾಲಿಂಗ್ಟನ್ ಹೂಪ್ಸ ಎಂಬವರು ನಿಂತಿದ್ದಾರೆ. ನ್ಯೆಜಟೇರಿಯನ್ ಪಾರ್ಟಿಯಿಂದ ಬ್ರಿಗೇಡಿಯರ್ ಜನರಲ್ ಹರ್ಬರ್ಟ್ ಹೋಲ್ಡ್‌ಸಿಜ್ ಎಂಬವರು ನಿಂತಿದ್ದಾರೆ. ಚರ್ಚ್ ಆಫ್ ಗಾಡ್ ಎಂಬ ಧಾರ್ಮಿಕ ಪಕ್ಷದವರು ಹೋವರ್ ಟೊವ್ನಿನ್ ಎಂಬವರನ್ನು ನಿಲ್ಲಿಸಿದ್ದಾರೆ. ಮದ್ಯಪಾನ ಪ್ರತಿಬಂಧವಾದಿಗಳು ಸ್ಟ್ಯಟೆರ್ ಹ್ಯಾಂಪ್ಟೆನ್ ಎಂಬವರನ್ನು ಮುಂದೆ ಮಾಡಿದ್ದಾರೆ. ಅಮೇರಿಕಾ ಸ್ಟಾರ್ ಪಾರ್ಟಿಯವರು ಜನರಲ್ ನೇಕಾರ್ಧರನ್ನು ಅವರ ಒಪ್ಪಿಗೆ ಇಲ್ಲದೆ ಹುರಿಯಾಳಾಗಿ ಮಾಡಿದ್ದಾರೆ.

ಆದರೆ ನಿಜವಾದ ಸ್ಪರ್ಧೆ ಇದ್ದದ್ದು ಡೆಮೊಕ್ರೆಟಿಕ್ ಹುರಿಯಾಳಾದ ಮಿಸ್ಟರ್ ವನ್‌ಡನರಿಕನ್ ಪಕ್ಷದ ಪಿಚ್ಚಾಯ್ಟ್ ಈಶನ್ ಹೋವರ ನಡುವೆ. ಇವರಿಬ್ಬರೂ ಈಗ ಆಕ್ಷರಶಃ ಪ್ರಚಾರ ನಡೆದಿದ್ದಾರೆ. ಸ್ಟಿವನ್‌ಸನ್‌ರಿಗೆ ಅವೇ ಆಕದ ಜೊಲಿಗಾಣ ಪಕ್ಷದ ಅಧಿಕೃತ ದೊಣಲ ದೊರೆತಿದೆ. ಆದರೆ ಐಜನ್ ಹೋವರು ಅಮೇರಿಕೆಯ ಜನತೆಯ ಪ್ರೀತಿಗೆ ಪಾತ್ರರಾಗಿದ್ದಾರೆ. ಹೀಗಾಗಿ ಎರಡೂ ಪಕ್ಷಗಳಲ್ಲಿ ಒಳ್ಳೇ ತುರುಸಿನ ಸ್ಪರ್ಧೆ ನಡೆದಿದೆ. ಡೆಮೊಕ್ರೆಟಿಕ್ ಪಕ್ಷದ ವತಿಯಿಂದ ಸ್ಟಿವೆನ್‌ಸನ್‌ರನ್ನು ವಿಶೇಷವಾಗಿ ಪ್ರಚಾರ ಕಾರ್ಯಕ್ಕಾಗಿ ವಹಿಸಿ ಕೊಳ್ಳಲಾದ ಕಾರ್ಯವನ್ನು ಅಧ್ಯಕ್ಷ ಟ್ರೂಮನ್ನರೇ ನಡೆಸಿದ್ದಾರೆ. ಆಗಿನ ಪರಿಸ್ಥಿತಿಯನ್ನು ನೋಡಿದರೆ ಈಶನ್ ಹೋವರಿಗೆ ಹೆಚ್ಚು ಜೊಲವಿದ್ದಂತಿದೆ. ಅಧ್ಯಕ್ಷ ಅಮೇರಿಕೆಯ ಪಕ್ಷಗಳ ಅಧಿಕಾರಾವಧಿಯಲ್ಲಿಯೂ ಜಪಕ್ಷದ ಅಧಿಕಾರಾವಧಿಯ ಕಾಲದ ಪ್ರತಿಬಂಧವಾಗಿರುವದರಿಂದಾಗಿ ಇಂದು ಫಿಚ್ಚಿತವಾಗಿ ಇಂಥ ಪರಿಸ್ಥಿತಿಯಿದೆ ಎಂಬುದರಿಂದಲೇ ಹೇಳಬಹುದು ಆ ಪಕ್ಷಗಳಾವುವೆಂದು.

॥ ಲಲಿತ ಕಲೆಗಳು ॥

ಲೇ:—ಶ್ರೀ ಎ. ಕೆ. ಎಸ್. ಭಟ್, ಭಾಗಮಂಡಲ.

ಲಲಿತ ಕಲೆಗಳ ಉಜ್ವಲ ಅನುಭವ ಶಕ್ತಿಗಳ ಭಂಡಾರವೆಂದು ವಿಶ್ವವಲ್ಲಿತೇ ಜಪುಂಜವಾದ ಸ್ಥಾನವನ್ನು ಪಡೆದುಕೊಳ್ಳಲು ಕಾರಣ ಶಿಖರವನ್ನೇರಿ ರಾರಾಜಿಸುವ ನಮ್ಮ ಸರ್ವತಂತ್ರಸ್ವತಂತ್ರ ಭಾರತದಲ್ಲಿ ಶತ ಶತಮಾನಗಳಾದಿಯಿಂದಲೂ ಅದ್ಭುತ ಕೃತಿಗಳನ್ನು ಬೀರುತ್ತಿರುವ ಲಲಿತಕಲಾ ರಾಶಿಗಳಲ್ಲೊಂದು ಭಂಗಿಯೂದ ಶಿಲ್ಪಕಲೆಯೂ ಕೃತಿಯೂವ ತಾಜಮಹಲ್, ಅಜಂತಕಲಾ ಗುಹೆ, ಕುತಬ್ ಮಿನಾರ್, ಶಿಲ್ಪಶ್ರೇಷ್ಠ ಜಕಣಾಚಾರ್ಯ ನಿರ್ಮಿತ ಬೇಲೂರು ಭಗವದ್ಮಂದಿರ ಮುಂತಾದುವುಗಳು ಕಲಾ ಭಿರುಚಿಯು ಕಲಾ ಪ್ರಭಾವದಿಂದ ನಿರ್ಮಿಸಲ್ಪಟ್ಟ ಸ್ಥಿರತೇಜ ಕಲಾಕೃತಿಗಳೆಂದರೆ ಅಸಂಬದ್ಧ ಹುರುಳಿಲ್ಲದ ಉತ್ಪ್ರೇಕ್ಷೆಯಾಗಾರದು.

ಇಂದು ನಾಗರಿಕತೆಯು ತನ್ನ ಅನಂದಲಹರಿ ನೈತ್ಯವನ್ನು ನರ್ತಿಸುತ್ತಾ ನಗು ವಿಷಿಂದ ಮೇಲಕ್ಕೆದ್ದೇಳುತ್ತಿರುವ ಈ ದ್ವಿದಶ ಶತಮಾನದ ದ್ವಿಪಾದದಲ್ಲಿ, ಹಲವಾರು ವಿವಿಧ ಭಾಷೆಗಳನ್ನಾಡುವ, ವಿವಿಧ ಜೀವನಗಳ ಸರಪಣಿಯಲ್ಲಿ ಅಡಕವಾಗಿರುವ, ಮಾನವ ಸಮೂಹವು ತಮ್ಮ ಭೂವಿಯಲ್ಲಿ ವಿರಾಜಿಸುವ, ಪರರಾಜ್ಯದಲ್ಲಿ ರಾರಾಜಿಸುವ ಸ್ವತಂತ್ರವಾದ, ಶೇಜೋಮಯ ಕಲಾಕೃತಿಗಳನ್ನು ಪಕ್ಷಿಸಿ ಹರ್ಷರಾಗಲು ಲಲಿತ ಕಲೆಗಳೇ ಸಾಧನಗಳಾಗಿವೆ. ಜನರನ್ನಾಕರ್ಷಿಸಿರುವ ಕಾವ್ಯಕಲೆ, ಸಂಗೀತಕಲೆ, ನೃತ್ಯಕಲೆ, ಚಿತ್ರಕಲೆ ಮುಂತಾದ ಕಲೆಗಳಾ ಕಲಾರಾಶಿ ಲಲಿತ ಕಲೆಯು ಹಲವು ಪದಸ ಭಂಗಿಗಳಾಗಿವೆ.

ಇನ್ನು ಲಲಿತ ಕಲೆಗಳ ಉಪಯುಕ್ತತೆಯ ದೃಷ್ಟಿಯಲ್ಲಿ ಅವಲೋಕಿಸಿದರೆ ಲಲಿತ ಕಲೆಗಳು ಸೌಂದರ್ಯಕ್ಕಾಗಿ ಇದ್ದು ಸೌಂದರ್ಯತೆಯೇ ಅವರ ಪ್ರಮುಖ ಲಕ್ಷಣವೆಂದು ವೇದ್ಯವಾಗುವುದು.

ತತ್ವಾಂಶ ನುಡಿಯನ್ನು ನುಡಿದ ಹಲವು ವಿಖ್ಯಾತ ವಿಮರ್ಶಕರ ಅಂತಿಮ ವಿಮರ್ಶಾತ್ಮಕ ನುಡಿಗಳನ್ನು ಪಠಿಸಿದ ಲೋಕನ ಮಾಡಿದರೆ ವಿಶಿಷ್ಟ ಮನಸ್ಥಿತಿ ಯುಳ್ಳ ಗೋಚರವಾದ ಜೀವನದ ಒಂದು ಅಂಗವೇ ಕಲೆ' ಎಂದು ವಿದಿತವಾಗುವುದು. ಕಲೆಯು ಕಾರ್ಯರೂಪವಾಗಿ ಪ್ರಪಂಚಯನ್ನೀಯುವುದಾದರೆ, ಮನಸ್ಸಿನಲ್ಲಿರುವಿದಿಸ ಭಾವನೆಗೆ, ವಾಸ್ತವ ರಂಗಸ್ಥಲದಲ್ಲಿ ವಿಚಾರದ ರೂಪು ಕೊಟ್ಟ ಎಂಕ ಹೊಸಬ್ಬಿದ ಸೃಷ್ಟಿಸುವುದೇ ಕಲೆಯ ಕಾರ್ಯವೆಂದು ಹೇಳಬಹುದು.

ಇನ್ನೂ ಸ್ಥೂಲವಾಗಿ ವಿಮರ್ಶಿಸಿದರೆ "ಇಂದ್ರಿಯಾಂಗಳ ಬಾಹ್ಯ ವ್ಯಾಪಾರದ ಮುಖಾಂತರವಾಗಿ ಮೂರ್ತಿಸ್ವರೂಪ ತಾಳಿದ ಭಾವ ಲಹರಿಯೇ ಕಲೆಯೂಗಿದೆ' ಎಂದು ಸ್ಪಷ್ಟವಾಗುವುದು.

ಕಲೆಯು ಜೀವಾಳವೇ ಸೌಂದರ್ಯ. ಅದರ ಆಂತರಿಕ ಗುರಿಯೇ ಆನಂದ. ಕಲೆಯ ಸೌಂದರ್ಯತೆಯನ್ನು ಹೊಂದಬೇಕಾದರೆ ಕಲಾವಿದನಲ್ಲಿ ಸ್ಫೂರ್ತಿ ಲಹರಿ, ಸ್ವಾಭಾವಿಕ ನೈಸರ್ಗಿಕದ ನೈಜವಾದ ಜ್ಞಾನ, ಲಕ್ಷ ಣಗಳ ಪ್ರವಾಹ ಹೊರಹೊಮ್ಮಿದ ಹೊರತು ಹೊಂದಲಾರದು. ಅನುಕ್ರಮಣಿಕವಾಗಿ ಕಲೆಯನ್ನುದ್ದೇಶಿಸಿ, ಅಧಿಕವಾಗಿ ಅಂತ್ಯವಿಲ್ಲವಾದ ವಿವಾದದ ಪ್ರವಾಹವನ್ನು ಹರಿಸಬಹುದು.

ಕಡೆಯದಾಗಿ ಕಲೆಯು ತಳಹದಿಯೇ ನೀತಿ. ಕಲೆ ಉತ್ಪನ್ನಕತೆಯನ್ನು ಉತ್ಪಾದಿಸಿದರೆ ನೀತಿ ಉದಾತ್ತತೆಯನ್ನು ಉತ್ಪನ್ನ ಮಾಡುವುದು. ಅಂತರ ಕಲೆ ಮತ್ತು ನೀತಿಯ ಬಾಂಧವ್ಯತೆ ಸ್ಥಿರವಾದದ್ದು.

ಈ ವೈಜ್ಞಾನಿಕ ಯುಗದಲ್ಲಿ ಇಂದಿನ ಸಮಾಜಕರು ಕಲೆ ಮತ್ತು ವಿಜ್ಞಾನವನ್ನು ತನ್ನ ಜ್ಞಾನಸೀಮೆಯಲ್ಲಿ ಒರೆದು ಕಲೆಯು ಒಂದು ವಿಲಾಸ ವಸ್ತು ಮತ್ತು ವಿಜ್ಞಾನವು ಮಾನವ ಜೀವನದ ಅನುನಿತ್ಯದ ಉಪಯೋಗವನ್ನು ಸತ್ಯಾಂಶವಿಲ್ಲದ ವಿಷಯ ತೀರ್ಮಾನಿಯುತ್ತಾರೆ. ನೈಜಸ್ಥಿತಿಯನ್ನು ಉಪಯೋಗಿಸುವುದೇ ಆದರೆ ಕಲೆಯೂ ಅಂತರ್ವಿಕಾಸಕ್ಕೆಡೆಗೊಟ್ಟಿರಿ ವಿಜ್ಞಾನವು ಜೀವನಕ್ಕೆ ಸಹಕಾರಿ ಎಂದು ಸ್ಥೂಲ ವ್ಯಾಖ್ಯೆ ಹೇಳಬಹುದು.

ಜೀವನದಲ್ಲಿ ಕಲೆಯನ್ನು ಬಿಟ್ಟು ಕೇವಲ ಉದರ ಪೋಷಣೆಯನ್ನು ಮಾಡುತ್ತಾ ಬಾಳನ್ನು ಸಾಗಿಸಿದರೆ ಅಂತಹ ಜೀವನವು ಮಿಕ್ಕ ಕೀಳು ವರ್ಗದ ಪ್ರಾಣಿಗಳ ಬಾಳ್ವೆಯೆಂದಲೂ ಕಳಪಟ್ಟಿರಿ ಸುನ್ನಡೆಯಾಗುವುದು. ನಾಗರಿಕತೆ, ಧನ, ಸ್ವಕೀಯೊಬ್ಬ ಜ್ಞಾನಕ್ಕೆ ಮಾನವನಿಗೂ ಬೇಕಾಗುವಾಗ್ಯೆ ಕಲೆಯನ್ನಗಲಿ ಯಾವ ಜೀವಿಯೂ ಮುನ್ನಡೆಯಬಾರದೆಂದೇ ನನ್ನ ಸಲಹೆ. ಇದನ್ನವಲೋಕಿಸಿದೆ ಮುನ್ನಡೆದರೆ ಆತನ ಜೀವನವು ನೈಜವಾದ ಸುಸಂಸ್ಕೃತ ಜೀವನವಾಗದೆ, ಆತನು ಈಗ ಪನ್ನಿಲ್ಲಿದ್ದ ಬುದ್ಧಿಹೀನ್ಯತೆಯನ್ನು ಪ್ರದರ್ಶಿಸುವ ಹಾಸ್ಯಾಸ್ಪದ ಜೀವಿಯಾಗುತ್ತಾನೆಂದೇ ನನ್ನ ವಾದವಾಗಿದೆ.

ಜನಾಂಗದ ನಾಡಿ ವೈಶಿಷ್ಟ್ಯವೇ ಕಲೆಯಿಂದ ನಿರ್ಧಾರವಾಗುವುದು. ವೇಷ ಭೂಷಣಗಳು, ಆಡಂಬರಗಳು ವ್ಯಕ್ತಿಯ ಸ್ವರೂಪವನ್ನು ವ್ಯಕ ಪಡಿಸುವುದಾದರೆ ಕಲೆ ಜನಾಂಗದ ಅತ್ಯ ಪರಿಚಯವನ್ನೇ ವ್ಯಕ್ತಪಡಿಸುವುದು. ಕಾಲಚಕ್ರದ ಉರುಳುವಿಕೆಯ ಫಲಿತಾಂಶದಿಂದ ಜೀವರಾಶಿಗಳು ನಿರ್ನಾಮವಾಗುತ್ತಿದ್ದರೂ ಅಮರ ಕಲೆಯು ನಿರ್ನಾಮವನ್ನೆಯ್ದದಿಲಾರದು.

ಇಂದು ನಮಗೆ ಹಿಂದಿನ ನೈಭವದ ವಿಚಾರಸರಣಿಯನ್ನೀಯುವ ಇತಿಹಾಸದ ಪುಟಗಳೆಲ್ಲ ಸ್ಥಿರ ತೇಜೋಮಯ ಕಲೆಯ ಸಂಪರ್ಕಾಧಾರತೆಯಿಂದ ಸತ್ಯಾಂಶ ದ್ಯಾಂತವಾಗಿದೆ. ಅಂತಹ ಇತಿಹಾಸಗಳಿಗೆ ಕಲೆಯೂ ಸಂಪರ್ಕವಿಲ್ಲದಿದ್ದಿದ್ದರೆ ಇತಿಹಾಸಗಳೆಲ್ಲ 'ಇತಿಹಾಸ' ಎಂಬ ಹಾಸ್ಯಾಸ್ಪದ ವ್ಯಾಖ್ಯಾನಕ್ಕೆ ತಿಬಾಗಬೇಕಾಗುತ್ತಿತ್ತು.

ಕಲೆಯಿಂದ ಮಾನವಕೋಟಿಗೆ ಎಣೆ ಸಲಸಾಧ್ಯವಾದ ಉಪಯೋಗಗಳನ್ನೆ ಉದಾಹರಣಾರ್ಥವಾಗಿ ಲಲಿತ ಕಲೆಯು ಒಂದು ಭೂಮಿಯೊದ ಗಾಯನ ಕಲೆಯನ್ನು ತೆಗೆದುಕೊಂಡರೆ ತನ್ನ ನೈಜವಾದ ಕಲಾ ಪ್ರಭಾವವನ್ನು ಮಾನವರ ಮೇಲೆ ಬೀರಿ ಎಷ್ಟು ವಿರ ಜೀಕುತ್ತದೆಂಬುದನ್ನು ವಿಜ್ಞಾನ ಮತ್ತು ಗವಾಕ ಕಲಾ ಮಂಥನ ಪರಿಣಾಮವಾಗಿ ಉದ್ಭವಿಸಿದ ಟೆಲಿವಿಷನ್, ರೇಡಿಯೋ, ಗ್ರಾಮೊಫೋನ್, ಪಿಯಾನೋ, ಮುಂತಾದ ಗವಾಕಲಾ ಉಪಕರಣಗಳ ಉಪಯುಕ್ತತೆಯ ಪ್ರಭಾವದಿಂದ ನಿಶ್ಚಯವಾಗುವುದು. ಇದರಿಂದ ಕಲೆಯು ವಿಶ್ವವ್ಯಾಪಿದ ಲೋಲುಪತೆಯಲ್ಲಿ ಅನಂದದ ಮಿಂಚನ್ನೂ ಪ್ರಾಣಮಯ ಸಂದಿಗ್ಧ ವಾತಾವರಣದಲ್ಲಿ ಸಮಾಧಾನದ ಕಾಂತಿಯನ್ನೂ ವಿಂಚಿಸುವುದೆಂದು ಸ್ಪಷ್ಟವಾಗುವುದು.

ಇಂದಿನ ಸಮಾಜಕ್ಕೆ ಬಡವ ಬಂಡವಾಳ, ಬ್ರಹ್ಮ, ಶೂದ್ರ ಎಂಬ ವಿಕಾಸ ಪ್ರದವಾದ ಭೇದಭಾವನೆಗಳಿದ್ದರೂ ಅನುಪಮ ಕಲೆಗೆ ಆ ತರಹದ ತೊಂಚಿತ್ ಭಾವನೆಗಳಿಲ್ಲದೆ, ಅದು ವಿಶಾಲ ಹೃದಯದ್ದಾಗಿದ್ದು ನೈಜವಾದ ಕಲಾಸ್ಫೂರ್ತಿಪ್ರೇರಿಸುವ ಯಾರಲ್ಲೂ ಪ್ರಸನ್ನವಾಗಲು ಸರ್ವಸಿದ್ಧವಾಗಿರುವುದು.

ಅದ್ದರಿಂದ ಪ್ರತಿಯೊಬ್ಬ ಪ್ರಾಪಂಚಿಕನೂ, ಜೀವನದ ನಮರ ಸಂಗ್ರಾಮ ರಂಗದಲ್ಲಿ ಪರಿಸ್ಥಿತಿಯನ್ನು ಪ್ರತಿಭಟಿಸುತ್ತಾ ನುನ್ನಡೆಯುವುದಕ್ಕೆ ಲಲಿತ ಕಲೆಯು ಯಾವ ಭಂಗಿಯನ್ನಾದರೂ ಆಂಧಿಸುತ್ತಾ ನುನ್ನುನ್ನಿದರೆ ಆ ಆತನ ಜೀವನ ಸಾರ್ಥಕವಾಗುವುದು. ವೈಜ್ಞಾನಿಕ ಪ್ರಭಾವವು ತಂಬ ತಳುಕುಹಾಕಿರುವ ಈ ವಿಜ್ಞಾನ ಯುಗದಲ್ಲಿ ಪುನಃ ವಿಜ್ಞಾನವು ಜೀವನ ಸಂಗ್ರಾಮ ರಂಗದ ತಳಹದಿಯೆಂದು ಭಾವಿಸಿದರೆ ಆಗ ಕಲೆಯು ಅದರ ತೇಜೋಮಯ ಕಳಕ. ವಿಜ್ಞಾನದಿಂದ ಜಗತ್ತು ನೈಜವಾದ ವೈಜ್ಞಾನಿಕ ಜಗತ್ತಾದರೆ ಕಲೆಯಿಂದ ವಿಶ್ವವು ಕಲಾ ವಿಶ್ವವಾಗಿ ಕಂಗೊಳಿಸಿ ಸ್ವರ್ಗವನ್ನು ನಾಚಿಸುವಂತಾಗಿ, ಭೂಸ್ವರ್ಗವೇ ಅಗುವದಿಂದೆನ್ನುವುದು ವಾದ. ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ವಿರಾಜಿಸುವ ಶ್ರೇಷ್ಠ ಅನ್ಯ ಕಲಾರಾಧಕರಾಗಿದ್ದ ಕಾಳಿದಾಸ, ವಾಲ್ಮೀಕಿ, ಪಂಪ, ವೀರನಾರಾಯಣ, ರನ್ನ ಮುಂತಾದವರೂ ಗವಾಕಲಾ ಶ್ರೇಷ್ಠರಾಗಿದ್ದ ತ್ಯಾಗಯ್ಯ, ಕನಕದಾಸ, ಪುರಂದರದಾಸ ಮೊದಲಾದವರೂ, ಶಿಲ್ಪಕಲಾ ನಿಪುಣರಾದ ಜಕಣಾಚಾರಿ, ಡಂಕಣಾಚಾರ, ಮತ್ತೆ ನಿನ್ನಿಲೂ, ನೃತ್ಯಕಲಾ ಜತುರರಾಗಿದ್ದ ಭರತ ಮತ್ತು ಈಗ ತಮ್ಮ ಚತುರತೆಯನ್ನು ವಿಶ್ವದಲ್ಲೆಲ್ಲಾ ಪ್ರದರ್ಶಿಸಿ ಕೀರ್ತಿವಂತರಾದ ಉದಯಶಂಕರ್ ಮುಂತಾದ ವಿಶ್ವವಿಖ್ಯಾತರು ಭಾರತದ ನಭೋಮಂಡಲದಲ್ಲಿ ಮಹಾಜ್ಯೋತಿಗಳಂತೆ ಉದಿಸಿ ಭಾರತವನ್ನು ತಮ್ಮ ಕಲಾ ನೈಪುಣ್ಯತೆಯಿಂದ ವಿಶ್ವಶ್ರೇಷ್ಠ ಕಲಾ ಬೀಡೆಂಬುದಾಗಿ ವಿಖ್ಯಾತಿಸಿ ಭಾರತಕ್ಕೆ ವಿಶ್ವದಲ್ಲೆಲ್ಲಾ ತೇಜಪುಂಜವಾದ ಸ್ಥಾನವನ್ನು ಕೊಟ್ಟಿದ್ದಾರೆ.

ಇಂತಹ ವಿಚಕ್ಷಣ ಕಲಾ ಪರಿಪೂರ್ಣ ತೇಜೋಮಯ ಕಲಾ ಪ್ರಗತಿ ಪಥದಲ್ಲಿ ಸ್ಪಷ್ಟವಾಗಿ ಭಾರತೀಯನೂ, ಭಾರತೀಯಳೂ, ಅತ್ಯಧಿಕ ನಿಷ್ಠೆ ಉತ್ಸಾಹದಿಂದ ಮುನ್ನಡೆಯೂ ಶ್ರೇಷ್ಠ ಕಲಾಕೋವಿದರೂ, ಪ್ರಪಂಚೀಯ ಸಾಮ್ರಾಜ್ಯಶಾಹಿಯು ತುಳಿತಲ್ಲಿ ಅನಾದರಣೀಯವಾದ ತೇಜೋಭಂಗದ ಯಾತನೆಯನ್ನು ಅನುಭವಿಸುತ್ತಿದ್ದು ಈಗ ಸರ್ವತಂತ್ರ ಸ್ವತಂತ್ರಾಳಾದ ಭಾರತಾಂಬೆಯನ್ನು ಇನ್ನೂ, ಇನ್ನೂ ಉತ್ಕೃಷ್ಟ ಕಲಾ ಕೃತಿಗಳಿಂದ ಶೃಂಗರಿಸಿ,

ಜೈ ಹಿಂದ್

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

ಕೊ.ಆ.ಸ.ಸಂ.(No) ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿಸಲಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊತ್ತಗಳು	ರೂ.	2,09,000
ಸ್ಥಿರನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಗೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೊಸದಾಗಿ ಸಹಕಾರ ಸಂಘಗಳನ್ನೇನೇ ಸಾಲ ಕೊಡುವುದಕ್ಕೆ ಮುಂಚೆ ಬಿನ್ನ ಮತ್ತು ಜಿಲ್ಲೆಯ ನಗರಗಳ ಈದಿನ ಮೇಲೆ ಸಹ ಸಾಲ ಕೊಡಲಾಗುವುದು. ಬೆಳೆ ಯಾ ಜಾಮೀನ್ದಾರಗಳ ಡಿಪೆಂಟು ಮಾಡಲ್ಪಡುವುದು. ಟ್ರಸ್ಟಿಗಳು, ಮಾರ್ಚೆಂಟ್ ಮತ್ತು ವಿಶ್ವಧಾರಕ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಕಟ್ಟವನ್ನು ಕೊಂಡಿ ಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಶಾಖೆಗಳಿಂದ ತಿಳಿದುಕೊಳ್ಳಬಹುದು.

ಎ. ಎಸ್. ಸೋಮಯ್ಯ
ಜಾ. ಕಾರ್ಯದರ್ಶಿ,

ಕೆ. ಸಿ. ಅಪ್ಪಯ್ಯ
ಪ್ರಸಿಡೆಂಟ್ ಮತ್ತು ಮ್ಯಾನೇ.

Edited, Printed and Published by P. L. Belliappa
'Kodagu' Press, Mercara, for Kodagu Ltd.

Licence No. 60.
Licenced to Post without Prepayment.

Reg. No. M. 1050.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೮–೦–೦.

ಸಂಪುಟ ೩೧ | ವಾರೀಕು ೧೪–೧೧–೧೯೩೮ನೇ ಶುಕ್ರವಾರ | ಸಂಖೆ ೨೩

ಕೃಷೀಯ

ಕ್ಷಯರೋಗ ಸೀಲುಗಳ ಮೂರಾಟ.

ತಾ. ೨—೧೦—೩೨ರಿಂದ ೨೩—೧—೩೨ರ ವರೆಗೆ.

[ಶ್ರೀ ಟಿ ಬಿ ಮೇದಪ್ಪ, ಸಿವಿಲ್ ಸರ್ಜನ್, ಕಾರ್ಯದರ್ಶಿ, ಕ್ಷಯರೋಗ ಸೀಲ್ ಮೂರಾಟ ಸಮಿತಿ]

ಡಾ. ವಿ—ನಮ್ಮ ದೇಶದಲ್ಲಿ ಸುಮಾರು ಏಳೆಂಟು ವಿಧಿಯ ಏಕ್ರೆ ಜಮೀನಿನಲ್ಲಿ ಬತ್ತದ ವ್ಯವಸಾಯವಾಗುತ್ತದೆ. ಒಂದೊಂದು ಸಂಸಾರಕ್ಕೆ ಸರಾಸರಿಯಾಗಿ ಒಂದೇ ಮೂರು ಏಕ್ರೆ ಬತ್ತದ ಜಮೀನು ಇದೆ. ಇದರ ವ್ಯವಸಾಯವನ್ನು ರೈತರು ಮತ್ತು ಅವರ ಕುಟುಂಬದವರೆಲ್ಲರೂ ಸೇರಿ ಬಹು ಮಾತುಜಾಣ ಪಡಿಸಿಕೊಳ್ಳುವಂತೆ ಮಾಡಿ ಹೊಸ ಹೊಸ ತೋಟಗಳನ್ನು ನೋಡಿಕೊಳ್ಳುವಂತೆ ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾರೆ ಹುಲಿಯೊಂದು ಹಳ್ಳಿಗೂ ಒಂದೊಂದು ಸಹಕಾರ ಸಂಘವಿದೆ. ಹುಲಿಯೊಬ್ಬ ರೈತನೂ ತನ್ನ ಉಳುವರಿ ಬೆಳೆಗಳನ್ನೆಲ್ಲಾ ಈ ಸಹಕಾರ ಸಂಘಗಳ ಮುಖಾಂತರವೇ ಮಾರುವುದಲ್ಲದೆ ತನಗೆ ಬೇಕಾದ ಗೊಬ್ಬರ ಹತ್ಯಾರು, ಸಾಧನಗಳು ಉತ್ತಮ ಬೀಜ ವಗೈರೆಗಳೆಲ್ಲವನ್ನೂ ಸಹ ಸಂಘಗಳ ಮೂಲಕವೇ ಒದಗಿಸಿಕೊಳ್ಳುತ್ತಾನೆ. ರೈತರೆಲ್ಲರೂ ಸಾಕನ್ನು ಗೊಬ್ಬರ ಹಾಕಿ, ಬೇಕಾದಷ್ಟು ನೀರನ್ನು ಒದಗಿಸಿಕೊಂಡು ಬಹಳ ಜಾಗರೂಕತೆಯಿಂದ ಆಗೆದು ಪಾತಿಗಳನ್ನು ಮಾಡಿ, ಅನಂತ್ಯ ಯಾವ ತರದ ರೋಗಗಳೂ ಬಾರದಂತೆ ಸಕಾಲದ ಔಷಧೋಪಚಾರಗಳನ್ನು ಮಾಡಿ ಪೈರು ಳೆದುಕೊಳ್ಳುತ್ತಾನೆ. ಪೈರು ಹಾಕಿದ್ದು ಬೆಳೆ ನಂತರ ಅವುಗಳನ್ನು ಕ್ರಮಪ್ರಕಾರ ತಯಾರಿಸಿದ ಗದ್ದೆಗಳಲ್ಲಿ ಒಂಭತ್ತು ಹತ್ತು ಅಂತರದಲ್ಲಿ ಒಂದೊಂದು ಗುಳಿಯಲ್ಲಿ ನಾಲ್ಕು ಅಥವಾ ಐದು ಸಸಿಗಳಂತೆ ನೆಟ್ಟಿಗಿನ ಸಾಲುಗಳಲ್ಲಿ ನೆಡುತ್ತಾರೆ. ಗೊಬ್ಬರವನ್ನು ಯಥೇಚ್ಛವಾಗಿ ಉಪಯೋಗಿಸುತ್ತಾರೆ. ಸಾಧಾರಣವಾಗಿ ಒಂದೊಂದು ಏಕ್ರೆಗೆ 80ರಿಂದ 100 ಪೌಂಡುಗಳಷ್ಟು ಸಾರಜನಕ, 70ರಿಂದ 80 ಪೌಂಡುಗಳಷ್ಟು ಪೊಟೇಷ್ ಲವಣ ಮತ್ತು ಜಜ್ಜಿದ ಗಂಜಿಕಾಗಳನ್ನು ಕೊಡುವ ಗೊಬ್ಬರಗಳನ್ನು ಉಪಯೋಗಿಸುತ್ತಾರೆ. ಅಲ್ಲದೆ ಹಸಿ ಸುಪ್ಪಿನ ಗೊಬ್ಬರಗಳನ್ನು ಸಹ ಜನರು ಬತ್ತದ ಬೆಳೆಗೆ ತುಂಬಾ ಉಪಯೋಗಿಸುತ್ತಾರೆ ದೇಶದ ಎಲ್ಲಾ ಭಾಗಗಳಲ್ಲಿಯೂ ನೀರಾವರಿ ಸೌಲಭ್ಯಗಳು ತುಂಬಾ ಇವೆ. ಇದರಿಂದ ನೀರಿನ ಸರಬರಾಯಿಯು ದೇಶದಲ್ಲೆಲ್ಲಾ ಚೆನ್ನಾಗಿದೆ. ಟ್ರಾಕ್ಟರ್ ರಂ ಮೊದಲಾದ ಯಂತ್ರೋಪಕರಣಗಳನ್ನು ಜನರು ಕಸ್ತೂರಿನೂ ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ. ಕಳೆಯನ್ನು ಆಗಾಗ್ಗೆ ತೆಗೆದು ಒಂದೆರಡು ಕಳೆ ಬೆಳೆಯದಂತೆ ನೋಡಿಕೊಳ್ಳುತ್ತಾರೆ.

ಸು:—ಜಪಾನಿನಲ್ಲಿ ಭತ್ತದ ಉತ್ಪತ್ತಿಯು ಎಷ್ಟು ಹೆಚ್ಚಾಗಿದೆ ಬಂದಿದೆ?

ಡಾ. ವಿ:—ನಾನು ಈ ಮೊದಲೇ ಸೂಚಿಸಿದಂತೆ ರೈತರೆಲ್ಲರೂ ಭತ್ತದ ವ್ಯವಸಾಯಕ್ಕೆ ವಿಶೇಷ ಗಮನಕೊಡುವುದೇ ಮುಖ್ಯ ಕಾರಣವಾಗಿದೆ. ಅಲ್ಲದೆ ಪ್ರತಿಯೊಬ್ಬನೂ ಹೆಚ್ಚಿನ ಸ್ಪರ್ಧಾತ್ಮಕಗಳನ್ನು ನಡೆಸುವ ಸರಕಾರದ ನಿಯಮಗಳ ಫಲಿತಾಂಶವನ್ನು ತಿಳಿದುಬಂದು ಕಾಲಕಾಲಕ್ಕೆ ಅಭಿವೃದ್ಧಿಪಡಿಸುವ ಉತ್ತಮ ಸಲಹೆಗಳು ದೊರೆತ ಕೂಡಲೇ ತಮ್ಮ ತಮ್ಮ ಹಿಡುವಳಿಗಳಲ್ಲಿ ಅವುಗಳನ್ನು ಜಾರಿಗೆ ತರುತ್ತಾರೆ. ರೈತರಿಗೆ ಇಂಥಾ ಸಲಹೆಗಳನ್ನು ಕೊಡಲು ಸರಕಾರದಿಂದ ನೇಮಿಸಲ್ಪಟ್ಟ ಸುಶಿಕ್ಷಿತರಿಂದ ಸುಮಾರು 10000 ಜನ ಸಲಹೆಗಾರರು ಅಂಗಡಿ ಪ್ರತಿ ಹಳ್ಳಿ ಬಾಲ ವೃಲು ವಿಸ್ತೀರ್ಣಕ್ಕೆ ಒಬ್ಬೊಬ್ಬ ಸಲಹೆಗಾರರಂತೆ ಇದ್ದಾರೆ. ಹಲವು ವರ್ಷದ ಎರಗೆ ಬಿಡದ ನಡೆಸಿದ ಸರಕಾರದ ಯೋಜನೆಯು ಫಲವಾಗಿ ತಿಮ್ಮಲ್ಲಿ ಅನೇಕ ಜಾತಿ, ಹೆಚ್ಚು ಫಲ ಕೊಡುವ, ರೋಗ ಹತೋಟಿಯಲ್ಲಿ ಹೆಚ್ಚಿಗೆ ಸಹಿಸಿ ದ್ವಿಯಾಗಿ ಬೆಳೆಯುವ, ರೋಗನುಜೆಗಳು ತುಂಬಿದ ಭತ್ತದ ಬೀಜಗಳು ಈಗ ನಮ್ಮಲ್ಲಿವೆ. ಅನೇಕ ಬಂಜರು ಪ್ರದೇಶಗಳನ್ನೂ, ಸಾರ ಕೆಟ್ಟಿದ್ದ ಭೂಮಿಗಳನ್ನೂ ಶಾಸ್ತ್ರ ರೀತಿ ಕಾರ್ಯಕ್ರಮಗಳನ್ನು ಕೈಕೊಂಡು, ಫಲಭರಿತವಾಗಿ ಮಾಡಿದ್ದೇವೆ. ಅಲ್ಲದೆ ಭತ್ತದ ಬೆಳೆಗೆ ಎಸ್ಟರ ಮಟ್ಟಿಗೆ ಗೊಬ್ಬರ ಹಾಕಬಹುದು, ಯಾವ ಯಾವ ಸಮಯದಲ್ಲಿ ಯಾವ ಯಾವ ಗೊಬ್ಬರಗಳನ್ನು ಹಾಕಬಹುದು ಎಂಬ ವಿಚಾರದಲ್ಲಿ ಪರಿಶೋಧನೆ ನಡೆಸಿ ಅಂದ ಫಲಿತಾಂಶಗಳನ್ನು ರೈತರೆಲ್ಲರೂ ಅನುಸರಿಸುತ್ತಾರೆ. ಗೊಬ್ಬರಗಳನ್ನು ಮಣ್ಣಿನೊಳಗೆ ಎಷ್ಟೂರು ನಾಲ್ಕು ಇಂಚು ಆಳದಲ್ಲಿ ಹಾಕುವುದರಿಂದಲೂ ನೆಟ್ಟಿ ಮೂರು ವಾರಗಳ ನಂತರ 'ಅಮೋನಿಯಂ ಸಲ್ಫೇಟ್' ಗೊಬ್ಬರವನ್ನು ಮೇಲೆ ಹರಡುವುದರಿಂದಲೂ ಬೆಳೆಯು ಬಲಾಢ್ಯವಾಗಿ ಬೆಳೆಯುವುದನ್ನು ಕಂಡು ಹಿಡಿದುದನ್ನು ರೈತರೆಲ್ಲರೂ ಅನುಸರಿಸುತ್ತಿದ್ದಾರೆ. ಇದೆಲ್ಲಾ ಕ್ರಮಗಳನ್ನು ಕೈಕೊಂಡು ಎಲ್ಲರೂ ಶ್ರಮವಹಿಸಿ ಕೆಲಸ ಮಾಡುವುದರಿಂದ ನಮ್ಮ ದೇಶದ ಭತ್ತದ ಪರಾಸರಿ ಉತ್ಪತ್ತಿಯು ಹೆಚ್ಚಾಗಿದೆ.

ಸು—ಕೊಡಗಿನ ವ್ಯವಸಾಯ ಕ್ರಮವನ್ನು ನಾನು ನಿಮಗೆ ವಿವರಿಸುತ್ತೇನೆ. ಕೊಡಗಿನಲ್ಲಿ ಭತ್ತದ ಉತ್ಪತ್ತಿಯನ್ನು ಹೇಗೆ ಇನ್ನೂ ಹೆಚ್ಚಿಸಬಹುದೆಂದು ದಯವಿಟ್ಟು ಸೂಚಿಸುವಿರಾ?

ಡಾ. ವಿ—ನಿಮ್ಮ ಕೊಡಗಿನಲ್ಲಿ ಭತ್ತದ ಬೆಳೆಯು ಹಿಂದೂ ದೇಶದ ಇತರ ಕಡೆಗಳ ಬೆಳೆಗಳಿಗಿಂತ ಹೆಚ್ಚಾಗಿದೆ. ಕೊಡಗಿನ ವಾತಾವರಣವು ಭತ್ತದ ಬೆಳೆಗೆ ಬಹು ಮಟ್ಟಿಗೆ ಅನುಕೂಲವಾಗಿದೆಯೆಂದು ನಾನು ನಂಬುತ್ತೇನೆ. 'ಅಮೋನಿಯಂ' ಸಲ್ಫೇಟ್ ಇತ್ಯಾದಿ ರಸಾಯನಿಕ ಗೊಬ್ಬರಗಳನ್ನು ಹೆಚ್ಚಾಗಿ ಉಪಯೋಗಿಸುವುದು ಕಷ್ಟವೇನೂ ಹಿತಕರವಲ್ಲವೆಂದು ನನಗೆ ತೋರುತ್ತದೆ. ಕೊಡಗು ಶೀತ ಪ್ರದೇಶವಾದುದರಿಂದ ಈ ಗೊಬ್ಬರಗಳಿಂದ ಬೆಳೆಯು ಸೊಂಪಾಗಿ ಬೆಳೆದರೂ ಭತ್ತವು ಆಷ್ಟೇನೂ ಹೆಚ್ಚಾಗಲಾರದು. ಬದಲು ಹಟ್ಟಿ ಗೊಬ್ಬರ, ಸೊಪ್ಪು ಗೊಬ್ಬರ, ಕಂಪೋಸ್ಟು ಗೊಬ್ಬರ ಇತ್ಯಾದಿ ಸಾಮಾನ್ಯ ಗೊಬ್ಬರಗಳನ್ನು ಹೇರಳವಾಗಿ ಉಪಯೋಗಿಸುವುದಲ್ಲದೆ ಗದ್ದೆಗಳಿಗೆ ಸುಣ್ಣವನ್ನು ಹಾಕುವುದು ನಿಮ್ಮ ಭೂಮಿಯಲ್ಲಿ ಕಬ್ಬಿಣ ಮತ್ತು ಅಲ್ಯುಮಿನಿಯಂ ಹೆಚ್ಚಾಗಿರುವುದರಿಂದ, ರಂಜಕ ಸಾರವನ್ನು ಕೊಡುವ ಗೊಬ್ಬರಗಳೂ ನಿಮಗೆ ಸಹಕಾರಿಯಾಗುವುದು. ಗೊಬ್ಬರಗಳನ್ನು ಹಾಕುವ ವೇಳೆ ಮತ್ತು ಪ್ರಮಾಣವನ್ನು ನಿರ್ಧರಿಸಲು ಸರಿಯಾದ ಪರೀಕ್ಷೆಗಳನ್ನು ನಡೆಸಲು ವ್ಯವಸ್ಥೆಯನ್ನು ಒಳೆಯದು. ಅಲ್ಲದೆ ಉತ್ತಮ ಜಾತಿಯ ಮತ್ತು ಹೆಚ್ಚಿಚ್ಚು ಫಲಕೊಡುವ ಬತ್ತದ ಬೀಜಗಳನ್ನು ಬೇಗನೆ ಲಭ್ಯವಾಗುವಂತೆ ರೈತರೆಲ್ಲರಿಗೂ ಒದಗಿಸಿಕೊಡಬೇಕು ಹಸಿರೆಲೆಪ್ಪಿನ ಗೊಬ್ಬರವು ಭತ್ತದ ಬೆಳೆಗೆ ಬಹಳ ಒಳ್ಳೆಯದೆಂದು ನಿಮ್ಮ ನೆರೆಯ ರಾಜ್ಯಗಳ ಅನುಭವಗಳಿಂದ ನಿಮ್ಮ ರೈತರೂ ಕೂಡ ಇದನ್ನು ಹೆಚ್ಚಾಗಿ ಉಪಯೋಗಿಸುವುದರಿಂದ ಪ್ರಯೋಜನವಾದಿತು.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕಂಪನಿಯ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಆಫ್ ರಿಜಿಸ್ಟ್ರೇಷನ್ ದಿನಾಂಕ. (1921ರ ಸಹಕಾರಿ ಕಾಯ್ದೆಯಡಿಯಲ್ಲಿ).

ಅಧಿಕೃತ ಶೇರು ಬಂಡವಾಳ	ರೂ.	10,00,000
ವಸೂಲಾದ ಶೇರು ಬಾಬಲಗು	ರೂ.	2,09,000
ರಿಸರ್ವ್ ಫಂಡ್	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಖಾತೆ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1-1-53ರಂದು)	,,	1-8-0
ನಿಗದಿ (Fixed) 3ರಿಂದ 11 ತಿಂಗಳ ಅವಧಿಗೆ	,,	1-8-0
1 ವರ್ಷ	,,	2-0-0
2 ವರ್ಷ	,,	2-8-0
3 ವರ್ಷ	,,	3-0-0
5 ವರ್ಷ	,,	3-8-0
10 ವರ್ಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಜೆನ್ನ ಮತ್ತು ಜೆಪ್ಪಿದ ನಗದಗಳ ಈಡಿನ ಮೇಲೆ ಬಹಳ ಸಾಲ ಕೊಡಲಾಗುವುದು. ಚೆಕ್ ಮೂಲ ಹಣ್ಣಾಗಳ ಡಿಸ್ಕೌಂಟು ವಹಿವಾಟುಗಳೂ ಇವೆ. ಟ್ರಸ್ಟಿಗಳು, ವಾರ್ಡಗಳ ಮತ್ತು ನಿರ್ವಹಣಾರತಿ ಇನ್ನೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಹಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು

ಎಂ. ಎಸ್. ಸೋಮಯ್ಯ, ಕಾರ್ಯದರ್ಶಿ.

ಕೆ. ಪಿ. ಬೆಳ್ಯಪ್ಪ, ಅಧ್ಯಕ್ಷರು.

ನಾನು ಈಗ ಹೊಸವರ್ಷ ಲ್ಲವೂ ಬರೇ ಸೂಚನೆಗಳಾಗಿವೆ. ನಿಮ್ಮ ಸುಂದರ ನಾಡನ್ನು ಖುದ್ದಾಗಿ ನೋಡಿದ ವಿನಾ ನಿರ್ದಿಷ್ಟ ಸಲಹೆಗಳನ್ನು ಕೊಡಲಾರೆನು

ಸು—ಕೊಡಗಿಗೆ ನಾವು ಭೇಟಿ ಕೊಡಬೇಕೆಂದು ನಿಮ್ಮನ್ನು ಆಗಲೇ ಕೇಳಿಕೊಂಡಿದ್ದೇನೆ. ದಯವಿಟ್ಟು ನೀವು ನಮ್ಮಲ್ಲಿಗೆ ಬರಲಾರಿರಾ?

ಡಾ. ವಿ—ನಿಮ್ಮ ಆಹ್ವಾನಕ್ಕೆ ನಾನು ತು ಬಾ ವಂದಿಸುತ್ತೇನೆ ಕೊಡಗಿಗೆ ಬರಲು ನಾನು ತುಂಬಾ ಕ್ಕ ತೊಹಲವಿಂದಿರುವುದಾದರೂ ನನಗೆ ಈಗ ಬರಲು ಸಾಧ್ಯವಿಲ್ಲವೆಂತಿದೆ. ನಾನು ಒತನೆ ಜಪಾನಿಗೆ ಹಿಂದಿರುಗಬೇಕಾಗಿರುವುದರಿಂದ ಸದ್ಯಕ್ಕೆ ನಾನು ಕೊಡಗಿನ ರೈತರೆಲ್ಲರಿಗೂ ತುಂಬಾ ವಂದಿಸುತ್ತೇನೆಂಬುದನ್ನು ದಯವಿಟ್ಟು ನೀವು ಅವರಿಗೆ ತಿಳಿಸಿರಿ.

ಕೊಡಗು

ತಾ. ೧೫-೧೨-೧೯೫೨ನೇ ಶುಕ್ರವಾರ

ಭಾರತದ ಸಂಧಾನ ಯತ್ನ.

ಕಳೆದ ಒಂದೂವರೆ ವರ್ಷಗಳಿಂದ ಬಗೆಹರಿಯದೆ ಉಳಿದಿರುವ ಕೊರಿಯೂದ ಶಾಂತಿ ಸಂಸ್ಥಾಪನಾ ಪ್ರಯತ್ನದಲ್ಲಿ ಭಾರತವು ಮತ್ತೊಂದು ಪ್ರಯತ್ನವನ್ನು ಮಾಡಿತು. ಭಾರತದ ಪ್ರತಿನಿಧಿ ವಿ. ಕೆ. ಕೃಷ್ಣಮೆನನರು ಸಂಧಾನದ ಹೊಸ ಸೂಚನೆಗಳನ್ನು ನೂಡಿದರು. ಈ ಸೂಚನೆಗಳನ್ನು ಸರ್ವರಾಷ್ಟ್ರಗಳೂ ಸ್ವಾಗತಿಸಿದರು. ಪ್ರಾರಂಭದಲ್ಲಿ ಕೆಲವು ವಿರೋಧ ಹೃದರ್ಶನವಿದ್ದರೂ ಸೂಚನೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದ ನಂತರ ಬಹುಮತ ರಾಷ್ಟ್ರಗಳು ಅದನ್ನು ಸ್ವಾಗತಿಸಿದರು. ಬ್ರಿಟಿನ ಅಂಭೋಣಿ ಈಡನ್ನರು ಈ ವಿಚಾರದಲ್ಲಿ ಭಾರತದ ಪ್ರಯತ್ನವನ್ನು ತುಂಬಾ ಹೊಗಳಿ ಬೆಂಬಲವಿತ್ತಿರುವರು. ಈ ಸೂಚನೆಗೆ ಸಂಯುಕ್ತ ಅಮೇರಿಕಾ ಮೊದಲಾದ ಐವತ್ತು ರಾಷ್ಟ್ರಗಳು ಬೆಂಬಲವಿತ್ತಿವೆ ಆದರೆ ರಷ್ಯಾ, ಚೀನಾ, ಮತ್ತವರಿಗೆ ಸಂಬಂಧಿಸಿದ ಇತರ ನಾಲ್ಕಾರು ರಾಷ್ಟ್ರಗಳು ಇದನ್ನು ವಿರೋಧಿಸಿರುವದರಿಂದ ಸಂಧಾನ ಪ್ರಯತ್ನವು ಫಲಕಾರಿಯಾಗದೆ ಉಳಿದಿದೆ.

ರಷ್ಯಾವು ಭಾರತದ ಪ್ರಯತ್ನವನ್ನು ಟೀಕಿಸುತ್ತಾ ಭಾರತವು ಅಮೇರಿಕಾ, ಬ್ರಿಟನುಗಳ ಪಕ್ಷವಹಿಸಿದೆಯೆಂದೂ ಆದು ಅವರ ವಿಜಯಟನಂತೆ ವರ್ತಿಸುತ್ತಿದೆಯೆಂದೂ ಭಾರತವನ್ನು ಟೀಕಿಸಿದೆ. ಈ ಟೀಕೆಯಿಂದಾಗಿ ಭಾರತಕ್ಕೆ ತುಂಬಾ ನೋವಾಗಿದೆ. ಪಂಡಿತ ಜವಾಹರರು ಇದಕ್ಕೆ ಉತ್ತರವೀಯುತ್ತಾ ಈ ಸಂಧಾನ ಪ್ರಯತ್ನದಲ್ಲಿ ಜಗತ್ತಿನ ಶಾಂತಿಯ ದೃಷ್ಟಿ ವಿನಾ ಭಾರತಕ್ಕೆ ಬೇರೆ ಯಾವ ಆಸಕ್ತಿಯೂ ಇಲ್ಲವೆಂದೂ ಭಾರತದ ಕೈಯು ಎಂದೂ ಇನ್ನೊಬ್ಬರ ರಕ್ತದಿಂದ ಮಲಿನವಾದುದಿಲ್ಲವೆಂದೂ ಆದ್ದರಿಂದ ರಷ್ಯಾ ಪಂಗಡದ ರಾಷ್ಟ್ರಗಳ ಟೀಕೆಯು ತುಂಬಾ ಅಸಂಗತವಾದುದೆಂದೂ ಹೇಳಿರುವರು. ಕೊರಿಯೂದ ಯುದ್ಧ ಕರಾರಿನ ಸುಮಾರು ೬೫ ಕಲಮುಗಳಲ್ಲಿ ೬೨ರ ಬಗ್ಗೆ ಎರಡು ಕಡೆಯವರೂ ಒಪ್ಪಿದರೂ ಯುದ್ಧ ಕೈದಿಗಳ ವಿನಿಯಮದ ಪ್ರಶ್ನೆಯಲ್ಲಿ ಪುನಹ ತೊಂದರೆ ಪ್ರಾರಂಭವಾಗಿ ಭಾರತವು ನಿಷ್ಪಕ್ಷಿಕೆ ವಹಿಸಿದರೂ ಪ್ರಯೋಜನವಾಗದಾಗಿದೆ. ಸಂಧಾನ ಪ್ರಯತ್ನ ನಡೆಸಿದ ವಿ ಕೆ. ಕೃಷ್ಣಮೆನನರು ಭಾರತದ ಈ ಸೂಚನೆಯನ್ನು ಒಪ್ಪದಿದ್ದರೆ ಹೊಸ ಸೂಚನೆಗಳಲ್ಲವೆಂದೂ ಹೇಳಿದ್ದಾರೆ. ಆದ್ದರಿಂದ ಕೊರಿಯಾ ಪ್ರಶ್ನೆ ಬಗೆಹರಿಯುವ ಸಾಧ್ಯತೆ ತೋರುತ್ತಿಲ್ಲವೆಂದು ಎಲ್ಲರೂ ವಿಷಾದಪಡಬೇಕಿದೆ.

ವರ್ತಮಾನ.

ಹುತ್ತರಿ ಸಂತೆಯ ದಿನ ಮಡಿಕೇರಿ ಪೇಟೆಯ ಬೀದಿಯಲ್ಲಿ ಕೆಲವು ರೂಪಾಯಿಗಳಿರುವ ಕವರೊಂದು ಬಿದ್ದು ಸಿಕ್ಕಿ ಅದು ಶ್ರೀರಾಮಕೃಷ್ಣ ಸ್ಟೋರಿನಲ್ಲಿದೆಯೆಂದೂ ತಿಳಿಕೊಂಡವರು ತಕ್ಕ ರುಜುವಾತಿನಿಂದ ಅದನ್ನು ಹೊಂದಿಕೊಳ್ಳಬೇಕಾಗಿಯೂ ತಿಳಿಸುತ್ತಾರೆ.

ವ್ಯಾಪಾರಸ್ಥರು, ಮತ್ತಿತರ ಕೆಲಸಗಾರರನ್ನಿಟ್ಟು ಮೂಲಿಕರು ವಾರದ ರಜಾ ದಿನದ ಆಕ್ಟನ್ನು ಉಲ್ಲಂಘಿಸಿ ಎಲ್ಲಾ ದಿನ ಕೆಲಸ ಮಾಡಿಸುವ ಉದಾಹರಣೆಗಳು ಗಮನಕ್ಕೆ ಬಂದಿರುವದಾಗಿಯೂ ಅಂಥವರು ತಿಪ್ಪಿಸಲ್ಪಡುವರೆಂದೂ ಜಿಲ್ಲಾ ಮೇಜಿಸ್ಟ್ರೇಟರು ಎಚ್ಚರಿಸಿದ್ದಾರೆ.

ಭಾರತದ ಮಸಾಲೆ ಸರಕುಗಳ ವಿಚಾರಣೆ ಸಮಿತಿಯವರು ಬರುವ ಡಿಸೆಂಬರ್ ತಾ. ೧೫ರ ಬೆಳಿಗ್ಗೆ ಮಂಗಳೂರಿನಿಂದ ಮಡಿಕೇರಿಗೆ ಬರಲಿರುವರು. ಇವರು ತಾ. ೧೫ ಮತ್ತು ೧೯ರಲ್ಲಿ ಸಾರ್ವಜನಿಕರ ಭೇಟಿ ಮತ್ತು ವಿಚಾರಣೆ ನಡೆಸುವರು. ಒಳ್ಳೆಮೆಣಸು, ಶುಂಠಿ, ಅರಿಸಿನ, ಯೂಲಕ್ಕಿ, ಗೇರುಬೀಜ, ನಿಂಬೆ ಹುಲ್ಲಿನ ತೈಲ(Lemongrass oil) ಮುಂತಾದ ಮಸಾಲೆ ಸರಕುಗಳ ಉತ್ಪತ್ತಿ ಮತ್ತು ಮಾರಾಟ ಮಾಡುವವರು ಮೇಲಿನ ತಾರೀಕುಗಳಲ್ಲಿ ಭೇಟಿಕೊಡಬಹುದು.

ಹಾಲುಗುಂದ ಗ್ರಾಮಸ್ಥರು ತಮ್ಮ ಊರನವರಾದ ಶ್ರೀಮಾನ್. ತೇಲಪಂಡ ಯಂ ಕಾರ್ಯಪ್ಪ ಮತ್ತು ಅವರ ಪತ್ನಿ ತೇಲಪಂಡ ಬೊಳ್ಳಮ್ಮ ಈ ದಂಪತಿಗಳಿಬ್ಬರು ಉಪಾಧ್ಯಾಯ ವೃತ್ತಿ ಮಾಡಿ ನಿವೃತ್ತರಾಗಿ ಗ್ರಾಮಸ್ಥರ ಪ್ರೀತಿಗೆ ಪಾತ್ರರಾದ ಸಲುವಾಗಿ ಅವರ ಗೌರವಾರ್ಥವಾಗಿ ತಾ ೩೦-೧೧-೫೨ರಲ್ಲು ತಮ್ಮ ಗ್ರಾಮದ ಸತ್ಕಾರ ಕೂಟವನ್ನು ಜರಗಿಸಿದರು.

೧೯೫೯—೪೫ರ ಯುದ್ಧದ ಸಮಯದಲ್ಲಿ ಸೈನ್ಯದಲ್ಲಿದ್ದು ಈ ವರೆಗೆ "ವಾರ್ ಗೈಚ್ಯುಟಿ" ಮತ್ತು "ಪೋಸ್ಟ್‌ವಾರ್ ಕ್ರೆಡಿಟ್" ಗಳು ದೊರಕದಿರುವವರು ಆವುಗಳನ್ನು ಪಡೆದುಕೊಳ್ಳಲು ಅರ್ಜಿಯನ್ನು ಸಲ್ಲಿಸಲು ಕಡೆಯ ತಾ. ೧೫-೧೨-೫೨ರ ಈ ತಾರೀಕಿನ [illegible] ಹೆಚ್ಚಿನ ವಿಷಯಗಳ [illegible] ಮೇಟ್ ಆ[illegible] ಬಹುದು.

[illegible] ರಲ್ಲಿ [illegible] ಶಿಕ್ಷಣ [illegible] ಗ್ಯಾಸ್ [illegible] ಇಸ್ಲೆ [illegible] ಪೈಪು [illegible] ಮ್ಯಾಂಗ್ [illegible] ಫಾಮ್ [illegible] ಸ್ಕಡ [illegible] ಳನ್ನು ಸ್ಥಿ [illegible] ದಿನಿ ಹೆಚ್ಚಿ [illegible] ನಾಡು [illegible] ಳ್ಳಬಹುದು

ಕುಮಾರಿ [illegible] ನ್ನು ವಜಾ [illegible] ತ್ತಪಡಿಸಲ್ಪಟ್ಟ [illegible] ಹಾರ ಪ್ರಮಾಣ [illegible] ಗಳ ಯಾವುದೇ [illegible] ಕೆ. ಎಜ್. [illegible] ತಕ್ಕಾಟವನ್ನು [illegible] ಎನ್. ಮುನಿಸ್ವಾಮಪ್ಪ, ಬಿ. ಎ. ಬೆಳ್ಳಪ್ಪ, ಎನ್. ಎ. [illegible] ರವರಿಂದ ಕೂಡಿನ [illegible] ಸಮಿತಿಯನ್ನು ನೇಮಿಸಲಾಗಿದೆ.

ಯುದ್ಧೋತ್ತರ ಸೈನಿಕರ ಪುನರ್ವಸತಿ ನಾ ಫಂಡಿನ ಆಡಳಿತ ಸಮಿತಿಯೂಗಿ ಚೀಫ್ ಕಮಿಷನರು (ಅಧ್ಯಕ್ಷ), ಮುಖ್ಯ ಮಂತ್ರಿ (ಉಪಾಧ್ಯಕ್ಷ), ಮದ್ರಾಸ್ ಏರಿಯಾದ ಕಮಾಂಡಿಂಗ್ ಆಫೀಸರು, ಅ. ಕಮಿಷನರು, ಡಿಸ್ಟ್ರಿಕ್ಟ್ ಜಡ್ಜ್, ಕೆಪ್ಟನ್ ಕೆ. ಎ. ಪೊನ್ನಣ್ಣ ಇವರನ್ನು ನೇಮಿಸಲಾಗಿದೆ.

ಕೊಡಗಿನಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ೧೪೫ ಮರಣಗಳೂ, ೩೨೭ ಜನನಗಳೂ, ಅಕ್ಟೋಬರ್ ತಿಂಗಳಲ್ಲಿ ೧೩೦ ಮರಣಗಳೂ, ೧೯೯ ಜನನಗಳೂ ಸಂಭವಿಸಿರುವದಾಗಿ ಪ್ರಕಟವಾಗಿದೆ.

ಪೊನ್ನಂಪೇಟೆ ನಾಡಿನ ನಲ್ಲುಗೋಟೆಯಲ್ಲಿ ಒಂದು ದನಗಳ ದೊಡ್ಡಿಯನ್ನು ನಿರ್ಮಿಸಲು ತೀರ್ಮಾನಿರುವರು

ಕೊಡಗು ಶಾಸನ ಸಭೆಯು ವಿರಾಜಪೇಟೆಯಲ್ಲಿ ತಾ. ೨೨ರಲ್ಲಿ ಬೆಳಿಗ್ಗೆ ೧೧ ಗಂಟೆಗೆ ಶಾಸನ ಸಭಾಂಗಣದಲ್ಲಿ ಪ್ರಾರಂಭವಾಗುವದು.

ತಾ. ೮ರಲ್ಲಿ ಶ್ರೀ ಶಾರದಾಮಣಿದೇವಿಯವರ ನೂರನೆಯ ಜನ್ಮದಿನೋತ್ಸವವು ಪೊನ್ನಂಪೇಟೆಯ ಶ್ರೀರಾಮಕೃಷ್ಣಾಶ್ರಮದಲ್ಲಿ ಶ್ರೀಮತಿ ಜೊಟ್ಟೆಂಗಡ ಬೋಜಮ್ಮನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಮತಿಯರಾದ ಕೋಡಿರ ಸೀತಮ್ಮ, ಪೂಳೇಟ್ಟಿರ ಸೀತಮ್ಮ ಇವರುಗಳ ಭಾಷಣವೂ ಶ್ರೀರಾಮಸ್ವಾಮಿನಾಯಿಡುರವರ ಹರಿಕಥೆಯೂ ನಡೆಯಿತು.

ನ್ಯೂ ಇಂಡಿಯಾ ಇನ್ಶೂರೆನ್ಸ್ ಕಂಪೆನಿಯ ಬೊಂಬಾಯಿ ಹೆಡ್ ಆಫೀಸಿನಲ್ಲಿ ಕಳೆದ ನಾಲ್ಕು ವರ್ಷದಿಂದ ಅಪ್ರೈಟೀಸ್ ಆಗಿ ಕೆಲಸ ಮಾಡುತ್ತಿದ್ದ ಶ್ರೀ ಕೋಟೇರ ಪಿ. ಪೊನ್ನಪ್ಪ ಇವರನ್ನು ಸದರಿ ಕಂಪೆನಿಯವರು ಜಿಬ್ರಾಲ್ಟರ್ ಮತ್ತು ಟಾಂಜೀರ್ ಎಂಬ ಸ್ಥಳಗಳಿಗೆ ಬ್ರಾಂಚ್ ಮೇನೇಜರಾಗಿ ನೇಮಿಸಿರುವರೆಂದೂ ಅವರು ಕಳೆದ ಫೆಬ್ರವರಿ ೨೮ ನೇ ತಾರೀಕಿನಲ್ಲಿ ಜಿಬ್ರಾಲ್ಟರಿಗೆ ವಿಮಾನದಲ್ಲಿ ಪ್ರಯಾಣ ಮಾಡಿದರೆಂದೂ ತಿಳಿಯಬರುತ್ತೇವೆ.

ಮದ್ರಾಸ್ ವಿಶ್ವವಿದ್ಯಾಲಯ ಕಳೆದ ಸೆಪ್ಟೆಂಬರಿನ ಬಿ. ಕಾಂ. ಪರೀಕ್ಷೆಯಲ್ಲಿ ಶ್ರೀ ಕೊಕ್ಕಲೆರವಂಡ ಚಿಣಪ್ಪನವರೂ, ಬಿ. ಎಸ್ಸಿ. ಪರೀಕ್ಷೆಯಲ್ಲಿ ಶ್ರೀ ಚೇನಂಡ ಮುತ್ತಣ್ಣ ಮತ್ತು ಕುಟ್ಟಂಡ ತಮ್ಮಯ್ಯ ಇವರುಗಳೂ ಮೈಸೂರು ವಿಶ್ವವಿದ್ಯಾಲಯದ ಇಂಟರ್‌ಮೀಡಿಯಟ್ ಪರೀಕ್ಷೆಯಲ್ಲಿ ಶ್ರೀ ಚೆಪ್ಪುಡೀರ ಎಸ್ ಅಚ್ಚಯ್ಯ ಮತ್ತು ಬಲ್ಲಚಂಡ ಶೀಲಾ ಸುಬ್ಬಯ್ಯನವರೂ ತೇರ್ಗಡೆಯಾಗಿರುವರು.

ಮಂಗಳೂರಿನ ಗವರ್ನ್‌ಮೆಂಟ್ ಕಾಲೇಜ್ ಯೂನಿಯನ್ನಿನ ಸೆಕ್ರೆಟರಿಯಾಗಿ ಶ್ರೀ. ಸೋಮಯಂಡ ಪೂವಯ್ಯನವರು ಆರಿಸಲ್ಪಟ್ಟಿರುವರು.

ನಿವೃತ್ತ ರೇಂಜರಾಗಿರುವ ಶ್ರೀ. ಕಾಯಪಂಡ ದೇವಯ್ಯನವರ ಪಾಕಿಕಪ್ಪಿನ ಪಂದ್ಯಾಟವು ಬಿರುನಾಣಿ ಹೈಯರ್ ಎಲಿಮೆಂಟರಿ ಶಾಲಾ ಮೈದಾನದಲ್ಲಿ ತಾ. ೯ರಿಂದ ಪ್ರಾರಂಭವಾಗಿದೆ.

ಟಿ. ಶೆಟ್ಟಿಗೇರಿಯಲ್ಲು ಮೂಧ್ಯಮಿಕ ಶಾಲಾ ಬಾಲಕರ ಹಾಕಿ ಪಂದ್ಯಾಟದ ಫೈನಲ್‌ಗೆ ಇಟ್ಟಂತ 'ಫ್ರೆಂಡ್ಸ್' ಬೆಳ್ಳಿಯ ಬಟ್ಟಲಿನ ಫೈನಲ್ ಆಟವು ತಾ. ೨೫-೧೧-೫೨ ರಲ್ಲಿ ಬಿರುನಾಣಿ ಮೂಧ್ಯಮಿಕ ಶಾಲಾ ಬಾಲಕರಿಗೂ ಮತ್ತು ಟಿ. ಶೆಟ್ಟಿಗೇರಿ ಮೂಧ್ಯಮಿಕ ಶಾಲಾ ಬಾಲಕರಿಗೂ ನಡೆದು ಟಿ. ಶೆಟ್ಟಿಗೇರಿ ಶಾಲಾ ಬಾಲಕರು ಜಯಶೀಲರಾಗಿ ಶ್ರೀಮಂಗಲ ಹೈಸ್ಕೂಲಿನ ಹೆಡ್ ಮಾಸ್ಟರಾದ ಶ್ರೀ ಕೆ. ರಾಮಭಟ್ಟರವರ ಅಧ್ಯಕ್ಷತೆಯಲ್ಲಿ ಬಟ್ಟಲನ್ನು ಪಡೆದರು.

ನಾಪೋಕ್ಲುನಾಡು ಮುಸಲ್ಮಾನರು ತಾ ೧೦-೧೨-೫೨ರಲ್ಲು ಮಹಮ್ಮದ್ ಪೈಗಂಬರರ ಜನ್ಮ ದಿನಾಚರಣೆಯನ್ನು ಶ್ರೀ ಕೆ. ಬಿ. ವಿಶ್ವನಾಥ ಇವರ ಅಧ್ಯಕ್ಷತೆಯಲ್ಲಿ ಜರಗಿಸಿದರು. ಮೆರವಣಿಗೆಯ ನಂತರ ೧೧ ಗಂಟೆಗೆ ಸಭೆ ಸೇರಿ ಶ್ರೀಗಳಾದ ಯಂ. ಯಂ. ಮೌಲವಿ, ಮೊಹಿಲಿಯೊರ್, ಯಂ. ಯಂ ಸಾದಿಲಿ, ಮಹಮದ್ ಹುಸೇನ್, ಹೆಚ್. ಎಸ್. ವೆಂಕಟ್ಟಪ್ಪಯ್ಯ ಮತ್ತು ಮಣವಟ್ಟೀರ ನಂದಪ್ಪ ಇವರುಗಳು ಪೈಗಂಬರರ ಜೀವನ ಮತ್ತು ತತ್ವಗಳ ವಿಚಾರ ಮಾತಾಡಿದರು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಮುಖ್ಯೋಪಧ್ಯಾಯರಾಗಿದ್ದ ಶ್ರೀ. ಕಂಬೀರಂಡ ಮುತ್ತಣ್ಣನವರು ತಾರೀಕು ೫ ರಲ್ಲಿ ಮಡಿಕೇರಿ ಆಸ್ಪತ್ರೆಯಲ್ಲಿ ರಕ್ತ ಒತ್ತಡ ಕಾಯಿಲೆಯಿಂದ ಶಿವಾಧೀನರಾದರು. ತಾ. ೮ ರಲ್ಲಿ ಮಡಿಕೇರಿ ಶಾಲಾ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸೇರಿ ಅವರ ಆತ್ಮಕ್ಕೆ ಶಾಂತಿಯನ್ನು ಬಯಸಿ ಪ್ರಾರ್ಥಿಸಿದರು

ತಾ. ೨೮ ರಲ್ಲಿ ಕೊಡಗಿನ ಕೋರ್ಟುಗಳ ಪರಿಶೀಲನೆಗಾಗಿ ಕೊಡಗಿಗೆ ಬಂದಿದ್ದ ಮದ್ರಾಸ್ ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ. ಎ. ಎಸ್. ಪಿ. ಐಯ್ಯರ್ ಇವರು ತಾ. ೩೦ ರಲ್ಲಿ ಕೊಡಗು ಶಾಸನ ಸಭಾ ಹಾಲ್‌ನಲ್ಲಿ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ 'ನಾಗರಿಕರು' ಎಂಬ ವಿಚಾರ ಭಾಷಣ ಮಾಡಿದರು.

ತಾರೀಕು ೩೦ರ ಸಾಯಂಕಾಲ ಸರಕಾರಿ ಕಾಲೇಜಿನ ಬಾಲಕ ಬಾಲಕಿಯರು ತಮ್ಮ ಸಾಮಾಜಿಕ ಸೇವಾ ನಿಧಿಯ ಸಹಾಯಕ್ಕಾಗಿ (೧) ಮಿ. ಸೇವ್ಸನ್(ಇಂಗ್ಲಿಷ್) (೨) ಪನ್ನಾ (ಹಿಂದಿ) (೩) ನಾನು ಎಂ. ಪಿ. ಆಗಿದ್ದರೆ (ಕನ್ನಡ) ಈ ಮೂರು ನಾಟಕಗಳನ್ನು ಆಡಿದರು. ಚೀಫ್ ಕಮಿಷನರು ಮತ್ತು ಮಂತ್ರಿಗಳು ಬಂದಿದ್ದರು. ರೂ. ೬೧೭ ಸಂಗ್ರಹವಾಯಿತು.

ಹುದಿಕೇರಿ ಮೂಧ್ಯಮಿಕ ಶಾಲಾ ಉಪಾಧ್ಯಾಯರಾಗಿರುವ ಶ್ರೀ ಚೋಡುಮಾಡ ಗಣಪತಿಯವರು ಅವರ ತಂದೆ ಸೋಮಯ್ಯನವರ ಜ್ಞಾಪಕಾರ್ಥವಾಗಿ ಮೂಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೆ 'ವಾಕ್‌ಸ್ಪರ್ಧೆ' ಗಾಗಿ ಇಟ್ಟಿಂತ ಬೆಳ್ಳಿಯ ಬಟ್ಟಲಿನ ವಾಕ್‌ಸ್ಪರ್ಧೆಯು ತಾ. ೨೮ರಲ್ಲಿ ಹುದಿಕೇರಿಯಲ್ಲಿ ಶ್ರೀ ಎ ಎ. ಮೂವಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಟಿ. ಶೆಟ್ಟಿಗೇರಿ ಮೂಧ್ಯಮಿಕ ಶಾಲಾ ಎಂಟನೆ ತರಗತಿಯ ವಿದ್ಯಾರ್ಥಿ ಶ್ರೀ ಎಂ. ಬೆಳ್ಯಪ್ಪನವರು ಪ್ರಥಮ ಬಹುಮಾನವನ್ನೂ ತೂಚಮಕೇರಿ ಶಾಲೆಯ ಶ್ರೀ ಕೆ. ಡಿ. ನಾಣಯ್ಯನವರು ದ್ವಿತೀಯ ಬಹುಮಾನವನ್ನೂ ಪಡೆದರು.

ತಾರೀಕು ೩೫ ರಲ್ಲಿ ಕುಟ್ಟದಲ್ಲಿ ಹಿಂದುಳಿದ ಪಂಗಡವರ ಸಭೆಯೊಂದು ಶ್ರೀ. ಜಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ಹಿಂದುಳಿದ ಪಂಗಡದ ವಿದ್ಯಾಭಿವೃದ್ಧಿ ನಿಧಿಯೊಂದನ್ನು ಸ್ಥಾಪಿಸುವ ನಿರ್ಣಯ ಮಾಡಿ ಕಾರ್ಯಕಾರಿ ಮಂಡಳಿಯನ್ನು ರಚಿಸಿದರು.

ತಾ. ೩೦ರಲ್ಲಿ ಅಖಿಲ ಭಾರತ ರೆಡ್ ಕ್ರಾಸ್ ಸಂಸ್ಥೆಯು ಕೊಡಗು ಶಾಖೆಯು ಆಶ್ರಯದಲ್ಲಿ ಮಡಿಕೇರಿಯಲ್ಲಿ ಶಿಶು ಪ್ರದರ್ಶನವೂ, ಇತರ ವಿನೋದಾವಳಿಗಳೂ ನಡೆಸಿವು. ಆ ದಿನದ ವಿವಿಧ ವಿನೋದಾವಳಿಗಳಿಂದ ಸುಮಾರು ೧೪೦೦ ರೂಪಾಯಿ ಜಮೆಯಾಯಿತು.

ಮಡಿಕೇರಿ ಕೇಂದ್ರದಲ್ಲಿ ಆಗೋಸ್ತು ಹಿಂದೀ ಪರೀಕ್ಷೆಗಳಲ್ಲಿ ಪಾಸಾದವರ ವಿವರ:— ರಾಷ್ಟ್ರಭಾಷಾ, ವಿಶಾರದಾ ಪರೀಕ್ಷೆಯಲ್ಲಿ (೧) ಎಂ. ಆರ್. ನರಸಿಂಹಯ್ಯ, (೨) ಎಸ್. ಕೃಷ್ಣಸ್ವಾಮಿ, ಮತ್ತು (೩) ಕೆ. ಯಜ್ಞ ಶಿವರಾಮ. ಪ್ರವೇಶಿಕಾ ಪರೀಕ್ಷೆಯಲ್ಲಿ (೧) ಶ್ರೀಮತಿ ಎಂ. ವೇದಮ್ಮ, (೨) ಎಂ. ಎಂ. ಶಾಂತಿ, (೩) ಎ. ಎಂ. ಮೈತ್ರಮ್ಮ, (೪) ಕೆ. ಎಂ ಅಕ್ಕಯ್ಯ, (೫) ಬಿಡ್ಡಿರ ಡಿ. ಪಾರ್ವತಿ, (೬) ಎಂ. ಕೆ. ಸುಮಿತ್ರ, (೭) ಎ. ಎಂ. ಮಾಲಿಜ, (೮) ಟಿ ಎನ್. ವ್ಯಾಕರಣಿ, (೯) ಎಂ. ಕೆ. ಪೂವಯ್ಯ, (೧೦) ಎನ್. ಎಸ್. ನಂದಾ ಯಿ. ಮತ್ತು (೧೧) ಎಂ. ಪಿ. ವೆಂಕಟಲಕ್ಷ್ಮಿ. ರಾಷ್ಟ್ರಭಾಷಾ ಪರೀಕ್ಷೆಯಲ್ಲಿ ಎಂ. ಬೋಜಪ್ಪಗೌಡ ಮತ್ತು (೨) ಎ. ಕೆ. ಅಕ್ಕನ್ನ. ಪ್ರಾಥಮಿಕ ಪರೀಕ್ಷೆಯಲ್ಲಿ (೧) ಎಸ್. ಎಸ್. ಪದ್ಮಾವತಿ (ಪ್ರಥಮ ಶ್ರೇಣಿ) (೨) ಎಂ. ಎಂ. ಬೆಳ್ಯಪ್ಪ (೩) ಎಂ. ಎಂ. ಕುಮಾರಿ, (೪) ಎನ್. ಡಿ. ಲಕ್ಷ್ಮಿ (೫) ಪಿ. ಡಿ ರಾಧಾ, (೬) ಎಸ್. ಬಿ. ಕೃಷ್ಣ, ಮತ್ತು ನಂಜಲಿಂಗಂಶಾಸ್ತ್ರಿ. ಇವರುಗಳು ತೇರ್ಗಡೆಯಾಗಿರುವರು.

ಬಸ್ಸಿನಲ್ಲಿ ಬೇಗು ಬಿಟ್ಟು ಹೋಗಿದೆ.

ತಾ. 9-12-52ನೇ ಮಂಗಳವಾರ ಮಡಿಕೇರಿಯಿಂದ ಮಡಾಪುರಕ್ಕಾಗಿ ಸ್ಪೆಷಲ್‌ಟಿಗೆ ಬೆಳಿಗ್ಗೆ 8 ಗಂಟೆಗೆ ಹೊರಟ ಪಿ. ಪಿ ಬಸ್ಸಿನಲ್ಲಿ ಡ್ರೈವರು ಇರಿಸಿ ಬೇಗಿನಲ್ಲಿದ್ದ 4 ಬೆಲೆಯುಳ್ಳ ಪೆಟ್ಟಿಗೆ 4 ರವಕೆಗಳು, 2 ರವಕೆ ಬಟ್ಟೆ, ಶೀಟ್ ಮತ್ತು ಇತರ ಚಿಲ್ಲರೆ ಸಾಮಾನು. ಈ ಬೇಗನ್ನು ಬಸ್ಸಿನಲ್ಲಿ ಮರೆತಿಟ್ಟು ಬೇಗು ಸಿಕ್ಕಿದವರು ಸಾಂಪ್ರತ್ತರದ ಪೊಲೀಸ್ ಸ್ಟೇಷನ್‌ನಲ್ಲಾಗಲಿ ಪತ್ರಿಕಾಗಿ ಈ ಮೂಲಕ ವಿನಂತಿಸಿ ತ್ತೇನೆ (ಅಂದಾಜು ರೂ. ೫೦ ಬೆಲೆ ಬಾಳುತ್ತದೆ).

ಪಿ. ಸಿ ಮಲ್ಲಪ್ಪ,
ಬೇಳೂರು ಪೋಸ್ಟು. ಸೋಮವಾರ

ಪೊಲೀಸ್ ಸ್ಪೋರ್ಟ್ಸ್

ತಾ. ೨೦ರಲ್ಲಿ ಕೊಡಗಿನ ಪೊಲೀಸ್ ಪಡೆಯ ಅಟೋಟಗಳ ಸ್ಪರ್ಧೆಯು ಮೈದಾನದಲ್ಲಿ ನೆರೆದ ಪೋಷಕರ ಮುಂದೆ ಕೊಡಗಿನ ಮುಖ್ಯಮಂತ್ರಿ ಶ್ರೀ ಸಿ. ಪೂಣಚ್ಚನವರು ಧ್ವಜಾರೋಹಣ ಮಾಡಿ ಸ್ಪರ್ಧೆಗಾರರ ಮಾರ್ಚ್ ಪಾಸ್ಟ್ ಸ್ವೀಕರಿಸಿದರು. ಅಟೋಟಗಳಲ್ಲಿ ಶ್ರೀ ಪಿ. ಕೆ ಸೋಮಪ್ಪ ಛಾಂಪಿಯನ್ ಶಿಪ್ಪನ್ನು ಪಡೆದರು. ಸ್ಪರ್ಧೆಗಳು ಸುಮಾರು ೩೬ ವಿಷಯಗಳನ್ನು ಇವುಗಳಲ್ಲಿ ಬಹುಸಂಖ್ಯೆಯ ವ್ಯಕ್ತಿಗಳಿಗಾಗಿದ್ದವು. ನೆರೆದ ಗಣ್ಯರ ಮುಂದಿನ ಶ್ರೀ ಎಂ. ಪಿ. ಕಾವೇರಪ್ಪ, ಪೊಲೀಸ್ ಕಲ್ಲೆಸೆಯುವವರಲ್ಲಿ ಶ್ರೀ ಪಿ. ಎ

ಓದುಗರ ಓಲೆಗಳು

ಮಲಬಾರ್ ರಸ್ತೆ.

ತಾ. ೧೩-೧೧-೫೨ರಲ್ಲಿ ಮಡಿಕೇರಿಯ ಪರಕಟಗೇರಿ, ಬಿರುನಾಣಿ, ಬಾಡಗರಕೇರಿ ವಲಯ ತೆರಾಲು ಗ್ರಾಮಸ್ಥರಿಂದ ಚಿನ್ನಾಯಿಸಲ್ಪಟ್ಟ ಸಮಿತಿಯವರು ಪರಕಟಗೇರಿಯಿಂದ ಮಲಬಾರಿಗೆ ಹೋಗಲು ಯೋಗ್ಯವಾದ ಒಂದು ರಸ್ತೆಯನ್ನು ಪರಿಶೀಲಿಸಿ ಯೋಗ್ಯ ದಾರಿಯನ್ನು ಕಂಡುಹಿಡಿದಿದ್ದಾರೆ. ಪರಕಟಗೇರಿಯಿಂದ ಪರೆಗೆ ಈಗ ಇರುವ ರಸ್ತೆಯಿಂದ ಮಲಬಾರ್ ಪರಹದ್ದಿಗೆ ಕೇವಲ ಮೂರುವರೆ ಮೈಲು ಇದೆಯೆಂದೂ ಅಂದಾಜು ಮಾಡಲಾಗಿದೆ. ಸ್ಥಳವು ಸಮತಟ್ಟಾಗಿಯೂ ಕೇವಲ ಎರಡೇ ತೋಡುಗಳಿರುವುದರಿಂದಲೂ ರಸ್ತೆಗೆ ವಿಪರೀತ ಕರ್ಚಾಗಲಾರದು. ಆದ್ದರಿಂದ ಪರಕಾರದವರು ಈ ರಸ್ತೆಯ ವಿಷಯ ಪ್ರಿಗನ ಹಿಸಿ ಕೆಲಸ ಕೈಕೊಳ್ಳಬೇಕಾಗಿದೆ. ಮಲಬಾರ್ ಗಡಿಯಲ್ಲಿ ಪಾರೆಪರವನ್ ಮುಮ್ಮದ್ ಹಾಜಿ ಎಂಬವರ ಸ್ವಂತ ಜಾಗವಿದೆ. ಆವರೊಡನೆ ನೂತನ ರಸ್ತೆ ನಡೆಸಿ ಈ ರಸ್ತೆಯ ವಿಸ್ತಾರಕ್ಕೆ ನೂರಕ್ಕೆ ಒಂದು ಭಾಗ ಸಹಾಯ ಮಾಡಿದರೂ ಸಾಕು.

ಕೆ. ಎನ್. ಮುದ್ದಯ್ಯ
ನಾಡಿನವರು.

ಪರಕಟಗೇರಿ ಶಾಲೆ.

ಈ ಶಾಲೆಯು ಕೇವಲ ಒಂದೇ ಒಂದು ವಿನ ಕಟ್ಟಡದಲ್ಲಿದೆ. ಇಲ್ಲಿ ನಾಲ್ಕನೆ ತರಗತಿಯ ವರೆಗಿದ್ದರೂ ಒಬ್ಬನೇ ಅಧ್ಯಾಪಕರಿದ್ದಾರೆ. ಸರಕಾರದ ಅನುಮತಿ ಪೇರೆ ಒಬ್ಬ ಹೆಚ್ಚಿನ ಪಾಠಕ್ಕಾಗಿ ಅಧ್ಯಾಪಕರನ್ನು ಟ್ಟುಕೊಂಡು ಗ್ರಾಮಸ್ಥರೇ ವೇತನ ಕೊಟ್ಟುಕೊಂಡು ಈ ಎರಡು ವರ್ಷಗಳಿಂದ ಶಾಲೆ ನಡೆಸುತ್ತಿದ್ದಾರೆ. ಸರಕಾರವು ಒಬ್ಬ ಅಧ್ಯಾಪಕರನ್ನು ಕೊಡಬೇಕೆಂದು ಕಳೆದ ಎರಡು ವರ್ಷಗಳಿಂದ ಪ್ರಯತ್ನಿಸಿದರೂ ಪ್ರಯೋಜನವಾಗಿಲ್ಲ. ಈಗ ಈ ಶಾಲೆಯಲ್ಲಿ ಎದನೆಯ ತರಗತಿಯನ್ನು ತೆರೆಯಲಾಗಿದೆ. ಈ ಶಾಲೆಯಲ್ಲಿ ಅರುವತ್ತಕ್ಕೂ ಹೆಚ್ಚು ನಾಕ್ಕಳಿದ್ದು ಕೇವಲ ಒಬ್ಬ ಅಧ್ಯಾಪಕರಿಂದ ಐದು ತರಗತಿಗಳನ್ನು ನಡೆಸುವುದು ಕಷ್ಟ. ಆದ್ದರಿಂದ ಸರಕಾರವು ತಿ ಪ್ಪೆ ಒಬ್ಬ ಅಧ್ಯಾಪಕರನ್ನು ಕೊಡುವದಲ್ಲದೆ ಈ ಶಾಲಾ ಕಟ್ಟಡದ ಬಡಾವಣೆಗೂ ವ್ಯವಸ್ಥೆ ಮಾಡುವರಾಗಿ ನಂಬಲಾಗಿದೆ.

ಪ್ರೆಸಿಡೆಂಟ್,
ಶಾಲಾಕವಿ.ಟಿ

ಮಂತ್ರಿಗಳಿಗೆ ಕೆಲವು ಸೂಚನೆಗಳು.

ಈ ವರ್ಷ ಕೊಡಗಿನ ಬತ್ತದ ಬೆಳೆಯು ಶೇಕಡ ಅಂದಾಜು ಹಾಳಾಗಿದೆಯೆನ್ನಬಹುದು. ಮಂತ್ರಿಗಳೂ ಈ ಪರಿಸ್ಥಿತಿಯನ್ನು ಅರಿತಿದ್ದಾರೆ. ಆದ್ದರಿಂದ ದೈವ ತರ ಹಿತದೃಷ್ಟಿಯಿಂದ ಅವರು ಕೆಳಗಿನ ವಿಚಾರಗಳಿಗೆ ಶೀಘ್ರ ಗಮನ ಕೊಡಬೇಕು.

(೧) ಕೇವಲ ಬತ್ತದ ಬೆಳೆಯಿಂದಲೇ ಜೀವನ ನಡೆಸಬೇಕಾದ ದೈವರಿಗೆ ಆವರಿನಾದ ನಷ್ಟದ ಪರಿಮಾಣವನ್ನು ಪರಿಶೀಲಿಸಿ ಕುಂದಾಯ ಬಾಕಿ ವಸೂಲುವುದಲ್ಲದೆ ಅವಶ್ಯವಿರುವಲ್ಲಿ ಪರಿಹಾರ ದೃಷ್ಟಿಯಿಂದ ಏನಾದರೂ ಸಾಲಕ್ಕೆ ಹೆಚ್ಚಿನ ಕಂತು, ಬಡ್ಡಿ ಇವ ಬಿಡಿಸಬೇಕು.

(೨) ಬಡ ಜನರ ಸಾಲವನ್ನು ಪರಿಶೀಲಿಸಿ ಅವರಿಗೆ ಅತ್ಯಾವಶ್ಯವಾಗದಂತೆಯೂ ಭೂಮಿ ಕಳಕೊಳ್ಳದಂತೆಯೂ ಸಾಲ ವಿವಾರಣಾ ದೋರ್ತಿನ ವ್ಯವಸ್ಥೆ ಮಾಡುವುದು.

(೩) ಬರುವ ವರ್ಷದಲ್ಲಾದರೂ ಈ ರೀತಿ ಆಗದಂತೆ ವೈದರ ಸೀವಾವರಿ ಯೋಜನೆಯನ್ನು ವಿಶ್ವಸನೀಯವಾಗಿ ಕಾರ್ಯರೂಪಕ್ಕೆ ತರುವುದಲ್ಲದೆ ಇದು ಸಾಧ್ಯವಾಗದ ಭಾಗಗಳಲ್ಲಿ ಸಾಕಷ್ಟು ಪರ್ಯಾಯ ಮತ್ತು ಪೈರುಗಳನ್ನು ಒದಗಿಸುವುದು.

(೪) ಕೊಡಗಿನಲ್ಲಿ ಇತ್ತೀಚೆಗೆ ಮಳೆಯೂ ಕಾರಣದಿಂದ ಈ ರೀತಿಯಾಗುತ್ತಿದೆ ಎಂಬುದನ್ನು ಪರಿಶೀಲಿಸಿ ತಿಳಿಸಲು ತಜ್ಞರ ಸಮಿತಿಯೊಂದನ್ನು ನೇಮಿಸುವುದು. ಮಂತ್ರಿಗಳು ಶೀಘ್ರವೆ ಈ ಕಾರ್ಯಕೈಕೊಳ್ಳುವರೇ?

K P H.

ವಿರಾಜಪೇಟೆ ಟೌನ್‌ಬ್ಯಾಂಕ್

ವೀರಾಜಪೇಟೆ ಟವುನಿನಲ್ಲಿ ಇರುವ ಟವುನು ಸಹಕಾರ ಬ್ಯಾಂಕಿಗೆ ತನ್ನದೇ ಆದ ಒಂದು ಕಟ್ಟಡವನ್ನು ಕಟ್ಟಿಸಬೇಕೆಂದು ಬ್ಯಾಂಕಿನ ಪ್ರೆಸಿಡೆಂಟರು ಮತ್ತು ಡೈರೆಕ್ಟರುಗಳು ಏರ್ಪಾಡುಮಾಡಿ ಕಟ್ಟಡಕ್ಕೆ ಒಂದು ಜಾಗವನ್ನು ಸರಕಾರದವರಿಗೆ ಬರೆದು ಏಕ್ರಯರ್ ಮಾಡುವಂತೆ ಕಳೆದ ನವಂಬರ್ ತಿಂಗಳ ಕೊಡಗು ಗಜೆಟಿನಲ್ಲಿ ಪ್ರಕಟಿಸಿರುವರು. ಆವರೆ ಇಂದು ಸಣ್ಣದಾಗಿದ್ದು ಮುಂದಕ್ಕೆ ದೊಡ್ಡದಾಗಿ ಬೆಳೆದು ಉದ್ಧಾರವಾಗಲಿರುವ ಇಂಥಾ ಒಂದು ಬ್ಯಾಂಕಿನ ಕಟ್ಟಡವನ್ನು ವಹಿವಾಟಿಕ್ಕೆ ಅನುಕೂಲವಿಲ್ಲದ ಇಕ್ಕಟ್ಟಿನ ಸ್ಥಳದಲ್ಲಿ ಕಟ್ಟಿಸುವುದರಿಂದ ಪ್ರಯೋಜನವಾಗಲಾರದು. ಪಟ್ಟಣದಲ್ಲಾ ವಾಸಿಸುವಂತೆ ಈ ಬ್ಯಾಂಕಿನಲ್ಲಾ ನೆಂಬರಿಗಳಾಗಿರುವಂತವರು ಮುಂದಕ್ಕೆ ನೆಂಬರುಗಳಾಗಲಿಚ್ಛಿಸುವವರು ಮತ್ತು ಬ್ಯಾಂಕಿನ ಹಿತಚಿಂತಕರು ಸಹ ಸೇರಿ ಬ್ಯಾಂಕಿನ ಆಡಳಿತ ಮಂಡಳಿಯವರ ಇರುದ್ದ ಮೇರೆ ಒಂದು ಸ್ಥಳವನ್ನು ಈ ಮೊದಲೇ ಚುನಾವಿಸಿದು ಅದು ಅತ್ಯುತ್ತಮ ಸ್ಥಳವಾಗಿದೆ.

ಬ್ಯಾಂಕಿನ ಪ್ರೆಸಿಡೆಂಟರು ಮತ್ತು ಡೈರೆಕ್ಟರುಗಳು ಟವುನಿನಲ್ಲಾ ವಾಸಿಸುವ ಜನರ ಮತ್ತು ಬ್ಯಾಂಕಿನ ಅಭಿವೃದ್ಧಿಗೋಸ್ಕರ ಪ್ರೇಮವಿಂದ ದುಡಿಯುತ್ತಿರುವುದಾದರೆ ಇವರುಗಳು ಈಗ ಚುನಾವಿಸಿರುವ ಜಾಗಕ್ಕಿಂತ ಅನೇಕ ಪಟ್ಟು ಹೆಚ್ಚಿನ ಅನುಕೂಲತೆ ಇರುವಂತ ಅಂದರೆ ಇದೇ ಪ್ರೆಸಿಡೆಂಟರು ಮೊದಲೆನ್ನೆ ವ್ಯವಸಿಡೆಂಟರಾಗಿದ್ದಾಗ ಬ್ಯಾಂಕಿನ ವಾರ್ಷಿಕ ಮಹಾಸಭೆಯಲ್ಲಿ ಕಟ್ಟಡಕ್ಕೆ ಜಾಗತೆಗೆಯುವ ವಿಷಯ ತೀರ್ಮಾನಿಸಿ ನಿಶ್ಚಯಿಸಿದ ಸ್ಥಳವಿದೆ. ಆವರೆ ಜಾಗದ ವಾಲೀಕನು ಸದ್ರಿ ಜಾಗಕ್ಕೆ ಹೆಚ್ಚಿನ ಕ್ರಯ ಕೇಳಿದ್ದರಿಂದ ಈಗ ಬೇರೆ ಜಾಗ ನೋಡುತ್ತಿರುವುದಾಗಿ ತಿಳಿದುಬಂದಿದೆ. ಆವರೆ ಬ್ಯಾಂಕಿನ ಮುಂದಿನ ಕಾರ್ಯಕಲಾಪಗಳ ಹಿತದೃಷ್ಟಿಯಿಂದ ಕ್ವಲ್ಪ ಹೆಚ್ಚು ಕ್ರಯ ಕೊಟ್ಟಾದರೂ ಉತ್ತಮ ಸ್ಥಳವನ್ನೇ ಆರಿಸಬೇಕಾದದ್ದು ಅವಶ್ಯ. ಆದ್ದರಿಂದ ಈ ಮೊದಲೇ ಮಹಾಸಭೆಯಲ್ಲಿ ನಿಶ್ಚಯಿಸಿದ ವಿಶ್ವೇರಿಯೂ ಕ್ಲಬ್ಬಿನ ಮಂಜಾಗದಲ್ಲಿ ಅನೇಕ ವರ್ಷಗಳಿಂದ ಖಾಲಿ ಬಿದ್ದಿರುವ ಜಾಗದಲ್ಲಿ ಮೇಲ್ಕಂಡ ಬ್ಯಾಂಕಿಗಿರುವ ಕಟ್ಟಡವನ್ನು ಕಟ್ಟಿಸಲು ವಿರ್ಪಾಡು ಮಾಡಬೇಕಾಗಿ ವಿನಂತಿ.

S. C. K. M.

ಆಫ್ರಿಕದಲ್ಲಿ ಬ್ರಿಟಿಷರ

॥ ಕ್ರೂರ ದಬ್ಬಾಳಿಕೆ ॥

ಆಫ್ರಿಕಾ ಖಂಡವು ನಿಸರ್ಗ ದೃಷ್ಟಿಯಿಂದಲೇ, ನಾಗರಿಕತೆಯನ್ನು ಒಳಗೆ ಸೆಳೆಯವಾಗಿ ಬಡದ ದೇಶ. ಗುಡ್ಡ, ಅರಣ್ಯ, ಉಷ್ಣಬಿನ ಬೆಲೆಗಳ ಮೂಲಕ ಅಭಿವೃದ್ಧಿಯ ಪ್ರಗತಿಯೂಗುವುದಕ್ಕೂ ಅಡ್ಡಿ ಆತಂಕಗಳಿವೆ.

ಆದರೆ ಅಲ್ಲಿ ನೈಸರ್ಗಿಕ ಸಂಪತ್ತು ಹೇರಳವಾಗಿದೆ. ಹೊಟ್ಟೆಗೆ ಸಾಲದೆ ಹುಡುಕಾಡುತ್ತಿದ್ದ ಪಾಶ್ಚಾತ್ಯರು ಅತ್ತ ಕಡೆಗೂ ತಮ್ಮ ದೃಷ್ಟಿಯನ್ನು ಬೀರದೆ ಇರಲಿಲ್ಲ. ಅವರು ಅಲ್ಲಿಗೆ ಹೋಗಿ ನೆಲೆಸಿ ಅಲ್ಲಿಯ ಜನರನ್ನು ತಮ್ಮ ಕಾರ್ಯಕ್ಕಾಗಿ ಉಪಯೋಗಿಸಿಕೊಂಡು, ಅಲ್ಲಿಯ ಸಂಪತ್ತಿನ ಸೂರೆಗೈದುಹಬ್ಬಿ ಬಹಳ ದಿವಸಗಳಾದವು.

ಜಗತ್ತಿನಲ್ಲಿ ಇನ್ನೂ ಕಾಡುಸ್ಥಿತಿಯಲ್ಲಿರುವ ಜನರನ್ನು ಕಾಣಬಹುದಾದ ದೇಶಗಳಲ್ಲಿ ಆಫ್ರಿಕಾ ಖಂಡವೂ ಬರುತ್ತದೆ. ಮೂಸಲೇ ಅಧಿಕಾರದ ಆಸರು ಇಲ್ಲದ ಅಲ್ಲಿಯ ಮೂಲ ನಿವಾಸಿಗಳು ಪಾಶ್ಚಾತ್ಯರ ಲಾಭಕ್ಕಾಗಿ ಎಂದಿನಿಂದಲೂ ದುಡಿಯಲ್ಪೇ ಬಂದಿದ್ದಾರೆ

ಕಾಲವು ಒಂದೇ ರೀತಿಯಲ್ಲಿ ಇರಲಾರದು. ಇಡೀ ಜಗತ್ತಿನಲ್ಲಿ ಸ್ವಾತಂತ್ರ್ಯದ ಗಾಳಿಯು ಬೀಸುತ್ತಿರುವಾಗ್ಗೆ, ದಾಸ್ಯಪಲ್ಲಿ ಕೂಳೆಯುತ್ತಿದ್ದ ಆ ಆಫ್ರಿಕಾ ಮೂಲನಿವಾಸಿಗಳಿಗೆ ಅಂತಹ ಸ್ಥಿತಿಯ ಕಲ್ಪನೆಯು ಬಾರದೆ ಹೇಗೆ ಇದ್ದೀತು?

ಪಾಶ್ಚಾತ್ಯರು, ಅವರ ಸ್ಥಿತಿಯು ಸುಧಾರಿಸಿ ಎಷ್ಟರಿಂತೆ ಅವರೂ ಜಾಗ್ರತರಾಗಬೇಕೆಂಬ ನಿಜವಾಗಿ ಬಯಸಲಿಲ್ಲ. ಹಾಗಿದ್ದರೂ ಕೆಲವು ನೆಪಕ್ಕಾಗಿಯಾದರೂ ಕೆಲವು ಪಟ್ಟಿಗೆ ಮೂಲನಿವಾಸಿಗಳಿಗೆ ನಾಗರಿಕತ್ವದ ವಾಸನೆಯನ್ನು ತೋರಿಸಲೇಬೇಕಾಯಿತು.. ಶಿಕ್ಷಣವನ್ನು ಹಲ ಕೆಲವು ಮಂದಿಗೆ ಕೆಲವು ಪಟ್ಟಿಗೆ ಕೊಟ್ಟರು. ಶಿಬೆರ್ಕಗಳಿಂದ ಎಣಿಸಿಷ್ಟಾದರೂ ಮೂಲನಿವಾಸಿಗಳು ಉಚ್ಚ ಶಿಕ್ಷಣದ ವರೆಗೆ ಮುಟ್ಟಲು ಸಾಕು.

ಆದೇ ಮಾತು ಪಾಶ್ಚಾತ್ಯರಿಗೆ ಮುಂದೆ ಮುಳುವಾಯಿತು. ಇಂದು ಆ ಮೂಲನಿವಾಸಿಗರು ಎದ್ದು ನಿಂತಿದ್ದಾರೆ. ಈ ಬಿಳಿ ಜನರ ಸುಲಿಗೆಯನ್ನು ಇನ್ನು ಮುಂದೆ ನಡೆಯಗೊಡಬಾರದೆಂದು ಬಿಗಿಪಟ್ಟು ಹಿಡಿದಿದ್ದಾರೆ.

ಇಂತಹ ಪ್ರಸಂಗದಲ್ಲಿ ಪಾಶ್ಚಾತ್ಯರು ತಮ್ಮ ಸೈನಿಕ ಬಲವಿಂದ ಅಂದೋಲನವನ್ನು ಹತ್ತಿಕ್ಕಲು ಯತ್ನಿಸುತ್ತ ಬಂದುದು ಇತಿಹಾಸವು ಅನೇಕ ಉದಾಹರಣೆಗಳನ್ನು ತೋರಿಸಿದೆ. ಆದೇ ರೀತಿ ಕೆನಿಯಾದಲ್ಲಿ ಇಂದು ದಬ್ಬಾಳಿಕೆಯು ತನ್ನ ತಾಂಡವನೃತ್ಯವನ್ನು ಪ್ರಾರಂಭಿಸಿದೆ. ಜನರನ್ನು ದನಗಳಂತೆ ಹಿಡಿದು ಕಾರಾಗೃಹದಲ್ಲಿ ಹಾಕುತ್ತಿದ್ದಾರೆ. ಪ್ರಜೆಗಳಿಗೆ ಸಾವೆ ನೋವುಗಳಲ್ಲಿಗೆವುದು ದಿನದ ಮಾತಾಗಿದೆ. ಅವರ ಆಸ್ತಿ, ವಿತ್ತಗಳು ಸುರಕ್ಷಿತವಿಲ್ಲ. ಮೂಲ ನಿವಾಸಿಗಳು ಸರಕಾರೀ ಧೋರಣದ ವಿರುದ್ಧ ಮಾತಾಡುವಂತಿಲ್ಲ, ಬರೆಯುವಂತಿಲ್ಲ, ಏರಡು ಸಾವಿರ ಚದುರ ಮೈಲು ಕ್ಷೇತ್ರವನ್ನೊಳಗೊಂಡ ಕೆಕಯು ಪ್ರದೇಶವು ವಿಕಾಲ ಕಾರಾಗೃಹವಾಗಿ ಪರಿಣಮಿಸಿದೆ.

ಆಫ್ರಿಕಿಯಲ್ಲಿ ಮೂವ್ ಮೂವ್ ಎಂಬ ಹೆಸರಿನ ಒಂದು ಅಂದೋಲನವು ಪ್ರಾರಂಭವಾಗಿದೆ. ಅದು ಗುಪ್ತ ಮತ್ತು ಒಂದು ಸಾಮಾಜಿಕ ತಂಡದಿಂದ ಸಾಗುತ್ತಿದೆ. ಮೂಲ ನಿವಾಸಿಗಳಲ್ಲಿ ಬಿಳಿಯರ ಬಗ್ಗೆ ಹುಟ್ಟಿದ ದ್ವೇಷಭಾವನೆಯು ಈ ರೀತಿಯಲ್ಲಿ ಹೊರಬೀಳುತ್ತಿದೆ. ಬಿಳಿ ಜನರನ್ನು ಮತ್ತು ಅವರ ಆಸ್ತಿಪಾಸ್ತಿಗಳನ್ನು ನಾಶ ಮಾಡುವುದೇ ಈ ಅಂದೋಲನದ ಉದ್ದೇಶವಾಗಿದೆಯಂತೆ. ಆ ಸಂಘಟನೆಯ ದ್ವಾರಾ ಅನೇಕ ಬಿಳಿಯರು ಮತ್ತು ಅವರ ಆಸ್ತಿಯು ನಾಶಹೊಂದಿವೆ.

ಯಾವುದೇ ಸರಕಾರಕ್ಕಾಗಲಿ ಹಿಂಸೆಯನ್ನು ಎದುರಿಸಲು ಬಹು ಸುಲಭ ಉಪಾಯವು ಸಂಧಿಸುತ್ತದೆ. ಅದೇ ಮೇರೆಗೆ ಬ್ರಿಟಿಷರು ಕೆನಿಯಾದಲ್ಲಿ, ತಮ್ಮ ಸಾಮ್ರಾಜ್ಯ ಕಂಟಕವೆಂಬ ಹತ್ತಿಗಿನ ಸೈನ್ಯವನ್ನು ಕಾಂದಿಳಿಸಿ ಅದರಿಂದ ಆ ಮೂಲನಿವಾಸಿಗಳನ್ನು ಹತ್ತಿಕ್ಕಲು ಯತ್ನಿಸುತ್ತಿದ್ದಾರೆ.

ಆಫ್ರಿಕಿಯಲ್ಲಿಯು ಕರಿ ಜನಾಂಗದ ಅಂದೋಲನವು ಇಂದು ನೆನ್ನೆಯಿಂದ ನಡೆದಿಲ್ಲ. ಅದ್ಯಾರಂಭ ಅದಾರ ಭೂಮೀಶ್ವರೂ ಪವನ್ನು ಕಲ್ಪಿಸಿಕೊಂಡು ಕ್ಷತ್ರಿಯರಿಗಲ್ಲಿ ಅದನ್ನು ಎದುರಿಸುವ ಬಗ್ಗೆ ವೈಶ್ಚತ್ಯರು ಪೂರ್ವದಿಂದಲೇ ಸಿದ್ಧತೆ ನಡೆಸಿದ್ದಾರೆ.

೧೯೪೬ ನೇ ಇಸ್ವಿಯಿಂದ ಆಲ್ಲಿ ಸೈನ್ಯದ ಓಡಾಟಕ್ಕೆ ಬೇಕಾಗುವ ಮಾರ್ಗಗಳನ್ನು ೫೦-೬೦ ಕೋಟಿ ಪೌಂಡು ವೆಚ್ಚ ಮಾಡಿ ಕಟ್ಟಿಸಿದ್ದಾರೆ. ಪ್ಯಾಕ್‌ಕಿನ್ಸ್‌ನ್ ದಾರಿಯು ಒತ್ತರಿ ಒಂದು ದೊಡ್ಡ ಶಸ್ತ್ರಾಗಾರವನ್ನು ಕಟ್ಟಿಸಿದ್ದಾರೆ. ಮೊಂಬಾಸಾವನ್ನು ಹಡಗುಕಡೆಯ ಕೇಂದ್ರವನ್ನಾಗಿ ಮಾಡಿದ್ದಾರೆ.

ಕೆನಿಯಾದಲ್ಲಿ ಕಿಕಯು ಪ್ರದೇಶದ ಜನರು ಮೂವ್ ಮೂವ್ ಸಂಘವನ್ನು ಬಹು ದಿವಸಗಳಿಂದ ನಿರ್ಮಿಸಿಕೊಂಡು ಕಾರ್ಯಮಾಡುತ್ತಿದ್ದಾರೆ. ಪ್ರಸಂಗದಲ್ಲಿ ಬಿಳಿಯರ ವಿರುದ್ಧ ಕರಿ ಜನಾಂಗದ ರಕ್ಷಣೆ ಮಾಡುವುದೇ ಅವರ ಪ್ರಾರಂಭದ ಉದ್ದೇಶವಾಗಿತ್ತು.

ಆ ಸಂಘದ ಕಡೆಗೆ ಬಿಳಿಯರು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನೋಡುತ್ತಲೇ ಇದ್ದರು. ಆದರೆ ಆಕ್ಷೇಪಾರ್ಹ ಚಟುವಟಿಕೆಗಳು ಕಾಣದ ಹೊರತು ಅವರಿಗೆ ಏನು ಮಾಡಲೂ ಬರುವಂತಿದ್ದಿಲ್ಲ. ಸದ್ಯದ ಪರಿಸ್ಥಿತಿಯು ಮೂಲಕ ಮೂವ್ ಮೂವ್ ಜನರು ಹಿಂಸೆಗೆ ಬೃಹಾಕಿದ್ದರಿಂದ ದಬ್ಬಾಳಿಕೆಗೆ ಅವ್ಕಾಶ ದೊರೆಯಿತು.

ಮೂಲ ನಿವಾಸಿಗಳಲ್ಲಿ ಒಡಕು ಹುಟ್ಟಿಸಲು ಪಾಶ್ಚಾತ್ಯರು ಯತ್ನಿಸಿದರು. ಕಿಕಯು ಜನರು ಮಾತ್ರ ಮೂವ್ ಮೂವ್ ಅಂದೋಲನದಲ್ಲಿ ಇದ್ದಾರೆ. ಉಳಿದವರು ಇಲ್ಲ. ಆ ಅಂದೋಲನಕ್ಕೆ ಸಂಬಂಧವಿಲ್ಲದವರಿಗೆ ಯಾವ ಭಯವೂ ಇಲ್ಲ ಎಂದು ಹೇಳಿದರು. ಇದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಎಲ್ಲರೂ ಮೂವ್ ಮೂವ್ ಅಂದೋಲನದ ಬಗ್ಗೆ ಆಕ್ಷಿಯನ್ನೇ ತೋರಿಸಹತ್ತಿದರು. ಗತ್ಯಂತರವಿಲ್ಲದೆ ಸೈನ್ಯದಲ್ಲಿ ಆಫ್ರಿಕಾದಲ್ಲಿಯ ಭಾಗಗಳನ್ನು ಹುಡಿದುಕೊಂಡ ಎಲ್ಲಿ ಪಾಶ್ಚಾತ್ಯ ದೇಶಗಳ ಪ್ರತಿನಿಧಿಗಳು ನೈರೋಬಿಯಲ್ಲಿ ಆಗಸ್ಟ್ ತಿಂಗಳಲ್ಲಿ ಕೂಡಿದ್ದರು. ಎಲ್ಲರೂ ತಮ್ಮ ಶಕ್ತಿಗಳನ್ನು ಸಂಯೋಜಿಸಿ ಸಾಮೂಹಿಕ ರೀತಿಯಿಂದ ಕರಿಜನರನ್ನು ಹಣ್ಣಿಗೆ ತರಬೇತಿದು ಅಲ್ಲಿ ನಿಶ್ಚಯಮಾಡಿದರು.

ಒಡಕು ಹುಟ್ಟಿಸಿ ಆಳುವ ಯೋಜನೆಯು ಅಕಸ್ಮಿಯಾಯಿದಂದ ದಬ್ಬಾಳಿಕೆಯನ್ನು ಪಾಶ್ಚಾತ್ಯರು ಪ್ರಾರಂಭಿಸಿದರು. ಕಮ್ಮಿ ಕೈಲಿಳಗಿನ ಸರ್ವ ಅಧಿಕಾರಿಗಳಿಗೆ ಕತೆಯರ ಉಪಾಯಗಳನ್ನು ಉಪಯೋಗಿಸಿ ಅಂದೋಲನವನ್ನು ಹತ್ತಿಕ್ಕಲು ಆಜ್ಞೆ ಮಾಡಿದರು.

ಕರಿ ಜನಾಂಗದವರೇ ಆದ ಕೆಲವರು ಅಧಿಕಾರಿಗಳಾಗಿದ್ದಾರೆ ಮೂಲಕ್ಕ, ನಿರ್ವಾಹವಿಲ್ಲದೆ ತಮ್ಮ ಜನರ ಮೇಲೆಯೇ ಸರಕಾರಿ ಧೋರಣದಂತೆ ಬಲಾತ್ಕಾರ ಮಾಡಲು ಉದ್ಯುಕ್ತರಾಗಿದ್ದರು. ಇಂತಹ ಉದಾಹರಣೆಗಳನ್ನು, ನಮ್ಮ ಸ್ವಾತಂತ್ರ್ಯ ಅಂದೋಲನದ ಕಾಲದಲ್ಲಿ ಕೂಡ ನಾವು ಅನುಭವಿಸಿದ್ದೇವೆ.

ಕರಿ ಜನಾಂಗದ ಮೂವರು ಪ್ರಮುಖರಿಗೆ ಸರಕಾರದೊಡನೆ ಸಹಕರಿಸಿ ಮೂಲನಿವಾಸಿಗಳನ್ನು ಹತ್ತಿಕ್ಕಲು ಬಿಳಿಯರು ಹೇಳಿದರು. ಅವಲ್ಲಿ ಇಬ್ಬರು ಆ ಪ್ರಕಾರ ಕಾರ್ಯಪ್ರವೃತ್ತರಾದರು. ಅವರನ್ನು ಮೂವ್ ಮೂವ್ ಜನರು ಕೊಂದು ಹಾಕಿದರು. ಮೂರನೆಯ ವನು ತನ್ನ ಜನರ ಮೇಲೆ ಅನ್ಯಾಯಮಾಡಲು ನಿರಾಕರಿಸಿದನು. ಅವನನ್ನು ಸರಕಾರವು ಬಂಧಿಸಿ ಜೈಲಿಟ್ಟಿದೆ.

ಅಂದೋಲನದ ಮೂಲಕ ಬಿಳಿ ಜನರಲ್ಲಿಯ ಕೆಲಸೇವರೆಯ ಮತ್ತು ಕಾರ್ಯಿಕ ತರರು ಕೂಡ ಬಲ್ಲಿ ಹೋಗಿದ್ದಾರೆ. ಅಂದೋಲನಕಾರನನ್ನು ಬಂಧಿಸಿ ಒಬರಲ್ಲಿಯು ಕೆಲವನ್ನು ಬಿಳಿಯರ ಅಸ್ಥಿತ್ವಕ್ಕಾಗಿ ಪ್ರಾರ್ಥನೆಯ ಕೃತ್ಯವನ್ನು ಸಂಚಾರದಿಪರು ಕೈಕೊಂಡಿದ್ದಾರೆ.

ಕಾಲಜನರಿಗೆ ಹಿಂಸಕರವಾದ ಯಾವುದೇ ವ್ಯವಸ್ಥೆಯು ಇಂದು ಉಳಿಯುವಂತಿಲ್ಲ. ಬಹಳವೇನು? ಕೆನಿಯಾದಲ್ಲಿ ಒಂದು ಸ್ವತಂತ್ರ ಶಿಕ್ಷಣ ಸಂಸ್ಥೆಯು ಕಾರ್ಯಮಾಡುತ್ತಿತ್ತು. ಆ ಸಂಸ್ಥೆಯು ೪೦೦ ಶಾಲೆಗಳನ್ನು ನಡೆಸುತ್ತಿತ್ತು. ೬೨ ಸಾವಿರ ವಿದ್ಯಾರ್ಥಿಗಳು ಆ ಶಾಲೆಗಳಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದರು. ಆ ಸಂಸ್ಥೆಯನ್ನು ಇಂದು ಸರಕಾರವು ನಿಷ್ಠಸಿದರು. ಹಾಗೇಕೆಂದು ಕೇಳಿದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಯು, ಶಿಕ್ಷಿತ ಪ್ರಜೆಗಳಿಗೆ ಅವಶ್ಯಕತೆಗಿಂತ ಹೆಚ್ಚು ಶಿಕ್ಷಣ ಹೊಂದಿದ್ದಾರೆ ಎಂದು ಬೇಕದನ್ನು ತಿ!

ಆದರೆ ಈ ದಬ್ಬಾಳಿಕೆಯಿಂದ ಆಲ್ಲಿಯ ಅಂದೋಲನಕ್ಕೆ ಅವನತಿಯಂಟಾಗುತ್ತಿದೆ ದಿನೇ ದಿನೇ ಅವರ ಪ್ರಭಾವ ಹಾಗುತ್ತಿದೆ. ಇದು ಕೂಡ ಅನುಭವದ ಮೂತೇ ಆಗಿದೆ ಆಫ್ರಿಕಾ ಪ್ರಜೆಗಳು ಬರಬರುತ್ತ ಬೇಕಾದಂಥಹ ತ್ಯಾಗಕ್ಕೆ ಸಿದ್ಧರಾಗುತ್ತ ನಡೆದಿದ್ದಾರೆ. ಈ ಅಂದೋಲನದ ಬಗ್ಗೆ ಬಿಳಿಯರಲ್ಲಿಯು ಕೆಲವರು ಕೂಡ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿರುವುದನ್ನೂ ಕಾಂಗ್ರೆಸ್ಸಿನ ಪ್ರತ್ಯಕ್ಷಭಾಗವಹಿಸಿದ್ದಾರೆ ಸಂಗತಿಯೇ ಆಗಿರಾಣ ತ್ಯದೆ.

ಇಷ್ಟೇ ಅಲ್ಲದೆ ವರ್ಣವೈಷಮ್ಯದ ತಲೆಹಿದಿಮೇಲೆ ನಡೆಯಲಾರಂಭ ಈ ಹೋರಾಟವನ್ನು ಕಂಡು ಇಡೀ ಜಗತ್ತೇ ಅತ್ತ ಕಡೆಗೆ ಕುತೂಹಲದಿಂದ ನೋಡುತ್ತಿದೆ. ಮತ್ತೆ ಈ ಕಾರ್ಯಕಾರ್ಯದ ಕೆಲವನ್ನು ಬಲ್ಲ ಕೂಟ್ಟು, ಆಫ್ರಿಕೆಯ ಮೂಲ ನಿವಾಸಿಗಳಿಗೆ ಕೂಡ ಸಮಾನಸ್ಥಿತಿಯು ಸ್ಥಾಪಿಸುವ ಯೋಗ್ಯವೇ ದೂ ಕಲ್ಲಾಗಿದೆ ಬಿಳಿಯರ ಅಸ್ತಿತ್ವವೇ ಆಫ್ರಿಕೆಯಲ್ಲಿ ಇಲ್ಲದಂತಾಗುವ ಪ್ರಸಂಗವು ಬರಬಹುದೆಂದೂ ಜಾಗತಿಕ ಮಿತ್ರವರ್ಗಗಳು ಹೇಳುತ್ತಿದ್ದಾರೆ.

'ಜೈ ಹಿಂದ್'

ಚಲ್ಲರೆ ಬಟ್ಟೆ ವ್ಯಾಪಾರಿಗಳಿಗೆ ಸಾರ್ವಜನಿಕ ಸೇವೆಯು ಆಗ್ಪಿದೆ.

ನಿಯಂತ್ರಣವು ರದ್ದಾಗಿ

ಬೇಕಾದ—ಮ್ಟೂಲುಗಳು—ಬೇಕಾದ ಪಾಗೆ

—ಬೇಕಷ್ಟು, - - ಸಾಕಷ್ಟು—

ದೊರೆಯುವ ಸಮೃದ್ಧಿಯು ಕಾಲ ಬರುತ್ತಿದೆ.

ಜನತೆಯು ಇಷ್ಟು ಸಮಯ ಹಾರೈಸುತ್ತಿದ್ದ

ಅತೀ ಕಡಿಮೆ ಕ್ರಯದ

ಡ್ರಿಲ್—ಖಾಕಿ, ನೀಲಿ ಬಣ್ಣದ ಡ್ರಿಲ್ !!!

ಪಿನ್‌ಲೇ ದೋತ್ರಿ, ಬಿಳಿ ಸೀರೆ ಪ ತರತರದ ಶರ್ಟಿಂಗ್‌ಗಳು

ಬೇಕಿದ್ದಲ್ಲಿ ಕೂಡಲೇ ಬಂದು ನೋಡಿರಿ

ವಿಚಾರಿಸಿ, ಆರಿಸಿರಿ!

ಚಂದ್ರಾನಾ ಮತ್ತು ಕಂಪೆನಿ

ಬಟ್ಟೆ ವ್ಯಾಪಾರಿಗಳು ಮಡಿಕೇರಿ (ಕೊಡಗು)

॥ ವಾರ್ತೆಗಳು. ॥

ಹೈದರಾಬಾದ ರಾಜ್ಯದಲ್ಲಿನೇಕ್ಯಾವಾಯಿಗಳನ್ನು ನಿಮೂಲಗೊಳಿಸುವ ಹಾಗೂ ಹೆಣ್ಣುಮಕ್ಕಳನ್ನು ಮಾರಾಟ ಮಾಡುವುದನ್ನು ತಡೆಯುವ ಮಸೂದೆಯೊಂದನ್ನು ಹೈದರಾಬಾದ ವಿಧಾನ ಸಭೆಯು ಸ್ವೀಕರಿಸಿದೆ.

ಹೈದರಾಬಾದದ ೨೭ ಕಮ್ಯೂನಿಸ್ಟ್ ಸಾಹಿತ್ಯಗಳನ್ನು ಗೃಹಖಾತೆಯ ಕಾರ್ಯದರ್ಶಿಯವರು ನಿಷೇಧಿಸಿದ್ದಾರೆ. ಸದರಿ ಸಾಹಿತ್ಯಗಳನ್ನು ಹೊಂದಿರುವುದು ಅಪರಾಧವೆಂದು ಘೋಷಿಸಲಾಗಿದೆ.

ಹೈದರಾಬಾದದ ಸರಕಾರಕ್ಕೆ ಅಧಿಕಾರವಿಲ್ಲವೆಂದೂ ಸಂವಿಧಾನ ಸಭೆಯು ಸಂಸ್ಥಾನದ ಭವಿಷ್ಯವನ್ನು ನಿರ್ಧರಿಸಬೇಕೆಂದೂ ಹೈದರಾಬಾದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಸ್ವಾಮಿ ರಾಮಾನಂದ ತೀರ್ಥರು ಹೇಳಿದ್ದಾರೆ.

ಹೈದರಾಬಾದ ಸಂಸ್ಥಾನದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಸ್ವಾಮಿ ರಾಮಾನಂದ ತೀರ್ಥರು ಹೈದರಾಬಾದ ಸರಕಾರದ ಕಾರ್ಯಕ್ರಮವನ್ನು ಟೀಕಿಸಿದ್ದಾರೆ. ಸಂಸ್ಥಾನದ ಪ್ರಜೆಗಳಿಗೆ ಸ್ವಾತಂತ್ರ್ಯವಿಲ್ಲವೆಂದೂ ಸಂಸ್ಥಾನದ ಆಡಳಿತವು ಪೂರ್ಣವಾಗಿ ಕೋಮುವಾದಿಗಳ ಕೈಯಲ್ಲಿದೆಯೆಂದೂ ಅವರು ಹೇಳಿದ್ದಾರೆ.

ಹೈದರಾಬಾದ ಸಂಸ್ಥಾನದ ಮುಖ್ಯ ಮಂತ್ರಿಗಳಾದ ಪ್ರಾಜ್ ಹಾಗೂ ಮಂತ್ರಿಗಳಾದ ಶ್ರೀ ಲಾಲ ಅಹಮದ್ ಮತ್ತು ಶ್ರೀ ಲಾಲ ಅಹಮದ್ ಕಾಸ್ತ್ರಿ ಹೇಳಿದರು. ಇವುಗಳಲ್ಲಿ ೬೦೦ ಮೈಲು ಪಶ್ಚಿಮ ಕರಾವಳಿ ರಸ್ತೆ ಇದ್ದು ಮುಂಬಯಿಂದ ಮದ್ರಾಸಿಗೆ ಹೋಗಿರಿ, ಬೆಳಗಾವಿ, ಹುಬ್ಬಳ್ಳಿ ಮೇಲೆ ಹಾಯ್ದು ಕೊಚ್ಚಿಗೆ ಹೋಗುವುದು. ಅಂತರಾಷ್ಟ್ರೀಯ ರಸ್ತೆಗಳಿಗಾಗಿ ಹಾಯ್ದು ಹಾಳ್ಕುಶೋಲಿ ಹಳ್ಳಿಯ ರಸ್ತೆಗಳಿಗಾಗಿ ಒಂದು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುವುದು ಎಂದೂ ಮಂತ್ರಿಗಳು ಹೇಳಿದರು.

ಪಶ್ಚಿಮ ಕರಾವಳಿಯು ಹೆಚ್ಚಾಗುವ ಸಾಧ್ಯತೆಗಳಿಗೆ ಅಮೂಲಾಲಾಗಾಗುವುದಕ್ಕಾಗಿ ಕೆಲ್ಪ್ ಕೊಲ್ಲಿಯು ಪಮಿಷದಲ್ಲಿ ಆರಬೀ ಸಮುದ್ರದಲ್ಲಿ ಆಧುನಿಕ ಸಲಕರಣೆಗಳಿಂದ ಕೂಡಿದ ದೀರ್ಘಕ್ಕಂಧವೊಂದನ್ನು ನಿರ್ಮಿಸಲು ಭಾರತ ಸರಕಾರ ವಿಚಾರ ನಡೆಸಿದೆ.

ಮಧ್ಯ ಭಾರತ ಕಾಂಗ್ರೆಸಿನಲ್ಲಿ ವಿಶಿಷ್ಟ ಸಂಬಂಧಿಗಳು ಹಾಗು ಜಾತಿಯ ವನೋ ಪೃತ್ತಿಯು ಜನರು ಸೇರಿಕೊಳ್ಳದಂತೆ ಕಾಂಗ್ರೆಸ್ ವಿಚಾರಮೇದೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಶಿಕರಾರವಜ ಗ್ವಾಲಿಯರ್ ರಾಜ್ಯ ಕಾರ್ಯಕರ್ತರಿಗೆ ಎಚ್ಚರಿಕೆಯಿತ್ತರು.

ಪಶ್ಚಿಮ ಬಂಗಾಲ ವಿಧಾನ ಸಭೆಯ ಸದಸ್ಯರೂ ಉಪಮಂತ್ರಿಗಳೂ ಆಗಿರುವ ಶಶ್ಯೇಂದ್ರಮಂದ್ರ ಘೋಷ್ ಹಾಗೂ ಮಂದಿರ ಮೇಜರು ಎಂಬವರ ಅಯ್ಕೆಯನ್ನು ರದ್ದಾಗಿದೆಯೆಂದು ಚುನಾವಣೆ ನ್ಯಾಯಮಂಡಲವು ತೀರ್ಪನ್ನಿತ್ತಿದೆ. ಇವರ ಎದುರಾಳಿಯು ಶತ್ರ ಸಾಮಪಕ್ಷವನ್ನು ವಿಚಾರಣೆ ಕೈತ್ತುಹಾಕಲಾಗಿತ್ತು ಎಂದು ಅದೇ ಮಂಡಿಸಿದ್ದರು.

ಸಿಂಹಳದ ಗೃಹಸಚಿವರಾದ ಶ್ರೀ ಎಸ್. ರತ್ನಾಯಕೆಯವರು ತಮ್ಮ ಹಿರಿಯಣ್ಣ ವಿಷಾಹಾರದಿಂದ ಸಾವಿಗೀಡಾದ ಸಂಬಂಧದ ಭವಿಷ್ಯತ್ತಿನ ಧಾರವನ್ನೆ ಕೊಡಿಸಿದೆ ಎಂದೂ ಸಿಂಹಳಿಯರು ಭಾರತದ ಮಹಾ ಪುರುಷ ಶಾಂತಿ ಧುರೀಣರಾಂ ದಪ್ಪಾತ್ಮಗೋಂದಿಸಲ್ಪಟ್ಟರೆಂದೂ ಹೇಳಿದರು

Wanted.

One second hand, Double Barrel, 12 Bore, Hammerless English Gun in good condition. Persons interested in offering please communicate immediately to:—

INTER CONTINENTAL EXPORTS & IMPOTS
521-Diagonal Road.
Visveswarpur, Bangalore-4.

ಶ್ರೀ ಕೆ. ಸಿ ಪೀಕಾಂಬರರವರು,
"ಕೊಡಗು" ಬಿಡಿಯೆರೆಯು,
ಕೊ ಪ್ರಿ ಜೆ ಇ.

ಆಫ್ರಿಕಾ ಖಂಡವೇ ಆದರಲ್ಲಿ ಹುಟ್ಟು ಹೊಗುತ್ತಿದೆಯೆಂದು ಪ್ರಧಾನ ಮಂತ್ರಿ ಶ್ರೀ ನೆಹರು ಇವರು ಲಕ್ನೋದಲ್ಲಿಯು ಪ್ರಚೋದಕ ಸಭೆಯೊಂದರಲ್ಲಿ ಮಾತನಾಡುತ್ತಾ ಹೇಳಿದರು.

ನವದಾಹಲಿ ರಾಜ್ಯದಲ್ಲಿ ಕಾಂಗ್ರೋಡಿಯು ಆರಂಭಿಸಿರುವ ಪೂರ್ವದ್ಯೋಗ ಭಾಗದ ಹತ್ತಿಯ ಕ್ಷೇತ್ರವು ಈ ವರ್ಷದ ೧೧೦೦ ಕ್ಕೆ ೧೫೦ ರಷ್ಟು ಹಡಿಮೆಯಾಗಿದೆಯೆಂದು ಅಂದಾಜು ಮಾಡಲಾಗಿದೆ. ನವದಾಹಲಿಯ ತೆಗರದ ತಿನ್ನವೆಲ್ಲಿ ಜಲ್ದೆಗಳಲ್ಲಿ ಇಳಿದ ಪರಿಣಾಮದ ಕ್ಷೇತ್ರದ ೧೧೦೦ ಕ್ಕೆ ೧೫೦ ರಷ್ಟು ಭಾಗದಲ್ಲಿ ಇನ್ನೂ ಬಿತ್ತಿಗೆಯಾಗಿಲ್ಲ. ಕ್ಷೇತ್ರ ಮತ್ತು ನಷ್ಟ ಎರಡೂ ಹಡಿಮೆಯಾದ ಕಾರಣ ಈ ಸಲದ ಹತ್ತಿಯ ಬೆಳೆ ಹೋದ ವರ್ಷದ ಬೆಳೆಯ ೧೨ ಆಣೆಯಷ್ಟಾಗ ಬಹುದೂ.

ತಿರ್ಪಿ ವಿಶ್ವವಿದ್ಯಾಲಯದ ಉಪಕುಲಗುರುಗಳಾದ ಡಾ. ಎಸ್. ಎಸ್. ಸೇನರು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟಿರುವರು. ಕೇಂದ್ರ ವಿದ್ಯಾವಿದ್ಯಾಲಯದ ಅಂತರೀಕ ಅಡಳಿತೆಯಲ್ಲಿ ಅತಿಕ್ಷೇಪಯೋಗ್ಯವಾದ ಹಸ್ತಕ್ಷೇಪ ನಡೆಸಿದ್ದೇ ತಮ್ಮ ರಾಜೀನಾಮೆಗೆ ಕಾರಣವೆಂದು ಡಾ. ಸೇನರು ಹೇಳಿಕೆ ಕೊಟ್ಟಿರುವರು.

ಪಶ್ಚಿಮ ಕರಾಂಡದ ಅಧಿಕಶಿಗಳು ಗಿರಿವನ ಲೆಫ್ಟಿನೆಂಟ್ ಜನರಲ್ ಎಸ್. ಎಸ್ ಶ್ರೀನಾಗೇಶ ಇವರ ಅಧಿಕಾರದ ಅವಧಿಯನ್ನು ಕೇಂದ್ರ ಸರಕಾರವು ಮತ್ತೆ ಎರಡು ವರುಷ ಬೆಳೆಸಿದ್ದಾರೆಂದು ತಿಳಿಯಬರುತ್ತದೆ. ಅವರ ಸದ್ಯದ ಅವಧಿಯು ಗಿಳಿಸಿ ಅಗಸ್ಟ ಏರಿಗೆ ಮುಗಿಯುತ್ತಿತ್ತು.

ಭಾರತದ ಮತ್ತು ಭಾರತದಿಂದ ವಿದೇಶಗಳಿಗೆ ವಿಮಾನ ಸರ್ವಿಸು ನಡೆಯುವ ಸೌಕರ್ಯವೊಂದನ್ನು ಸ್ಥಾಪಿಸಬೇಕೆಂದು ಭಾರತ ಸರಕಾರವು ನಿರ್ಧರಿಸಿದ್ದು ಕೇಂದ್ರ ಸಾರಿಗೆ ಖಾತೆಯು ಈ ಬಗ್ಗೆ ಒಂದು ಮಸೂದೆಯನ್ನು ಲೋಕ ಸಭೆಗೆ ಈ ಅಧಿವೇಶನದಲ್ಲಿ ಮಂಡಿಸುವದೆಂದು ತಿಳಿಯುತ್ತದೆ.

ಸಾಜೀವಮುದ್ದೀನ್ ಮಂತ್ರಿಮಂಡಲದಲ್ಲಿ ಕರಾಚಿ ನಾಗರಿಕರಿಗೆ ವಿಶ್ವಾಸವಿಲ್ಲವೆಂದು ಸುರವರ್ದಿಯವರು ಹೇಳಿದರು.

ಬೀಡಿ ಹತ್ತಿಯನ್ನು ಉರುಪೋಲಿಸುವ ತಂತ್ರವೇ ಎರಿಸುವ ಭಾರತದಿಂದ ಆಯಾತ ಮಾಡುವುದಕ್ಕೆ ಪಾಕಿಸ್ತಾನ ಸರಕಾರವು ನಿರ್ಬಂಧ ಹಾಕಿರುವುದರಿಂದ ಪೂರ್ವ ಪಾಕಿಸ್ತಾನದಲ್ಲಿಯು ಬೀಡಿ ಹತ್ತಿಯ ಕಾರ್ಖಾನೆಗಳಿಗೆ ಧಕ್ಕೆ ತಟ್ಟಿದೆ. ಇಷ್ಟ ಪುರಿ ಕೆಯು ಒಂದು ಚೀಲ ಬೀಡಿ ಎಲೆಯು ದೆಲೆ ಮೊದಲು ೧೧ ರೂ. ಇತ್ತಂತೆ ಈಗ ೧೧೦ ರೂ. ಏರಿದೆ. ಕೆಲವರು ಕಾಗದದಲ್ಲಿ ಬೀಡಿ ಕಟ್ಟಿ ಮಾರಹತ್ತಿದ್ದಾರೆ. ಈ ತಂಬಾಕು ಎಲೆ ಆಮದಿಗೆ ಅಪ್ಪಣೆಯಾಗುವುದೂ ಕಷ್ಟವಾಗಿದೆ. ಇಷ್ಟಲ್ಲದೆ ಬೇರೆ ಎಲೆಯನ್ನಾದರೂ ಕೊಂಡಿಟ್ಟು ಎಂದು ಬೀಡಿ ಕಾರ್ಖಾನೆಯವರು ಸರಕಾರಕ್ಕೆ ವಿನ್ನವಿಸಿ ಕೊಂಡಿದ್ದಾರೆ.

ಪಾಕಿಸ್ತಾನದ ಮುಖ್ಯ ಮಂತ್ರಿಗಳಾದ ಖಾಜಾ ನಾಜಿಮುದ್ದೀನರು ಮುಂದಿನ ತಿಂಗಳು ಲಂಡನ್ನಲ್ಲಿ ಪಾಕಿಸ್ತಾನ ರಾಯಭಾರಿಗಳ ಪರಿಷತ್ತನ್ನು ಕರೆದಿರುವರು. ಅನೇಕರಿಳದ ಪಾಸಾಡಾ ದೇಶದಲ್ಲಿಯು ರಾಯಭಾರಿಗಳೂಪಸ್ಥ ಪೂರ್ವದಲ್ಲಿಯು ರಾಯಭಾರಿಗಳ ಸಮ್ಮೇಳನಕ್ಕೆ ಬರಲಿದ್ದಾರೆ. ಪಾಕಿಸ್ತಾನದ ವಿದೇಶ ವೈರಣ ಮಂತ್ರಿ, ರಾಯಭಾರಿಗಳ ಕಾರ್ಯದ ಸಂಬಂಧದಲ್ಲಿ ಈ ಸಮ್ಮೇಳನ ನೇರುವ ದಂತೆ.

ಅಮೃತಾ ಪಾಕಿಸ್ತಾನ ಪಕ್ಷದ ವಿಜೂ ಇಪ್ಪತ್ತಕರುದ್ದಿನರು ೨೫ನೇ ದಿನಾಂಕ ಪಾಕಿಸ್ತಾನ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡುತ್ತಾ, ಪಾಕಿಸ್ತಾನ ಸರಕಾರವು ಪಾಕಿಸ್ತಾನದಲ್ಲಿಯು ಹಿಂದುಗಳಿಗೆ ಸಾಕಷ್ಟು ಸಂರಕ್ಷಣಾ ಕೊಡದೆ ತನ್ನ ಕರ್ತವ್ಯದಲ್ಲಿ ವಿಫಲವಾಗಿರುವುದು ಎಂದು ಹೇಳಿದರು.

ವೈಸೂರು ಸರಕಾರದ ಮುಖ್ಯಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರು ೨೭ನೇ ದಿನಾಂಕ ಗೀತಾಜಯಂತಿಯ ದಿನ ಸಂಸ್ಕೃತ ಪ್ರಸಾರ ಯೋಜನೆಯನ್ನು ಉದ್ಘಾಟಿಸುತ್ತಾ ಅಕಾಶವಾಣಿಯಲ್ಲಿ ಭಾಷಣ ಮಾಡಿದರು. ರಾಮಾಯಣ ಮಹಾಭಾರತಾದಿ ಗ್ರಂಥ ಪಠನವು ಪ್ರದಾಕಾಲ ನಡೆಯುವಲಿ ಎಂದು ಜನಾರ್ಧನ ಸ್ವಾಮಿಯು ಜನರಲ್ಲಿಯೂ ಪ್ರಾರ್ಥನಾ ಭಾಷಣ ಮಾಡಿದರು.

ಮಹಾ ಗುಜರಾಥದ ನಿರ್ಮಾಣಾತ್ಮಕ ಹುದ್ದೆಯನ್ನಲು ಒಂದು ಶಾಶ್ವತ ಸಂಸ್ಥೆಯಿರಬೇಕು ಎಂದು ಶ್ರೀ ಹಿಮ್ಮತಲಾಲ ಶುಕ್ಲರು ವಲ್ಲಭ ವಿದ್ಯಾನಗರದಲ್ಲಿ ನೇತಾಜಿ ಪ್ರಥಮ ಮಹಾ ಗುಜರಾತ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಭಾಷಣ ಮಾಡುತ್ತಾ ಹೇಳಿದರು. ಈ ಪರಿಷತ್ತಿಗೆ ಗುಜರಾತ ಸೌರಾಷ್ಟ್ರ, ಕಚ್ಛ ಕೇಂದ್ರಳ ಪ್ರಾಂತಗಳ ಮತ್ತು ಬೈದರಾಬಾದದಿಂದಪ್ರತಿನಿಧಿಗಳು ಬಂದಿದ್ದರು

ಗಾಜಿನ ಪಾತ್ರೆಗಳು ಚೀನಿ ಮಣ್ಣಿನ ಪಾತ್ರೆಗಳು ಸಿಗದೇಟು ಚುರುಟು ಗತಿಯೂ ಆಗಿರುವ ವಿದ್ಯುಚ್ಛಕ್ತಿಯು ಉಪಕರಣಗಳು ಹೀಗೆ ಸುಮಾರು ೨೨ ವಸ್ತುಗಳ ಮೇಲೆ ಬಿಹಾರ ಸರಕಾರವು ಡಿಸೆಂಬರ್ ೧ ರಿಂದ ಮಾರಾಟ ಕರವನ್ನು ರೂಪಾಯಿಗೆ ೬ ಪೈ ಯಂತೆ ಹೇರಿದ್ದಾರೆ.

ಸದ್ಯದ ಪವಾಜದಲ್ಲಿಯು ದೋಷಗಳಿಗೆ ಈಗಿನ ಶಿಕ್ಷಣ ಪದ್ಧತಿಯೇ ಕಾರಣವಾಗಿದೆ; ಮೂಲ ಶಿಕ್ಷಣವು ಜಾರಿಯಲ್ಲಿ ಬರುವ ವರೆಗೆ ಶಿಕ್ಷಕರೂ ವಿದ್ಯಾರ್ಥಿಗಳು ಹೊಲಗೆಲಸದಲ್ಲಿ ತೊಡಗಿ ಅನಂದದಿಂದ ಬೇಳೆ ಕಳೆಸುವುದೇಸು ಎಂದು ಆಚಾರ್ಯ ವಿನೋಬಾ ಭಾವೆಯವರು ಪಾರ್ಟ್ನಲ್ಲಿ ಎಳೆದ ವಿಶಾಂತ ಪ್ರಾರ್ಥನಾ ಭಾಷಣದಲ್ಲಿ ಹೇಳಿದರು.

THE CANARA BANKING CORPORATION LTD., VIRAJPET.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್, ವೀರಾಜಪೇಟೆ.

ನೋ ಟಿ ಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ನಗದಾಗಿ ಅಡಿಪಿ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಇದರ ಮೇಲಣ ಬಡ್ಡಿಯನ್ನಾಗಲಿ ವ್ಯಾದೆಗೆ ಕೊಡದೆ ಇದ್ದುದರಿಂದಲೂ ಆ ಬಗ್ಗೆ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟಿಸುಗಳು ಕೆಲವರಿಗೆ ಪಾವತಿ ಆಗಿ, ಕೆಲವರಿಗೆ ಪಾವತಿ ಆಗದೆ ವಾಪಸು ಬಂದಿರುವದರಿಂದಲೂ ಸದ್ರಿಯವರಿಗೆ ಈ ಮೂಲಕ ತಿಳಿಯ ಪಡಿಸುವದೇನೆಂದರೆ—ಸದ್ರಿಯವರು ತಡಿಟ್ಟ ನಗದಾಗಿನ್ನು ತಾ. 17-12-52ರ ಒಳಗೆ ಬಿಡಿಸಿಕೊಂಡು ಹೋಗದಿದ್ದ ಪಕ್ಷ ದಲ್ಲಿ ತಾ. 20-12-52ನೇ ಶನಿವಾರ ಅಪರಾಹ್ನ 2 ಗಂಟೆಗೆ ಯಾ ಬೇಂಕಿನವರಿಗೆ ಯುಕ್ತ ತೋರುವ ಬೇರೆ ತಾರೀಕಿನಲ್ಲಿ ಪುನಃ ನೋಟಿಸು ಕೊಡದೆನೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ವಿಲಂ ಮಾಡಲಾಗುತ್ತದೆ.

ಸಾಲದ ನಂಬ್ರ	ಸಾಲಗಾರರ ಹೆಸರು	ಸಾಲದ ಮೊಬಲಗು
		ರೂ.
142-50	ಕುಂಬಾರ ತಿಮ್ಮಪ್ಪಟ್ಟಿ, ಸಣ್ಣಪ್ಪಟ್ಟಿಯವರ ಮಗ, ಧನುಂಗಾಲ ಗ್ರಾಮ, ಗೋಣಿಕೊಪ್ಪ ಪೋಸ್ಟು.	120 0 0
273-50	ಕೆ. ಎ. ವಲಿಯುಲ್ಲಾ ಮುಸಲಿಯಾರ್, ಅಹಮದ ಮುಸಲಿಯಾರವರ ಮಗ, ಎಮ್ಮೆಮಾಡು ಗ್ರಾಮ, ಶಕ್ಕಟ್ಟಿ ಪೋಸ್ಟು.	100 0 0
782-50	ಎಂ. ಜೆ. ಅಬ್ದುಲ್ ಗಫಾರ್, ಜಫರ್‌ರವರ ಮಗ, ವ್ಯಾಪಾರಿ, ಮೂರ್ನಾಡು ರೋಡು, ಪೋಸ್ಟು ವೀರಾಜಪೇಟೆ.	105 0 0
146-51	ಸೇಠ್ ಹಸನ್ ಸಾಹೇಬ್, ಸೇಠ್ ಅಹಮದ್‌ರವರ ಮಗ, ಮಾರ್ಕೆಟ್ ರೋಡು, ವೀರಾಜಪೇಟೆ	68 0 0
189-51	ಗುಡ್ಡಂಡ ಮಾದಯ್ಯ, ಸುಬ್ಬಪ್ಪನವರ ಮಗ, ಜಮೀನುದಾರ ನಾಲ್ಕೇರಿ ಗ್ರಾಮ, ಪೋಸ್ಟು ಮೂರ್ನಾಡು	90 0 0
213-51	ನೆಲ್ಲಮಕ್ಕಡ ಉತ್ತಪ್ಪ, ಬೆಳ್ಳಿಪ್ಪನವರ ಮಗ, ಜಮೀನ್‌ದಾರ ಕಾವಾಡಿ ಗ್ರಾಮ, ಪೋಸ್ಟು ಕಮ್ಮತ್ತಿ.	140 0 0
350-51	ಮೇಳೇರಂಡ ಉತ್ತಪ್ಪ, ದೇವಯ್ಯನವರ ಮಗ, ಜಮೀನುದಾರ, ಹಾಲುಗುಂದ ಗ್ರಾಮ, ಪೋಸ್ಟು ಮೂರ್ನಾಡು.	65 0 0
492-51	ತಾಯಂಡ ಕರುಂಬಯ್ಯ, ಐಯ್ಯಪ್ಪನವರ ಮಗ, ಜಮೀನುದಾರ, ಬಿಟ್ಟಂಗಾಲ ಗ್ರಾಮ, ಪೋಸ್ಟು ವೀರಾಜಪೇಟೆ.	150 0 0
535-51	ಮೇಳೇರಂಡ ಚಿನ್ನಪ್ಪ, ಪೂವಯ್ಯನವರ ಮಗ, ಜಮೀನುದಾರ, ಹಾಲುಗುಂದ ಗ್ರಾಮ, ಪೋಸ್ಟು ಮೂರ್ನಾಡು.	100 0 0
546-51	ಚೋಂದಂಡ್ರ ಅಪ್ಪಯ್ಯ, ಮಾಚಯ್ಯನವರ ಮಗ, ಜಮೀನುದಾರ, ಚೆಂಬೆಬೆಳ್ಳೂರು ಗ್ರಾಮ, ಪೋಸ್ಟು ವೀರಾಜಪೇಟೆ.	95 0 0
681-51	ಕೊಕ್ಕಂಡ ಅಚ್ಚಪ್ಪ, ಮುತ್ತಣ್ಣನವರ ಮಗ, ಜಮೀನುದಾರ, ಹಾಕೂರು ಗ್ರಾಮ, ಪೋಸ್ಟು ಹಾತೂರು.	180 0 0
734-51	ತೆಲುಗರ ಪೊನ್ನಪ್ಪಟ್ಟಿ, ಕಾವೇರಿ ಪಟ್ಟಿಯವರ ಮಗ, ವ್ಯಾಪಾರಿ, ತೆಲುಗರ ಬೀದಿ, ವೀರಾಜಪೇಟೆ.	83 0 0
797-51	ಪುಟ್ಟಿಮಾಡ ಕಾರ್ಯಪ್ಪ, ಕಟ್ಟಿಪ್ಪನವರ ಮಗ, ಜಮೀನುದಾರ, ನಲ್ಲೂರು ಗ್ರಾಮ, ಪೋಸ್ಟು ಪೊನ್ನಂಪೇಟೆ.	150 0 0
909-51	ಪುನೆಯಪಂಡ ಗಣಪತಿ, ಪೂವಯ್ಯನವರ ಮಗ, ಜಮೀನುದಾರ, ಅರುವತೊಕ್ಲು ಗ್ರಾಮ, ಪೋಸ್ಟು ಗೋಣಿಕೊಪ್ಪಲು.	150 0 0
919-51	ನೆಲ್ಲಮಡಮಾಡ ಕಾರ್ಯಪ್ಪ, ದೇವಯ್ಯನವರ ಮಗ, ಜಮೀನುದಾರ, ಬಾಡಗ ಗ್ರಾಮ, ಪೋಸ್ಟು ವೀರಾಜಪೇಟೆ.	95 0 0
1006-51	ಮಚೆಮಾಡ ಮಾಚಯ್ಯ, ಮುತ್ತಣ್ಣನವರ ಮಗ ಜಮೀನುದಾರ, ಬಲ್ಲಮಾಂಡೂರು ಗ್ರಾಮ, ಪೋಸ್ಟು ಪೊನ್ನಂಪೇಟೆ.	150 0 0
1064-51	ಬಲ್ಲಚಂಡ್ರ ಮಂದಣ್ಣ, ಮುದ್ದಪ್ಪನವರ ಮಗ, ಜಮೀನುದಾರ, ಕಡಂಗಮುರೂರು ಗ್ರಾಮ, ಪೋಸ್ಟು ಕಡಂಗ.	105 0 0
1279-51	ಬೊಳ್ಳಚಂಡ ಚಿಣ್ಣಪ್ಪ, ನಂಜಪ್ಪನವರ ಮಗ, ಟೈಲರ್, ಮೈಯಿನ್ ರೋಡ, ವೀರಾಜಪೇಟೆ.	270 0 0
52-52	ಪಿ. ಪಿ. ಜಾಕೂಬ್, ಪರೆಯರ್‌ರವರ ಮಗ, C/o ಕೂರ್ಗ್ ಟೆಂಬರ್ಸ್ ವೀರಾಜಪೇಟೆ.	125 0 0
93-52	ಕುಂಞಂಗಡ ಸುಬ್ಬಯ್ಯ, ಕಾಳಯ್ಯನವರ ಮಗ, ಜಮೀನುದಾರ, ಟಿ. ಸಿದ್ದೆಗೇರಿ ಗ್ರಾಮ, ಪೋಸ್ಟು ಶ್ರೀಮಂಗಲ.	550 0 0

ಬೇಂಕ್ ಆಫೀಸು, ವೀರಾಜಪೇಟೆ.
29-11-52.

U. MADHAVA ACHAR,
AGENT.

Reward Rs. 150.

A small black & white Spaniel male dog with long tail lost from Attur Estate since Friday 21st instant. Reward of Rs. 150/- will be paid by J. A. A. Breithaupt Attur Estate, Sunticoppa, N. Coorg, if dog is returned

Office of the President, Mercara Municipality.
Mercara, the 4th December, 1952.

Wanted

Applications are invited for the temporary post of an Engineer from qualified and experienced Engineer to supervise the work of the construction of a Town Hall and other works in the Mercara Municipality Mercara, Coorg. Applications should reach the undersigned before 20th December 1952. The post will carry a salary of Rs. 150 to Rs. 200 inclusive of all allowances the salary to be fixed taking into consideration the qualification and experience of the candidate. The post is likely to continue for one year.

P. A. MOHIDEEN,
President.

ವಿ ನಂ ತಿ.

ಆಪಿಲ ಕೊಡವ ವಿದ್ಯಾನಿಧಿಯಿಂದ ಹಣ ಸಹಾಯ ಪಡೆದು ಈಗ ಯೋಗ್ಯ ಸಂಪಾದನೆ ಮಾಡುತ್ತಿರುವವರೂ ಜಲನ ರಿದ್ದಾರೆ. ಇವರಲ್ಲಿ ಕೆಲವರು ತಾವು ಪ ರಾರು ಬರೆದು ಹೊಂದಿಳಿಂಡ ಸಾಲವ ನ್ನು ನುಡುಪಾವತಿ ಮಾಡಿದೆ ನಿಧಿಯಿಂದ ಮೂರು ಮೂವತ್ತಾರು ಸಾವಿರ ರೂಪಾ ಯಿಗಳ ವಸೂಲಿಗೆ ಉಳಿದಿದೆ ಸಂಸ್ಥೆ ಯು ಮಾಡಿದ ಈ ಸಹಾಯವನ್ನು ಮರೆ ತು, ಎಸ್ಟೇ ಕೇಳಿದರೂ ಇವನ್ನು ಪಾವತಿ ಸದಿರುವದು ಖಂಡಾ ವಿಷಾದಕರ. ದೇ ಶದ ಬೇರೆ ಬೇರೆ ಕಡೆಗಳಲ್ಲಿ ಈ ಸಂಸ್ಥೆಯ ವಿಷಯದಲ್ಲಿ ನಮಗೆ ಬಂದಿರುವ ಸಾಲಗಾರರ ಹೆಸರುಗಳನ್ನು ಸ್ಥಳೀಯ ಪತ್ರಿಕೆಗಳಲ್ಲಿ ಆಗಾಗ ಪ್ರಕಟಿಸಬೇಕೆಂದು ಜನರು ಕೇಳಿ ಕೊಂಡಿದ್ದಾರೆ. ಕಾರ್ಯಾದ್ಧಕ್ಕೆ ಎಡೆ ಕೊಡಬೇಡ ತಮ್ಮ ಬೆಲೆಬಾಳುವ ಸಾಲಗಳನ್ನು ಇಂದು ಉದ್ಯೋಗಸ್ಥರಿದ್ದು ಸಂಪಾದಿಸುತ್ತಿರುವ ಮಹಾಜನರು ಶೀಘ್ರವೆ ಕಳುಹಿಸಿ ಕೊಟ್ಟು ಜನರಪೇಕ್ಷೆಗೆ ಪಾತ್ರರಾಗಬೇಕಾಗಿ ಕೇಳಿಕೊಳ್ಳುತ್ತೇನೆ.

6-4 ಕಾರ್ಯದರ್ಶಿ,
ಆಪಿಲ ಕೊಡವ ವಿದ್ಯಾನಿಧಿ.

Licence No. 60.
Licenced to Post without Prepayment.

Reg. No. M. 1660.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಪಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೯–೦–೦.

ಸಂಪುಟ ೬೧ | ಕಾರೇಕು ೧೯–೧೨–೧೯೫೨ಸೋಮವಾರ | ಸಂಚಿಕೆ ೫೨

ಮೂರಾಟಕ್ಕಿದೆ.

ಮಡಿಕೇರಿ ಪಟ್ಟಣಪಂಚಾಯಿತಿಯ ವ್ಯಾಪ್ತಿಗೆ ಸೇರಿದ ಸರ್ವೆ ನಂಬರ್ 1ರಲ್ಲಿ ಒಳಪಟ್ಟ ಇದರ ಪಶ್ಚಿಮ ದಿಕ್ಕಿನ ಭಾಗ, ಬಾವಿ ಫೀಟಕ್ಕ ಸಂಪೂರ್ಣ ಅಂದ ಸಮೃದ್ಧವಾಗಿ ಮಾಡಿರುವ ಮನೆಯೊಂದಿಗೆ ಮೂರಾಟಕ್ಕಿದೆ. ಸ್ವಾಧೀನದಲ್ಲಿರುವ ಭೂಮಿಯ ಪೂರ್ವ ಭಾಗದಲ್ಲಿ ಒಟ್ಟು ಫೀಟಾವಳಿ ಭೂಮಿ ಹಾಗೂ ಪಶ್ಚಿಮಕ್ಕೆ ಸೇರಿದೆ. ಮಂಜೂರಾದ ಈ ಒಟ್ಟು ಜಾಗವನ್ನಾಗಲೀ, ಬೇರೆ ಬೇರೆಯಾಗಲೀ ಕೊಂಡುಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದಾಗಲೀ ಖುದ್ದು ವಿಚಾರಿಸಿದಾಗಲೀ ತಿಳಿದುಕೊಳ್ಳಬಹುದು.

ಪಿ. ಎಸ್. ನಾರಾಯಣಶೆಟ್ಟಿ,
ಶ್ರೀ ಗಾಯತ್ರಿಜಾಲ್,
೩೩ ಫಸ್ಟ್ ಮೇಯರ್ ರೋಡ್,
ಶೇಷಾದ್ರಿ ಪುರಂ,
4-3 ಬೆಂಗಳೂರು ೩

In the matter of Indian Companies Act 1913.

AND

Jai Hind Talkies Ltd.,
(In Voluntary Liquidation)
Sec. 208 E.

GENERAL.

There will be a meeting of the Company on 1-12-53 at 10 A M. at Somwarpet, to finally wind up the Company, to receive account of the winding up showing how the winding up has been conducted and the properties of the Company has been disposed of.

SOMWARPET, K. MOGAPPA.
18-12-52. *V. Liquidator.*

ಕ್ಷಯ ರೋಗ ವಿರೋಧ ✝ ಚಳವಳಕ್ಕೆ ಸೇರಿರಿ.

1952-53ರ

ಟಿ. ಬಿ. ಸೀಲುಗಳು.

ಟಿ. ಬಿ. ಸೀಲುಗಳನ್ನು ಕೊಂಡು ಉಪಯೋಗಿಸಿರಿ. ಸಂತೋಷಕರ ಕ್ರಿಸ್‌ಮಸ್ ಬಂದಿದೆ. ದುಃಖಿತ ಮಾನವಕುಲದ ಸೇವೆಗಾಗಿ ಪುನಹ ಹೊಸದಾಗಿ ನಾವು ಪ್ರತಿಜ್ಞಾಬದ್ಧರಾಗೋಣ.

ಎಂದೂ ಮರೆಯದಿರಿ.

(1) ಹಿಂದೂ ದೇಶದಲ್ಲಿ ಪ್ರತಿ ನಿಮಿಷಕ್ಕೊಬ್ಬನಂತೆ ಕ್ಷಯರೋಗದಿಂದ ಸಾಯುತ್ತಿದ್ದಾನೆ.

(2) ಯಾವುದೇ ಹಿಂದು ಸಮಯದಲ್ಲಿ ಹಿಂದೂದೇಶದಲ್ಲಿ 25 ಲಕ್ಷ ಕ್ಷಯ ರೋಗಿಗಳಿದ್ದಾರೆ.

(3) ಹಿಂದೂದೇಶಕ್ಕೆ ಅಗತ್ಯವಿರುವ 140 ಚಿಕಿತ್ಸಾಲಯಗಳು ಮತ್ತು 12,000 ಹಾಸಿಗೆಗಳ ಬದಲು 4,000 ಟಿ. ಬಿ. ಚಿಕಿತ್ಸಾಲಯಗಳೂ 5,00,000 ಹಾಸಿಗೆಗಳೂ ಬೇಕಾಗಿವೆ

(4) ಹಿಂದೂದೇಶದ ಕ್ಷಯ ರೋಗಿಗಳ ಪುನರ್ವಸತಿಕಾರ್ಯಕ್ಕಾಗಿ ಅನೇಕ ವಸಾಹತುಗಳು ಬೇಕು.

(5) ಈ ಗಂಡಾಂತರವನ್ನು ನಿವಾರಿಸಲು ಧನ ಸಂಗ್ರಹಿಸಲಿಕ್ಕಾಗಿ ರಾಷ್ಟ್ರದ ಉದ್ದಗಲಕ್ಕೂ ಟಿ. ಬಿ. ಸೀಲುಗಳ ಮೂರಾಟ ಚಳವಳ ನಡೆಯುತ್ತಾ ಇದೆ.

(6) ಈ ಸೀಲುಗಳು ನಿಮ್ಮ ದಿನನಿತ್ಯದ ಪತ್ರಗಳನ್ನು, **ಕ್ರಿಸ್‌ಮಸ್ ನೂತನ ವರ್ಷದ** ಅಭಿನಂದನೆಗಳನ್ನು ಅಲಂಕರಿಸಬಹುದು.

(7) ಪ್ರತಿ ಪತ್ರ, ಸಂದೇಶ, ಪಾರ್ಸಲ್ ಅಥವಾ ಪೇಕೆಟುಗಳಿಗೆ ಈ ಸೀಲನ್ನು ಹಚ್ಚುವದು ನಾವು ಮಾಡಬಲ್ಲಂಥಾದ ಸಹಾಯದ ಕನಿಷ್ಠ ಮೊದಲು.

(8) ಈ ಸೀಲ್ ಮೂರಾಟವು ತಾರೀಕು 26-1-1953ಕ್ಕೆ ಅಂತ್ಯವಾಗುವುದು

(9) ನಿಮ್ಮ ಕೈಯಲ್ಲಾದ ಸಹಾಯ ಮಾಡಲು ಸ್ವಲ್ಪವೇ ಸಮಯ ಉಳಿದಿದೆ

ಇನ್ನೂ ಸೀಲುಗಳನ್ನು ನೀವು ಕೊಂಡುಕೊಳ್ಳದಿದ್ದರೆ ದಯವಿಟ್ಟು ಈಗ ಕೊಳ್ಳಿರಿ.

ಅವು ದೊರೆಯುವ ಸ್ಥಳ:—ಸಿವಿಲ್ ಸರ್ಜನ್ ಕೊಡಗು, ಮಡಿಕೇರಿ ಮತ್ತು ಸಂಸ್ಥಾನದ ಇತರ ವಿಜಂಟಿರುಗಳಿಂದ

ಹಿಂದೂದೇಶದಲ್ಲಿ ತೃತೀಯ ಕ್ಷಯ ರೋಗ ಸೀಲುಗಳ ಮೂರಾಟ.

ದೆಲ್ಲಿಯಲ್ಲಿರುವ ಅಖಿಲ ಭಾರತ ಕ್ಷಯ ರೋಗ ಸಂಘದಿಂದ ನಡೆಸಲ್ಪಡುವಂಥಾದ್ದು.

(ಈ ಸ್ಥಳವನ್ನು ಸ್ಟ್ಯಾಂಡರ್ಡ್ ವೇಕ್ಯೂಮ್ ಆಯಿಲ್ ಕಂಪೆನಿಯವರ ಕೃಪೆಯಿಂದ)

ಮಜದೂರರ ಮನರಂಜನೆ, ಶಿಕ್ಷಣ ಹಾಗೂ ಉನ್ನತಿಯ ಕಾರ್ಯ

ಲೇ:—ಶ್ರೀ ಸದಾನಂದ ನಾಯಕ.

ಮನರಂಜನೆಯ ಅವಶ್ಯಕತೆ

ಬಿಡುವಿನ ದಿನ ಸಿನೆಮಾ ಗೃಹದ ಟಿಕೆಟ್ಟನ್ನು ಕೊಂಡುಕೊಳ್ಳಲು ತಾಸುಗಟ್ಟಲೆ ಬಿಸಿಲಿನಲ್ಲಿ ನಿಂತುಕೊಂಡಿರುವ ಜನಸಮುದಾಯವನ್ನು ನೀವು ನೋಡಿರಬಹುದಲ್ಲವೆ? ಎಲ್ಲ ವಯಸ್ಸಿನ ಹಾಗೂ ಎಲ್ಲ ವ್ಯವಸಾಯದ ಜನರೂ ಅದರಲ್ಲಿ ಕಂಡುಬರುವರು. ಸರಕಾರವು ಒಂದು ಕಾಯಿದೆಯನ್ನು ಮಾಡಿ ಇಷ್ಟು ಜನ ಇರತಕ್ಕದ್ದು ತಾಸುಗಳಿಗೆ ಒಂದು ಶೋ ಅದರಲ್ಲಿ ಸೇರಿ ನಿಂತುಕೊಂಡಿರಬೇಕು ಎಂದು ವಿಧಿಸಿದರೆ, ಅವರು ಹಾಗೆ ಎಂದಾದರೂ ಸೇರುವುದುಂಟೆ? ಎಂದಿಗೂ ಇಲ್ಲ. ಅಂದ ಮೇಲೆ, ಎಷ್ಟೊಂದು ತೊಂದರೆಗೀಡಾದರೂ ಎಷ್ಟೋ ಹೊತ್ತಿನವರೆಗೆ ಅಷ್ಟು ಜನ ಹಾಗೆ ಕಾತುಕೊಂಡು ನಿಂತುಕೊಳ್ಳಲು ಅವರ ಸ್ವಯಂಪ್ರೇರಣೆಯೇ ಕಾರಣವಲ್ಲವೇ? ಇಂಥ ಬಲವತ್ತರವಾದ ಪ್ರೇರಣೆಯು ತುಂಬಲು ಉದ್ದೇಶವು ಯಾವುದಿರಬಹುದು?

ಇದು ವಿಚಾರಾರ್ಹವಾದ ಅತಿ ಮಹತ್ವದ ಪ್ರಶ್ನೆಯೂಆಗಿದೆ. ದುಡಿದುದುಡಿದು ಸಣ್ಣದಾದ ಜೀವ (ಅ ದುಡಿಮೆ ಶಾರೀರಿಕವಾಗಿರಲಿ, ಮಾನಸಿಕವಾಗಿರಲಿ) ಬಿಡುವಿನ ಬಿಡುಗಡೆಯು ವಾತಾವರಣದಲ್ಲಿ ದಿನದ ದುಡಿಮೆಯನ್ನು ಮರೆಯಿಸಿ ಬಿಡುವ ಹಾಗೂ ಮುದುಡಿದ ಮನಸ್ಸನ್ನು ಅರಳಿಸುವ ಯಾವುದೊಂದು ಚಟುವಟಿಕೆಯಲ್ಲಿ ತೊಡಗಲು ಹವಣಿಸುತ್ತದೆ. ನಾಟಕ, ಸಿನೆಮಾಗಳು (ಧ್ಯೇಯ ಧೋರಣೆಗಳೆಂದ ನಿಕೃಷ್ಟವಾಗಿದ್ದರೂ) ಕಣ್ಣು ಕಿವಿಗಳಿಗೆ ತಮ್ಮ ತಮ್ಮ ವಿಷಯಗಳನ್ನು ಒದಗಿಸಿ ಕೊಟ್ಟು ತನ್ಮೂಲಕ ಮನಸ್ಸನ್ನೆ ಚೇತರಿಸುವುವು. 'ವಿನೋದ ಜನನಂ ಲೋಕೇ ನಾಟ್ಯವೇ ರದ್ಭುತಸ್ಥಿತಿ' ಎಂದರೆ, ವಿನೋದ ಜನನವು ನಾಟ್ಯದ ಉದ್ದೇಶವೆಂದು ನಾಟ್ಯಾಚಾರಾರಾದ ಭರತ ಮಹರ್ಷಿಗಳು ಉಸುರಿರುವರು. ಹೀಗೆಂದರೆ ವಿನೋದ ಜನನದಿಂದ ಮನಸಿನ ರಂಜನೆಯೂಗುವುದು, ಹಾಗೂ ರಂಜನೆಯಿಂದ ಹೊಸ ಚೈತನ್ಯವು ಉತ್ಪನ್ನವಾಗುವದು. ಆದರಿಂದ ಶರೀರವೆಲ್ಲ ಪರಿಹಾರವಾಗುವುದು, ಹಾಗೂ ಶರೀರವನ್ನು ವಹಿಸಿ ದುಡಿಮೆಯಲ್ಲಿ ತೊಡಗಿಸುವ ಉತ್ಸಾಹವು ಮನಸ್ಸಿನಲ್ಲಿ ಉಗಮವಾಗುವುದು. ಅಂತು, ಆಯಾಸ ಹೊಂದಿದ ಮನಸಿಗೆ ಹೊಸ ಚೈತನ್ಯದ ಅವಶ್ಯಕತೆಯಿರುವುದರಿಂದಲೇ, ಎಷ್ಟು ತೊಂದರೆಗಳಿಗಾದರೂ ಅದನ್ನು ದೊರಕಿಸಿದೇಕೆಂಬ ಪ್ರೇರಣೆಯು ಸ್ವಯಂಸ್ಫೂರ್ತವಾಗಿ ತಲೆದೋರುವುದು ಸ್ವಾಭಾವಿಕವಾಗಿರುವುದು.

ರಂಜನೆಯು ದುಡಿಮೆಗಾರರಿಗೆ ಎಷ್ಟು ಅವಶ್ಯಕತಾಗಿರುವುದೆಂಬುದು ಇದರಿಂದ ಸ್ಪಷ್ಟವಾಗುವುದು. ಆದರೆ ನಾಟಕ ಸಿನೆಮಾಗಳೆಂದಷ್ಟೇ ರಂಜನೆಯುಂಟಾಗುವುದೆಂದು ಮಾತ್ರ ತಿಳಿಕೊಳ್ಳಲಾಗದು. ಯಾಂತರೆ ಮನಸೇಬಾದೊಂದು ಬಹು ವಿಧವಾದ ಸಂವೇದನೆಗಳ ಸಂಯೋಗ ಸ್ಥಾನ. ಸುಖಸ್ಪರ್ಶವೊಂದು ಯಾವ ಸಂವೇದನೆಯೂ ಅದಕ್ಕೆ ಆಹ್ಲಾದದಿಂದಲೇ ಉಂಟಾಗುವುದು. ಇದರಿಂದ ಅದು ಚೈತನ್ಯ ಮಯವಾಗುವುದು ಹೀಗೆ ಚೈತನ್ಯಮಯವಾಗುವುದರಿಂದಲೇ ಅದಕ್ಕೆ ಮತ್ತೆ ಮತ್ತೆ ಹೊಸ ಹುಮ್ಮಸ್ಸಿನಿಂದ ದುಡಿಯಲು ಪ್ರೋತ್ಸಾಹವುಂಟಾಗುವುದು ಶರೀರದ ನರನಾಡಿಗಳಲ್ಲಿ ಅದರ ಸಂಚಾರವಾಗಿ ಮತ್ತೆ ದುಡಿಮೆ ಒಂದು ಆಟವಂತೆ ಸಾಗುವುದು.

ಮೇಲಾಗಿ ನವ್ಯದು ಯಾಂತ್ರಿಕ ಜಗತ್ತು. ಮನುಷ್ಯನು ಮಾಡುವ ಸಾವಿರಾರು ಸಾಲು ಕೆಲಸವನ್ನು ಇಂದು ಯಂತ್ರಗಳೇ ಮಾಡುವವು. ಉತ್ಪಾದನೆ ಅದರಿಂದ ಎಷ್ಟೋ ಬೆಳೆದಿರುವುದು. ಆದರೆ ಯಂತ್ರಗಳನ್ನು ದುಡಿಸುವ ದುಡಿಮೆ ಮಾತ್ರ ಪ್ರಯಾಸಕರವಿಲ್ಲ ಮತ್ತು ಅವೈಧ್ಯವಾಗಿ ಹಾಗೂ ಅನೋಘವಾದ ಯಂತ್ರಗಳನ್ನು ನಡೆಸುತ್ತಿರುವಾಗ ದುಡಿಮೆಗಾರನೂ ಒಂದು ಯಂತ್ರವೇ ಆಗಿಬಿಡುವನು. ಈ ಯಂತ್ರಿಕತೆಯಿಂದ ಪಾರಾಗಿ ಮಾನವತೆಯು ವರ್ಧಿಸಿಯನ್ನು ಮರಳಿ ಪಡೆಯಬೇಕಾದರೆ, ದುಡಿಮೆಗಾರರಿಗೆ ಮನೋರಂಜನೆಯು ಒಂದು ಅತ್ಯವಶ್ಯಕವಾದ ಸಾಧನೆಯಾಗಿರುವದೇ. ಪ್ರತಿಯೊಬ್ಬ ದುಡಿಮೆಗಾರನಿಗೂ ಅದು ಅವಶ್ಯಕವಾಗಿ ಬೇಕಾಗಿರುವುದೆಂಬುದು ಮಾನವ ಶಾಸ್ತ್ರದ ನಿಶ್ಚಯೋಕ್ತವಾದ ಒಂದು ಸಿದ್ಧಾಂತವು.

ಮನರಂಜನೆಯನ್ನು ಸಾಧಿಸುವ ಸಾಧನಗಳು ಎಷ್ಟು ವಿಧವಾಗಿರುವವು ಸಾಟ್ಯ—ನಾಟಕ—ಸಿನೆಮಾ— ಸಂಗೀತ— ಕುಣಿಕಥರತ್ಯ—ಪದ್ಯಾಟ ಮುಂತಾದವುಗಳನ್ನು ನೋಡುವುದರಿಂದ ನೋಡಿ ತಿಳಿಯಬಹುದಾಗಿ ಮೆನಸ್ಸಿಗೆ ಒಂದು ಬಗೆಯ ಆಹ್ಲಾದವುಂಟಾಗುವುದು. ಮೇಲಾಗಿ ನೋಡುವುದರಲ್ಲಿಯೂ ಕೇಳುವದರಲ್ಲಿಯೂ ತನ್ಮಯರಾಗಿ ವೈಮರೆತಾಗ ಮನಸ್ಸಿನ ಅಂತರ್ಮುಖತೆಯು ಮೇಲೆ ಕಲ್ಪಿಸಿದಾವಿಲಾಸ ನವನವೀನವಾದ ಚಿತ್ರ ನಿರ್ಮಿತಿಯು ಆಕೃತಿಗಳು ತಲೆದೋರುವವೆ. ಅವುಗಳಲ್ಲಿ ನೋಟಕನೇ ನಾಯಕನಾಗಿ ಕಲ್ಪನಾ ಸಾಮ್ರಾಜ್ಯದಲ್ಲಿ ತಾನೇ ನಟಿಸುವ ನವ ನವನಿರ್ಮಿತಿಯು ದೃಶ್ಯವನ್ನು ಕಾಣುವನು. ಸಭೆ, ಕೀರ್ತನೆ, ಕಾವ್ಯ, ಪುರಾಣ ಶ್ರವಣಾದಿಗಳಲ್ಲಿಯೂ, 'ಕವಿಯೆಂದೀಂಟಿಗುವರ್ ನವನವೋತ್ಸವಂ' ಎಂಬ ಕಾವ್ಯೋಕ್ತಿಯಂತೆ ಶ್ರವಣಕನು ರಸಾಸ್ವಾದದಿಂದ ಹೃದಯವಾಗುವನು ವಧಾರಭಾವದಲ್ಲಿ ಮುಳುಗಿ ಬಿಡುವನು. ಅವನ ಚಿತ್ತವೃತ್ತಿಯಲ್ಲಿ ರೂಪಾಂತರವಾಗಿ ಉನ್ನತಿಯು ಉದಾತ್ತತೆಯು ಉಗಮವಾಗುವವು. ಇದು ಒಂದು ರಂಜನೆಯೊಡನೆ ಎಲ್ಲ ವಿಧವಾದ ಚಟುವಟಿಕೆ ತಾನೇ ಭಾಗವಹಿಸುವದು. ಅಂದರೆ ಮನರಂಜನೆಯು ಕಾರ್ಯಕ್ರಮಗಳಲ್ಲಿ ಮನಸ್ಸನ್ನೆಸ್ಟೇ ತೊಡಗಿಸದೆ, ದೇಹವನ್ನು ತೊಡಗಿಸುವದು ಎರಡನೆಯ ವಿಧವಾದ ಸಾಧನೆಯಾಗಿರುವುದು. ಪುಟ್‌ಬಾಲ್ ಪಂದ್ಯಾಟವನ್ನೆ ನೋಡುವುದಾಂದ ಉಂಟಾಗುವ ಆನಂದ ಕ್ಕಿಂತ ತಾನೇ ಅದನ್ನು ಆಡುವದರಿಂದ ಆಗುವ ಆನಂದವು ಹೆಚ್ಚಿನ ಆನಂದವಾಗುವುದು. ಕವ್ಯಚ್ಚಿದ್ದ ಹೆಚ್ಚಿನ ಚಿತ್ರ ಶಕ್ತಿಯನ್ನು ಮಕ್ಕಳು ಆಡಿ ಉಸಯೋಗಿಸಿಕೊಳ್ಳುವಂತೆ, ವಯಸ್ಕರು ಆಟದ ಮೂಲಕ ಆ ಶಕ್ತಿಯ ಹೊಸ ಹುಟ್ಟನ್ನು ಇಳಿವಡಿಸಿಕೊಳ್ಳಬೇಕಾಗಿದೆ.

ಪ್ರಬಲವಾದ ಚಿತ್ರ—ಶಕ್ತಿಯನ್ನು ಬಾಲ್ಯಿಕರಂಗದ ಮೇಲೆ ಆಟಂತದರಲ್ಲಿ ತೊಡಗಿಸಿ ಬಾಲ್ಯಿಗನ್ಯವಾವ ಆಟಪಾಟಗಳನ್ನು ನಿರ್ಮಿಸುವುದೂ ನನ್ನಿನ ಒಂದು ರಂಜಕತೆಯೇ. ವಚನವೂ ಅಭ್ಯಾಸವೂ ಇಂಥ ಉದಾತ್ತವಾದ ಹಾಗು ಸಾತ್ವಿಕವಾದ ರಂಜನೆಯನ್ನು ಒದಗಿಸುವುದು ಅಲ್ಲದೆ ಅವು ಒಂದು ಚಟುವಾಗಿ, ನಿತ್ಯದ ಚಟುವಟಿಗಳು ಅನತರಾಸಿದಾಗಿ ವ್ಯಕ್ತಿಯ ಹಾಗು ಸಮಾಜದ ಉನ್ನತಿಯ ವಾರ್ಗದರ್ಶನವನ್ನೆ ಪ್ರಗತಿಪರವಾಪ ಒಂದು ದೃಷ್ಟಿಯನ್ನೂ ಕೊಡಬಹುದು. ಅಂತು ಆಟ-ಪಾಟ-ನೋಟ ಕೂಟಗಳು ಮನೋರಂಜನೆಯು ವಿವಿಧಾಂಗಳಾಗಿರುವವು.

ಮನರಂಜನೆಯು ವಿಸ್ತಾರವು

ಮುಂಬಯಿ ರಾಜ್ಯಗಳಲ್ಲಿ ದುಡಿಮೆಗಾರರ ಮನರಂಜನೆಗಾಗಿ ನೂರಾರು ವಿವಿಧ ಏರ್ಪಾಡಿನ ಇಷ್ಟಾಕರವೂ ಒಳ್ಳೆ ಮನೋರಂಜಕವಾಗಿದೆ ದುಡಿಮೆಗಾರರಿಗೆ ಮನರಂಜನೆಯು ಸಾಧನಗಳ ಆವಶ್ಯಕತೆ ಎಷ್ಟಿದೆ ಎಂಬ ಮೂಲಸಿ ಶಾಸ್ತ್ರೀಯ ಸಿದ್ಧಾಂತವನ್ನು ಕರ್ತವ್ಯ ನೊದಲು ಮನ್ನಿಸಿಸುವುದು ಕೇಂದ್ರದ ಮಂತ್ರಿಮಂಡಲವು ಮನರಂಜನೆಯುಜೆತೆಗೆ ದ ಡಿಮೆಗಾರರಉನ್ನತಿಯನ್ನು ಸ ದಿಟ್ಟುವದೂ ತನ್ನ ಹೊಣೆಗಾರಿಕೆಯೆಂದುಮನ್ನು ಸಾತು.

ಗಣ್ಯ ರಲ್ಲಿ ಮಂತ್ರಿಗಳಾಗಿದ್ದ ಶ್ರೀಗುಲಜಾಬ್ರಿಲಾಲ ನ-ದಾರವರು ಮೊದಲನೆಯದಾಗಿ ಒಂದು ಚಿಕ್ಕ ಕಲ್ಯಾಣ ಕೇಂದ್ರವನ್ನು ದುಡಿಮೆಗಾರರಿಗೆ ಮುಂಬಯಿಯಲ್ಲಿ ದಿಲಾಯಿ ಲ್ ರೋಡದಲ್ಲಿ ಸ್ಥಾಪಿಸಿದರು. ಇಂದು ಅದು ಒಂದು ಮಹಾ ಕಲ್ಯಾಣ ಕೇಂದ್ರವಾಗಿ ಪರಿಣಮಿಸಿದೆ. ಇಂಥಾ ಷಣ್ಣು ದೊಡ್ಡ ಕೇಂದ್ರಗಳು ಇಡೀಯ ಮುಂಬಯಿ ರಾಜ್ಯದಲ್ಲಿ ಸ್ಥಾನೂರು ಎಕ್ಕಟ್ಟೆರು ಸ್ಥಾಪಿತವಾಗಿವೆ. ಇವುಗಳಲ್ಲಿ ಮೇಲೆ ವಿವೇಚಿಸಿದಂತೆ ಮನರಂಜನೆಯು ವಿವಿಧ ಪ್ರಕಾರಗಳಲ್ಲದೆ ದುಡಿಮೆಗಾರರ ಜೀವನೋನ್ನತಿಯುಕ್ತವಾದ ಹಾಗೂ ಅವರ ಉನ್ನತಿಗೆ ಪಕಾರಯುಕ್ತವಾದ ಎಷ್ಟೋ ಸಲಕರಣಗಳ ಸವಲೋಕನವಾಗಿರುವುದು.

ಈ ಕೇಂದ್ರಗಳಲ್ಲಿ ನಾಲ್ಕು ಪ್ರಕರಣಗಳಿರುವವು. ಅವುಗಳನ್ನು ಅ. ಬ. ಕ. ಡ. ಎಂಗು ನಿಧಾನಿಸಿರುವರು. 'ಅ' ಪ್ರಕಾರದ ಕೇಂದ್ರಗಳು ಉಳಿದವುಗಳಿಗೆಲ್ಲ ಆದರ್ಶಗಳಾಗಿರುವವು. ಅವುಗಳಲ್ಲಿ ಎಲ್ಲ ಬಗೆಯ ಆಟ, ಪಾಠ, ನೋಟ, ಕೂಟಗಳು ವಿಪಾಪಸು ಮಾಡಲಾಗುತ್ತಿದೆ. ಅವುಗಳಿಗಾಗಿ ಸರಕಾರವನೇರೇ ವಿಶಿಷ್ಟ ಪ್ರಕಾರದ ಕಟ್ಟಡವನ್ನು ಕಟ್ಟಿಸಿರುವರು. ನಡುವೆ ಒಂದು ದೊಡ್ಡ ಪಭಾಗ್ರಹ ಅದು ಪಭೋ ಪರ್ಗಗಳ, ಚಡಾರಕೂಟ ಅಥವಾ ಬೇರೆ ಬೇರೆ ಪ್ರಕಾರದ ಕ್ರೀಡಾ ವಿನೋದಗಳಿಗಾಗಿ ಉಸಯೋಗಿಸಲಾಗುವುದು. ಇಂದು ಬದಿಗೆ ಎತ್ತರವಾದ ರಂಗಸ್ಥಳಳಲ್ಲಿ ನಾಟಕ, ಸಿನೇಮ, ಯಕ್ಷಗಾನ, ಬಯಲಾಟಾದಿಗಳ ಪ್ರಯೋಗಗಳನ್ನು ಏರ್ಪಡಿಸಬಹುದು. ಹೆಗಲಿನಲ್ಲಿ ಅದನ್ನು ದುಡಿಮೆಗಾರರ ಮಕ್ಕಳಿಗಾಗಿ ಪೂರ್ವ ಪ್ರಾಥಮಿಕ(Preprimary) ಶಿಕ್ಷಣಕ್ಕಾಗಿ ಉಪಯೋಗಿಸುವರು. ದುಡಿಯುವ ಹೆಣ್ಣು ಮಕ್ಕಳಿಗಾಗಿ ಅವರ ವಕ್ಕಳನ್ನು ತೊಟ್ಟಿಲಲ್ಲಿಟ್ಟು ಅವರ ಯೋಗ್ಯ ಜೋಪಾನ ಮಾಡುವ ಏರ್ಪಾಡು ಇನ್ನೊಂದು ಬದಿಗೆ ಮಾಡಲಾಗುವುದು. ಈ ಮಕ್ಕಳ ಕಟ್ಟಡಕ್ಕೆ ಹೊಂದಿ ಇನ್ನೊಂದು ಕಟ್ಟಡದಲ್ಲಿ ಗರಡಿ ಮನೆ ಇರುವುದು. ಈ ಕಟ್ಟಡಗಳ ಸುತ್ತಲೂ ವಿಶಾಲವಾದ ಆಟದ ಬೈಲು ಇರುವುದು. ಮುಂಬಯಿ ಆಹಿ ವಲಬಾದಾ ಮಹಃ ಸೊಲ್ಲಾಪುರಗಳಲ್ಲಿ ಈ ಆದರ್ಶವಾದ ಕೇಂದ್ರಗಳನ್ನು ಕಾಣಬಹುದು,

ದುಡಿವೆ ಗಾರರಾದರ್ಶಕರ ಗತಿ ವಿಸ್ತಾರ

ಮೇಲಿನ ವಿವೇಚನೆಯಲ್ಲಿ ಒಂದು ವಾತು ಸ್ಪಷ್ಟವಿದೆ. ಅದೆಂದರೆ ಮೇಲೆ ನರ್ದೆಸಿದ ಎಲ್ಲ ಚಟುವಟಿಕೆಗಳೂ ಕಾರ್ಯಕ್ರಮಗಳೂ ಕಾರಖಾನೆಗಳಲ್ಲಿ ದುಡಿಮೆಗಾರರಿಗಷ್ಟೇ ಅನ್ವಯಿಸುವುದು. ಮೇಲಣ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮೂಕ್ಯ ಅಪ್ಪ ನಡೆಯುವವು. ಹಳ್ಳಿಗಳಲ್ಲಿಯ ರೈತರೂ ದುಡಿಮೆಗಾರರಲ್ಲವೇ? ನಮ್ಮದು ಕೃಷಿ ಪ್ರಧಾನವಾದ ದೇಶವೆನ್ನುವರು. ಅಂಡಮೆಲೆ ಹೊಲದಲ್ಲಿ ದುಡಿಯುವ ರೈತರ ಸಂಖ್ಯೆಯು ಹಳ್ಳಿಗಳಲ್ಲಿ ಆಚಾರವಾಗಿರುವುದಲ್ಲವೇ? ಅವರ ದುಡಿಮೆಯು ಮೇಲೆಹೇ ಇತರ ಹಸಿವೆಯು ಸವಸ್ಯೆ ಅವಲಂಬಿಸಿರತಕ್ಕದ್ದು. ಹಸಿನೆ ಹಂಗಿದ ಮೇಲೆ ಎಲ್ಲ ಆಗೆಯು ಏನೋದ ವಿಲಾಸಗಳಿಗೆ ಎಡೆಯಿಟ್ಟಂತು. ಆದರೆ ಅತ್ಯಲ್ಪವ ಟ್ಟಗಾದರೂ ಅನುಕೂಲ ದುಡಿಮೆಗಾರರಿಗೂ ಸಲ್ಲದೇ ಕಾದುದು ನ್ಯಾಯವಾಗಿರುವುದಿಲ್ಲವೇ? ಮೇಲಾಗಿ ಮನರಂಜನೆಯಿಂದ ಕಾರಖಾನೆಯ ದುಡಿಮೆಗಾರರು ನವ ಚೈತನ್ಯವನ್ನು ಪಡೆದು ಹೊಸ ಹುಮ್ಮಸ್ಸಿನಿಂದ ದುಡಿಯಲು ಪುನರ್ವೃತ್ತರಾಗುವಂತೆ ರೈತರಲ್ಲಿಯೂ ನವ ಚೈತನ್ಯವುಂಟಾಗಿ ಹೊಸ ಹುಮ್ಮಸ್ಸಿನಿಂದ ದುಡಿಯಲು ಅವರು ಪ್ರೇರಿತರಾದಾಗಲೇ ಅಧಿಕವಾದ ಆಹಾರಧಾನ್ಯ

ಪೆಳಸಬೇಕೆಂಬ ಯೋಜನೆಯಂತಾ ದೇಶ ದೊಳಗಿನ ಸಹಕಾರಿಸಂಸ್ಥೆಯ ಯೋಜ ನೆಗಳು ಸಫಲವಾಗಬಹುದು. ದೈತ್ಯಶ್ಕಿ ಯು ಅಜ್ಞಾನ ದಾರಿದ್ರ್ಯ ಅನಾರೋಗ್ಯಗ ಳನ್ನು ಹೋಗಲಾಡಿಸಲು ಅನೇಕ ಉಪಾ ಯ ಯೋಜನೆಗಳು ಈಗಾಗಲೇ ಪಡೆಯಲ್ಪ ಟ್ಟಿವೆ. ಅವರ ಮಾರ್ಗದರ್ಶನಕ್ಕಾಗಿ ಕೇಂ ದ್ರಗಳನ್ನು ಸ್ಥಾಪಿಸಿ ಮೇಲೆ ವರ್ಣಿಸಿದಂ ತೆ ನಿಶ್ಚಿತವ್ಯವಸ್ಥಿತವಾದ ಕಾರ್ಯಕ್ರಮವಾ ಗುವುದು ಇವರ ಉನ್ನತಿಗಾಗಿ ಅವಶ್ಯವಿದೆ ಈ ಕಾರ್ಯವನ್ನು ಗ್ರಾಮ ಪಂಚಾಯಿತಿ ಗಳು ಸ್ವಯಂ ಸೇವಕ ತತ್ವದ (Volunt -ary bass) ಅನುಸಾರವಾಗಿ ಕೈಕೊಳ್ಳ ಬೇಕಾಗಿದೆ. ಹಾಗೂ ಸ್ಥಳೆಯೊಂದು ಹಳ್ಳಿ ಗೂ ಒಂದೊಂದು ಪ್ರಾಥಮಿಕ ಶಾಲೆಗಳಿ ರುವಂತೆ ಒಂದೊಂದು ಸಮಾಜೋನ್ನತಿಯ ಕೇಂದ್ರ (social welf-are centre) ವೂ ಸ್ಥಾಪಿತವಾಗುವುದು ಅವಶ್ಯವಿದೆ. ಮೇಲೆ ಸೂಚಿಸಿದಂತೆ ಸ್ವ ಯಂಸೇವಕರೂ ಸಮಾಜ ಸುಧಾರಕರೂ ತಾ ಮಗನಿಸಬೇಕು. ದೇಶೋನ್ನತಿಯ ಈ ರಚನಾತ್ಮಕ ಕಾರ್ಯವು ಒಮ್ಮೆ ಸಾ ವಕಾಶ ಪ್ರಕಾಶಮಾನವಾಯಿತೆಂದರೆ ದೇ ಶದೊಳಗಿನ ಸಾಮಾಜಿಕ, ಆರ್ಥಿಕ, ವೈಕ್ಷ ಣಿಕ ಸಮಸ್ಯೆಗಳನ್ನು ಸುಲಲಿತವಾಗಿ ಬಿಡಿ ಸಲು ಅನುಕೂಲವಾಗುವುದೆಂಬುದರಲ್ಲಿ ಸಂದೇಹವಿಲ್ಲ.

ವಿ ನೆಂ ತಿ.

ಆಪಿಲ ಕೊಡವ ವಿದ್ಯಾನಿಧಿಯಿಂದ ಹಣ ಸಹಾಯ ಪಡೆದು ಈಗ ಯೋಗ್ಯ ಸಂವಾದನೆ ಮಾಡುತ್ತಿರುವವರು ಹಲವ ರಿದ್ದಾರೆ. ಇವರಲ್ಲಿ ಕೆಲವರು ತಾವೆ ಖು ದಾರು ಬರೆದು ಹೋದಿಕೊಂಡ ಸಾಲವ ನ್ನು ಮರುಪಾವತಿ ಮಾಡಿದೆ ನಿಧಿಯ ಸಮ ಮೂರು ಮೂವತ್ತಾರು ಸಾವಿರ ರೂಪಾ ಯಿಗಳು ವಸೂಲಿಗೆ ಉಳಿದಿದೆ. ಸಂಸ್ಥೆ ಯು ಮಾಡಿದ ಈ ಸಹಾಯವನ್ನೆ ಮರೆ ತ್ತು ಎಷ್ಟೇ ಕೇಳಿದರೂ ಇದನ್ನು ಪಾವತಿ ಮಾಡಿರುವದು ಶುಂಠಾ ವಿಷಾದಕರ. ದೇ ಶದ ಬೇರೆ ಬೇರೆ ಕಡೆಗಳಲ್ಲಿ ಈ ಸಂಸ್ಥೆಯ ವಿಷಯದಲ್ಲಿ ಸಂಘ ಸಂಸ್ಥೆಗಳನ್ನು ಸ್ಥಳೀಯ ಪತ್ರಿಕೆಗಳಲ್ಲಿ ಆಗಾಗ ಪ್ರಕಟಿಸಬೇಕೆಂದು ಜನರು ಕೇಳಿ ಕೊಂಡಿದ್ದಾರೆ. ಕರ್ತವ್ಯಕ್ಕೆ ಎಡೆ ಕೊ ಡದೆ ತನ್ನ ಮೇಲಿರುವ ಸಾಲಗಳನ್ನು ಇಂದು ಉದ್ಯೋಗದಲ್ಲಿದ್ದು ಸಂತಾದಿಸಿ ತೀರಿಸಿ ಮಹನೀಯರು ಶೀಘ್ರ ಕಳುಹಿಸಿ ಕೊಟ್ಟು ಜನಪೀತಿಗೆ ಪಾತ್ರರಾಗಬೇಕಾ ಗಿ ಕೇಳಿಕೊಳ್ಳುತ್ತೇನೆ.

6-4 ಕಾರ್ಯದರ್ಶಿ,
ಆಪಿಲ ಕೊಡವ ವಿದ್ಯಾನಿಧಿ.

For Sale.

Vanguard Estate car, imported into India April 1950, Rs. 7500/— or near offer.

Apply ;—Paterson,
Pollibetta.

॥ ಗೊಲ್ಕೊಂಡಾ ಕೋಟೆ ॥

ರಾಷ್ಟ್ರೀಯ ಸಭೆಯ ಮಹಾಧಿವೇಶನ ನಡೆಯುವ ಸ್ಥಳ.

ರಾಷ್ಟ್ರೀಯ ಮಹಾಸಭೆಯ ಮುಂಬರುವ ಅಧಿವೇಶನವು ಐತಿಹಾಸಿಕ ಮಹತ್ವದ ಗೊಲ್ಕೊಂಡಾದಲ್ಲಿ ಜರಗುವುದು. ಇದು, ಹೈದರಾಬಾದ ನಗರದಿಂದ ಏಳು ಮೈಲ ದೂರದಲ್ಲಿದೆ.

ಕಾಂಗ್ರೆಸ್ಸಿನ ಬಹಿರಂಗ ಅಧಿವೇಶನವು ೧೯೫೩ ನೇ ಜನವರಿ ತಾ. ೧೭ ರತ್ಕು ೧೯ ಇವೆರಡು ದಿವಸಗಳಲ್ಲಿ ಜರಗುವುದು.

ಈ ಅಧಿವೇಶನದ ಅಂದಾಜು ವ್ಯಯವು ಸುಮಾರು ಏಳು ಲಕ್ಷ ರೂಪಾಯಿಗ ಳೆಂದು ನಿರ್ಣಯಿಸಲಾಗಿದೆ. ಕಾಂಗ್ರೆ ಸ್ ಸ್ವಾಗತ ಸಮಿತಿಯು ನಿಧಿಗಾಗಿ ವಿನಂ ತಿ ಹೊರಡಿಸಿದೆ.

ಕಾಂಗ್ರೆಸ್ ಅಧಿವೇಶನ ನಡೆಯುವ ಸ್ಥಳವನ್ನು 'ನೆಹರೂನಗರ' ವೆಂದು ಹೆಸ ರಿಸಿರುವರು. ಸುಮಾರ ಮೂರು ಚದರ ಮೈಲು ಸ್ಥಳವು ಗೊಲ್ಕೊಂಡದಲ್ಲಿ ಆರಿಸ ಲ್ಪಟ್ಟಿದೆ. ಕೆಲವು ಕಛೇರಿ ಕಟ್ಟಡಗಳನ್ನು ಡಿಲಿಗೇಟರಿಗೆ ಉಳಕೊಳ್ಳಲು. ಉಪಯೋಗಿಸುವರು. ಮತ್ತೆ 'ಹ್ಯುಟ್ಸ್' (ಬಿಡಾರ) ತಟ್ಟಿಗಳ ಕೊರತೆಗಳ ಸಾಲುಗಳ ರಚನೆ ಯಾಗುವುದು. ವಿಷಯ ನಿರೂಪಕ ಸಮಿತಿ ಮತ್ತು ಆ. ಭಾ. ಕಾ. ಕಮಿಟಿ ಸಭೆಗಳ ಆಗ್ಗೆ ದೊಡ್ಡ ಚಪ್ಪರವು ತಯಾರಾ ಗುತ್ತಿದೆ. ಮೂರು ಸಾವಿರ ಡಿಲಿಗೇಟು ರುಗಳೂ ೫೦೦೦ ಪ್ರೇಕ್ಷಕರೂ (ಎಂದಿನೇ ಶನ್ಸ್) ಬರಬಹುದೆಂದು ಆ ದಾಜು ಮಾಡಿರುವರು. ಇಷ್ಟಲ್ಲದೆ ಇತರ ಕಛೇರಿಕ ರು ಒಂದು ಲಕ್ಷದಷ್ಟು ಜನರು ಹೋಗಬ ಹುದು. ಹೈದರಾಬಾದ ಸರಕಾರವು ಈ ಅಧಿವೇಶನವನ್ನು ಯಶಸ್ವಿಗೊಳಿಸಲು ಸ ಕ್ಕ ಸಹಾಯ ಕೊಡುವದು.

ಗೊಲ್ಕೊಂಡವು ಶಿವಾಜಿಯು ಕಾಲ ದಿಂದಲೂ ಪ್ರಸಿದ್ಧವಾಗಿದೆ. ಆಗಿನ ಕಾಲದಲ್ಲಿ ದಕ್ಷಿಣದಲ್ಲಿ ಶಾಂತಿ ನೆಲಸಿದೆ ಯೆನ್ನುವುದಕ್ಕಿಂತ, ಔರಂಗಜೇಬನ ದಂ ಡಯಾತ್ರೆ ವೇದಲಾದ ಕಿರಿಕುಳಗಳು ತ ಪ್ಪಿರಲಿಲ್ಲವೆನ್ನಬೇಕು. ಶಿವಾಜಿಯು ಮೊ ಗಲ್ ಚಕ್ರವರ್ತಿಯೊಡನೆ ಯುದ್ಧ ಹೂ ಡಿದ್ದನು. ತಂಜಾವೂರಿನ ಅರಸ ವೆಂಕಾ ಜಿಯೊಡನೆಯೂ ಶಿವಾಜಿಯು ಸಮರ ಕೈ ಕೊಂಡಿದ್ದನು.

ಗೊಲ್ಕೊಂಡದಲ್ಲಿ ಕುತುಬ್ ಷಹನು ಆಳುತಿದ್ದನು. ಶಿವಾಜಿಯು ಅವನೊಡ ನೆ ಕೂಡಿ, ಮೊಗಲರಿಗೆದುರಾಗಿ ಯುದ್ಧ ಹೂಡುವ ಮತ್ತು ಸ್ವರಕ್ಷಣೆ ಮಾಡಿಕೊ ಳ್ಳುವ ಒಪ್ಪಂದ ಮಾಡಿದ್ದನು. ಶಿವಾಜಿ ಯನ್ನು ಗೆಲ್ಲಲೂ ಒಲಿಸಿಕೊಳ್ಳಲೂ ಔ ರಂಗಜೇಬನಿಂದಾಗಲಿಲ್ಲ.

ಶಿವಾಜಿಯ ನಂತರ ಅವನ ಪುತ್ರ ಶಂಭಾಜಿಯು, ಗೊಲ್ಕೊಂಡ ವತ್ತು ಬಿ ಜಾಪುರ ಅರಸರ ಸಹಾಯವಿದ್ದರೂ-ತನ್ನ ದುರ್ವ್ಯವಸನಗಳ ನಿಮಿತ್ತ ಮೊಗಲರನ್ನೆದು ರಿಸಿ ಹೆಚ್ಚು ಕಾಲ ನಿಲ್ಲಲಾಗಲಿಲ್ಲ. ಶಂ ಭಾಜಿಯನ್ನು ಸೆರೆ ಹಿಡಿಸಿ ಔರಂಗಜೇಬ ನು ಜನರನ್ನು ಬಹಿರಂಗ ದರ್ಬಾರದಲ್ಲಿ ನಿಲ್ಲಿಸಿ, ಇನ್ನು ಮಹಮ್ಮದೀಯ ಧರ್ಮವ ನ್ನು ಅಂಗೀಕರಿಸಿದರೆ ಜೀವಂತ ಬಿಡು ವೆನೆಂದು ಎನ್ನಲು, ವೀರ ಶಿವಾಜಿಯ ಪುತ್ರ ನ, ತನ್ನ ದುರ್ವ್ಯವಸನಗಳಿಗಾ ಮಂತಿಸಿದ ಸಿಳಿಗೊಂಡು-ನಿನ್ನ ಮಗಳನ್ನು ಲಗ್ನ ಮಾಡಿ ಕೊಡುವಿಯಾದರೆ ಆಲೋಚಿಸೋಣ' ಎಂದನು. ಸ್ವಲ್ಪವೂ ಭೀತಿಯಾದ ಸಭೆಯು ನುಂಡಿ, ಔರಂಗಜೇಬನು ರೋಷದಿಂದ ಕೆಂಪಡರಿದುದನ್ನು, ಶಂಭು ಬಿಡಿಸಿ ಆಜ್ಞೆಗಳಿಗೆ ಕಾದು ಕಬ್ಬಿಣದ ಸಲಾಕೆಗಳನ್ನು ಜಾಚ್ಚಿ ಸುದಿಸಿದನು. ಸ್ವಲ್ಪಲಂಬ ದ್ದನಾಗಿದ್ದ ಶಂಭಾಜಿಯು ಒಂದು ಕಡು ಸುಟ್ಟು ಜೋಗ್ತಲೇ, ಎಷ್ಟೊಂದರಿಂದ ಒಂದು ಬಟಿಕ ನೀರನ್ನು ಇಳಿಸದೆ ಗ ರ್ವದಿಂದ 'ಸಿಂಹದನ್ನ ಗೂಡಿನಲ್ಲಿಟ್ಟೆ ಳಿಣಕುವ ಯತ್ನ! ನನ್ನ ಸಂಕೋಲೆಗಳ ನ್ನು ಕಿತ್ತು ಬಿಟ್ಟು ಯುದ್ಧಕ್ಕೆ ಬಾ-' ಎಂದು ಜರಿದನು. ಶಂಭಾಜಿಯು ಎಂಡ ನೇ ಕಣ್ಣಿಗೂ ಕಂದಿ ಅಲಾ ಹೊಯ್ಕ ತು. ಶಂಭಾಜಿಯು ಭಯಂಕರಯುದ್ಧ ಪ್ರಲೋ, ತೆರೆಯಮರೆಪಟ್ಟ ನಿಂತ ಇವೆಲ್ಲ ವನ್ನೂ ಕಂಡ ಪದಾಜಿಯು ಓಡಿ ಬಂದು ಶಂಭಾಜಿಯನ್ನು ಹಿಡಿದಳೆಂದೂ ಔರಂಗಜೇಬನು ಆವಳನ್ನು ಒಳಗೆಳಸಿ ಒ ಯ್ದನೆಂದೂ, ಶಂಭಾಜಿಯು ನಾಲಿಗೆ ಕಡಿ ಯ, ರುಂಡ ಹಾರಿಸುವ ಆಜ್ಞೆಯಿತ್ತನೆಂದೂ ಇತಿಹಾಸಕಾರರು ಬೇಳ ಪರು.

ಅದಿರಲಿ ಈ ಕಡೆಯದು ೧೬೮೯ ರಲ್ಲಿ; ಅಂದರೆ ೪೬೩ ವರ್ಷಗಳ ಹಿಂದೆ. ಅದ ರೂ, ಶಿವಾಜಿಯ ವ ನೈತನದ ಆದರ್ಶಕ ವು ಪ್ರತಿಯೋರ್ವ ಭಾರತೀಯನ ಹೃದ ಯದಲ್ಲಿ ನೋವನ್ನುಂಟುಮಾಡುವುದು.

ಗೊಲ್ಕೊಂಡದಲ್ಲಿ ನೋಡುವಂಥದ್ದು ವಿಶೇಷವಿರುವುದಿಲ್ಲ. ಗುಡ್ಡದ ಮೇಲಿನ ಗೊಲ್ಕೊಂಡ ಕೋಟೆ ಮತ್ತು ಕೆಳ ಗಡಲಲ್ಲಿ ನೋಗಲಿ ಸ್ಥಳಗಳು ಕೊಟೆಯನ್ನು ಪ್ರವೇಶಿಸಿದ ದ್ವಾರ ವು 'ಫತ್ತೇದರ್ವಾಜ' ಎಂದು ಕರೆಯಲ್ಪಟ್ಟಿ ದೆ. ಗಡಲಿಂದ ೧೬೦ ಮೆಟ್ಟಿಲುಗಳ ವರೆಗೆ ೬೫ ಕ ಕಾರ್ಯಾಚರಿಸಲು ಅವಕಾಶ ಗೋರಿಗಳು ಕೋಟೆಯ ಹೊರಗಿವೆ.

ಸದ್ಯಸಮಯ ನಿರೀಕ್ಷಿತ ಪ್ರಭುತ್ವದ ದಿನಗಳಲ್ಲಿ ಈ ಗೊಲ್ಕೊಂಡಾದಲ್ಲಿ ರಾಜ ಕೀಯ ಚಳವಳಿಗಾರರು ಕಾರಾಗೃಹವಾ ಸಿಗಳಾಗಿ ಬಂಧಿಸಲ್ಪಟ್ಟಿದ್ದರು. ಈ ಸ್ಥಳ ದಲ್ಲೇ ಇಂದು ರಾಷ್ಟ್ರಸಭೆಯು ಮಹಾಧಿ ವೇಶನವ ನೆಸಿಯುವುದು ಯುಕ್ತಾಯೋಗ್ಯ ವಿದೆ.

ಪ್ರಭಾತ.

ಶ್ರೀ ಟಿ. ಎಸ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್ಲ್,
ಮಡಿಕೇರಿ.

ರಿಜಿಸ್ಟರ್ಡ್ ಸಹಕಾರಿ ಸಂಸ್ಥೆಯಾಗಿ ಕಾರ್ಯ ಪ್ರಾರಂಭ ದಿನಸ್ಕರಣೆ (1)ಪಿಂಗ್ ಸಹಕಾರಿಯಾಗಿ

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾತ ಶೇರು ಮೊಬಲಗು	ರೂ.	2,09,000
ನ್ಯೂನಿನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಛಾಲ್ತಿ ಠೇವಣಾತಿ ಲೇಕ್ಕ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1-1-53ರಿಂದ)	,,	1-8-0
ನಿಶ್ಚಿತ (Fixed) 3ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-8-0
10 ವರ್ಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಜನ್ಮ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಶೀಘ್ರ ಯಾ ಸಾಧ್ಯತೆಗಳ ರಿಸ್ಕ್ಯಾಂಟು ಮಾಡಲ್ಪಡುವುದು. ಟ್ರಾನ್ಸ್ ವಾರ್ಡ್ಸ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿ ಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಮ್ಯಾನೇಜರ್,

ಕೆ. ಪಿ. ಅಪ್ಪಯ್ಯ,
ಪ್ರೆಸಿಡೆಂಟ್ ಮತ್ತು ಮ್ಯಾನೇಜ್.

ಕೊಡಗು

ತಾ. ೧೯-೧೨-೧೯೫೬ನೇ ಬುಧವಾರ

ಭಾಷಾವಾರು ಪ್ರಾಂತ ರಚನೆ.

